ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 3 ಸೋಮವಾರ 2022

₹4

ಸಂಪುಟ: 43 | ಸಂಚಿಕೆ: 168 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528. ಜಾಹೀರಾತು: 2496522, 2496523

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com

ಹೆಬ್ಬಾಳಿನ ವೈಶಿಷ್ಟ್ಯ, ಪರಂಪರೆ ಪ್ರತೀಕವಾಗಿ ನಡೆದ ದಸರಾ ಉತ್ಸವಕ್ಕೆ ಸಂಭ್ರಮದ ತೆರೆ



ದಸರಾ ಮಹೋತ್ಸವದ ಲಲಿತ ಕಲೆ ಮತ್ತು ಕರಕುಶಲ ಉಪಸಮಿತಿ ಮೈಸೂರಿನ ಕಲಾಮಂದಿರದಲ್ಲಿ ಏರ್ಪಡಿಸಿದ್ದ ಖ್ಯಾತ ವ್ಯಂಗ್ಯ ಚಿತ್ರ ಕಲಾವಿದ, ಫುಲ್ ಬ್ರೈಟರ್ ಎಂ.ವಿ.ನಾಗೇಂದ್ರ ಬಾಬು ರಚಿಸಿರುವ ವ್ಯಂಗ್ಯ ಚಿತ್ರಗಳ ಪ್ರದರ್ಶನವನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ವೀಕ್ಷಿಸಿದರು. ಚಿತ್ರದಲ್ಲಿ ಬಿಜೆಪಿ ನಗರ ಅಧ್ಯಕ್ಷ ಶ್ರೀವತ್ಸ ಹಾಗೂ ಶಾಸಕ ಎಲ್.ನಾಗೇಂದ್ರ, ಹಿಮಾಲಯ ಫೌಂಡೇಶನ್ ಅಧ್ಯಕ್ಷ ಅನಂತು ಅವರುಗಳನ್ನು ಕಾಣಬಹುದು.



ಜಯಕರ್ನಾಟಕ ಸಂಘಟನೆಯ ವತಿಯಿಂದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರ 153ನೇ ಜನ್ಮದಿನೋತ್ಸವದ ಅಂಗವಾಗಿ ಮೈಸೂರಿನ ನ್ಯಾಯಾಲಯದ ಮುಂಭಾಗವಿರುವ ಗಾಂಧಿ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಯಿತು. ನಂತರ ನ್ಯಾಯಾಲಯದ ಮುಂಭಾಗವಿರುವ ಮನುವನ ಉದ್ಯಾನದಲ್ಲಿ ಸ್ವಚ್ಛತಾ ಅಭಿಯಾನ ನಡೆಸಲಾಯಿತು. ಯುವ ಮುಖಂಡ ಅಜಯ್‌ಶಾಸ್ತ್ರಿ, ಜಯಕರ್ನಾಟಕ ಸಂಘಟನೆ ಜಿಲ್ಲಾಧ್ಯಕ್ಷ ಶ್ರೀಧರ್ ನಾಯಕ, ರಾಜ್ಯ ಸಂಘಟನಾ ಕಾರ್ಯದರ್ಶಿ ವಿಜಯಾಗೌಡ, ಬಿಜೆಪಿ ಮುಖಂಡ ಉಮೇಶ್ ಕುಮಾರ್, ಯುವ ಮುಖಂಡ ಅಜಯ್ ಶಾಸ್ತ್ರಿ, ಸಚಿನ್ ಪವಾರ್, ಮಹಿಳಾ ಮುಖಂಡರಾದ ಸಂಧ್ಯಾ, ಗೌರಿ, ರಂಗಸ್ವಾಮಿ, ಸುಬ್ರಹ್ಮಣ್ಯ ಲಿಂಗರಾಜು, ಚಂದನ್, ಕಿರಣ್, ಲಂಕೇಶ್, ಸಚಿನ್ ಮುಂತಾದವರು ಇದ್ದರು.

ಭಾರತೀಯ ಜೀವವಿಮೆ ಪ್ರತಿನಿಧಿಗಳ ಧರಣಿ



ಮೈಸೂರು, ಅ.2– ನಗರದ ಬನ್ನಿಮಂಟಪದಲ್ಲಿರುವ ಭಾರತೀಯ ಜೀವವಿಮೆ ಕಚೇರಿ ಶಾಖೆ–2ರ ಮುಂದೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಪ್ರತಿನಿಧಿಗಳು ವಹಿವಾಟುರಹಿತ ಧರಣಿಯನ್ನು ಶುಕ್ರವಾರ ನಡೆಸಿದರು.

ಪಾಲಿಸಿದಾರರ ಬೋನಸ್ ಹೆಚ್ಚಳ, ಗ್ರಾಚ್ಯುಟಿ ವಹಿವಾಟು ಶುಲ್ಕ ಹೆಚ್ಚಳ, ಸಾಲ ಮತ್ತು ಪ್ರೀಮಿಯಂ ವಿಳಂಬದ ಶುಲ್ಕದ ಬಡ್ಡಿ ದರ ಕಡಿಮೆ ಮಾಡುವುದು, ಐದು ವರ್ಷ ಮೇಲ್ಪಟ್ಟ ರದ್ದಾದ ಪಾಲಿಸಿಗಳನ್ನು ಪುನಶ್ಚೇತನಗೊಳಿಸುವುದು, ಪ್ರತಿನಿಧಿಗಳ ಮಕ್ಕಳಿಗೆ ಶಿಕ್ಷಣ ಸಾಲ ನೀಡುವುದು, ಎಲ್ಲ ದೃಢೀಕೃತ ಪ್ರತಿನಿಧಿಗಳಿಗೆ ಗ್ರೂಪ್ ಮೆಡಿ ಕ್ಲೈಮ್ ನೀಡುವುದು, ಆನ್‌ಲೈನ್ ನೀಡುತ್ತಿರುವ ಪಾಲಿಸಿಗಳಿಗೆ ರಿಯಾಯಿತಿ ನೀಡುವುದನ್ನು ರದ್ದುಗೊಳಿಸುವಂತೆ ಒತ್ತಾಯಿಸಿ ಮತ್ತು ವಿವಿಧ ಬೇಡಿಕೆಗಳ ಬಗ್ಗೆ ಆಗ್ರಹಿಸಿ ಬೆಳಗ್ಗೆ 10ರಿಂದ ಸಂಜೆ 5.30ರವರೆಗೆ ಧರಣಿ ನಡೆಸಲಾಯಿತು. ಧರಣಿ ವೇಳೆ ಸಂಘದ ಅಧ್ಯಕ್ಷ ಕೆ.ಶಿವಕುಮಾರ್, ಕಾರ್ಯದರ್ಶಿ ಎಂ.ಎನ್.ಪರಮೇಶ್, ಮೈಸೂರು ಯೂನಿಯನ್ ಅಸೋಸಿಯೇಷನ್ ಜನರಲ್ ಸೆಕ್ರೆಟರಿ ಡಿ.ಕುಮಾರಸ್ವಾಮಿ, ಖಜಾಂಚಿ ದೇವಯ್ಯ ಸೇರಿದಂತೆ ಸಂಘದ ಎಲ್ಲ ನಿರ್ದೇಶಕರು ಮತ್ತು ಸದಸ್ಯರು ಉಪಸ್ಥಿತರಿದ್ದರು.





ಗುರು ರಾಘವೇಂದ್ರಸ್ವಾಮಿಯವರ ಚರಿತ್ರೆ, ಆಧ್ಯಾತ್ಮಿಕತೆ, ಪವಾಡ ಕುರಿತಂತೆ ಬೊಂಬೆ ಜೋಡಿಸಿರುವ ಮೈಸೂರಿನ ಹೆಬ್ಬಾಳಿನ ಮಹದೇಶ್ವರನಗರದ 'ಇಂಚರ' ನಿವಾಸದಲ್ಲಿ ಕೆ.ವಿ.ಶ್ರೀಧರ್ ಹಾಗೂ ಮತ್ತಿತರರು ಇರುವುದನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಅ.2(ಪಿಎಂ)– ಹೆಬ್ಬಾಳು ಗ್ರಾಮದ ವೈಶಿಷ್ಟ್ಯದ ಹಿನ್ನೆಲೆ ಮತ್ತು ಪರಂಪರೆ ಪ್ರತೀಕವಾಗಿ ಸಾಂಸ್ಕೃತಿಕ ಸಡಗರ, ಆಟೋಟ ಸೇರಿದಂತೆ ವೈವಿಧ್ಯಮಯ ಕಾರ್ಯಕ್ರಮಗಳೊಂದಿಗೆ ಜರುಗಿದ ಹೆಬ್ಬಾಳು ದಸರಾ ಉತ್ಸವಕ್ಕೆ ಭಾನುವಾರ ಸಂಭ್ರಮದ ತೆರೆ ಬಿದ್ದಿತು.

ಇದೇ ಪ್ರಥಮ ಬಾರಿಗೆ ಆಯೋಜಿಸಿರುವ ಈ ದಸರಾದ ಪ್ರಯುಕ್ತ ಏರ್ಪಡಿಸಿರುವ ಮನೆ ಮನೆ ಬೊಂಬೆ ಪ್ರದರ್ಶನ ಸ್ಪರ್ಧೆಯಲ್ಲಿ ಜಂಬೂಸವಾರಿ ಮೆರವಣಿಗೆಯ ದೃಶ್ಯ ಮೂಡಿಬಂದಿತ್ತು.

ಹೆಬ್ಬಾಳಿನ ಮುಖಂಡ, ಜೆಡಿಎಸ್ ನಾಯಕ, ಪಾಲಿಕೆ ಸದಸ್ಯ ಕೆ.ವಿ.ಶ್ರೀಧರ್ ಸಾರಥ್ಯದ ನವಭಾರತ ನಿರ್ಮಾಣ್ ಸೇವಾ ಟ್ರಸ್ಟ್ ವತಿಯಿಂದ ಇಂತಹ ಬೃಹತ್ ಉತ್ಸವ ಹಮ್ಮಿಕೊಳ್ಳಲಾಗಿತ್ತು. ಮನೆ ಮನೆ ಗೊಂಬೆ ಪ್ರದರ್ಶನ ಇಂದಿನ ಆಕರ್ಷಕ ಕಾರ್ಯಕ್ರಮಗಳಲ್ಲಿ ಒಂದಾಗಿತ್ತು. ಇದರೊಂದಿಗೆ 'ಭ್ರಷ್ಟಮುಕ್ತ ಭಾರತ ನಿರ್ಮಾಣ' ಕುರಿತು ಅರಿವು ಮೂಡಿಸುವ ಸೈಕಲ್ ಜಾಥಾ ಗಮನ ಸೆಳೆಯಿತು. ಮೈಸೂರಿನ ವಿಜಯನಗರದ ರೈಲ್ವೆ ಲೇಔಟ್ ಮೈದಾನದಲ್ಲಿ ಪೌರಕಾರ್ಮಿಕರ ಕ್ರೀಡಾಕೂಟ, ಮ್ಯೂಸಿಕಲ್ ಚೇರ್ ಮೊದಲಾದ ಕಾರ್ಯಕ್ರಮಗಳು ನಡೆಯುವ ಮೂಲಕ 2 ದಿನಗಳ ಉತ್ಸವ ಸಮಾಪ್ತಿಗೊಂಡಿತು. ಭಾರತೀಯ ಸಂಸ್ಕೃತಿಯ ಚರಿತ್ರೆ, ಪುರಾಣ ಹಾಗೂ ನೈತಿಕ ಮೌಲ್ಯಗಳನ್ನು ಬಿಂಬಿಸುವ ರೀತಿಯಲ್ಲಿ ಹೆಬ್ಬಾಳು 3ನೇ ಹಂತ, ಮಯೂರ ವೃತ್ತ, ರೈಲ್ವೆ ಬಡಾವಣೆ, ವಿಜಯನಗರ ಭಾಗ ಸೇರಿದಂತೆ 10 ಮನೆಗಳಲ್ಲಿ ಹೆಬ್ಬಾಳು ದಸರಾ ಉತ್ಸವದ ಮನೆ ಮನೆ ಗೊಂಬೆ ಪ್ರದರ್ಶನ ಸ್ಪರ್ಧೆಗಾಗಿ ಬೊಂಬೆಗಳನ್ನು ಜೋಡಿಸಲಾಗಿತ್ತು. 'ದಸರಾ' ಮುಖ್ಯ ವಿಷಯವಾಗಿ ಉಳಿದಂತೆ ಬೇರೆ ವಿಷಯಗಳನ್ನು ಆಧರಿಸಿ ಬೊಂಬೆ ಕೂರಿಸಲು ಅವಕಾಶ ನೀಡಲಾಗಿದೆ. ಅದರಂತೆ ಈ ಎಲ್ಲಾ ಮನೆಗಳಲ್ಲೂ ಬೊಂಬೆ ಜೋಡಿಸಿ, ಆಕರ್ಷಣೆಗಾಗಿ ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು.

ಗುರುರಾಯರ ಪ್ರತಿಬಿಂಬ: 'ದಸರಾ'ಗೆ ಪೂರಕವಾಗಿ ಬೊಂಬೆ ಜೋಡಿಸುವ ಜೊತೆಗೆ ಹಲವು ದೇವ–ದೇವತೆಯರು, ಮಹನೀಯರ ಆದರ್ಶ ಹಾಗೂ ಕೊಡುಗೆ ಪ್ರತಿಬಿಂಬ ಇಲ್ಲಿ ಅನಾವರಣಗೊಂಡಿತ್ತು. ಈ ಪೈಕಿ ಮಹದೇಶ್ವರನಗರದ 'ಇಂಚರ' ನಿವಾಸದಲ್ಲಿ ಬೊಂಬೆ ಜೋಡಣೆ ಅತ್ಯಂತ ಆಕರ್ಷಕವಾಗಿತ್ತು. ದಸರಾ ಹಿನ್ನೆಲೆಯ ಬೊಂಬೆಗಳ ಜೊತೆಗೆ ಗುರು ರಾಯರ ಕುರಿತ ಚರಿತ್ರೆಯನ್ನು ರಾಘವೇಂದ್ರಸ್ವಾಮಿಗಳ ಬಗೆ ಬಗೆಯ ಬೊಂಬೆಗಳ ಮೂಲಕ ಸೃಷ್ಟಿಸಲಾಗಿದೆ. ಅವರ ಆಧ್ಯಾತ್ಮಿಕ ಸಾಧನೆ, ಪವಾಡ ಹಾಗೂ ಸಮಾಜಕ್ಕೆ ಅವರ ಕೊಡುಗೆ ಪ್ರತಿಬಿಂಬಿಸುವಂತೆ ಬೊಂಬೆ ಜೋಡಿಸಿ, ಅಕ್ಷರದಲ್ಲಿ ಸಂಕ್ಷಿಪ್ತ ಮಾಹಿತಿ ಒದಗಿಸಲಾಗಿದೆ. ಇಲ್ಲಿ ಕೆಲ ದಿನಗಳವರೆಗೆ ಈ ಪ್ರದರ್ಶನ ಇರಲಿದೆ.

ಸೈಕಲ್ ಜಾಥಾ: ಭಾನುವಾರ ಬೆಳಗ್ಗೆ 'ಭ್ರಷ್ಟಮುಕ್ತ ಮತದಾನ ಹಾಗೂ ಪರಿಸರ ಉಳಿವಿಗಾಗಿ ನವ ಭಾರತ' ಶೀರ್ಷಿಕೆಯಡಿ ಸೈಕಲ್ ಜಾಥಾ ಹಮ್ಮಿಕೊಳ್ಳಲಾಗಿತ್ತು. ಸೈಕಲ್ ಜಾಥಾಗೆ ಚಾಲನೆ ನೀಡಿದ ಕೆ.ವಿ.ಶ್ರೀಧರ್ ಮಾತನಾಡಿ, ಭ್ರಷ್ಟ ಮುಕ್ತ ಭಾರತ ಕುರಿತ ಅರಿವು ಮತದಾನ ಹಂತದಲ್ಲಿ ಮೂಡಬೇಕಿದೆ. ದೇಶದಲ್ಲಿ ಭ್ರಷ್ಟಾಚಾರ ಮುಕ್ತಗೊಳಿಸಲು ಇದೇ ಮೊದಲ ಹಂತ ಎಂದು ತಿಳಿಸಿದರು.

ಹಣದ ಆಮಿಷಕ್ಕೆ ಮತ ಮಾರಿಕೊಳ್ಳುವುದು ಸೇರಿದಂತೆ ಜಾತಿ–ಧರ್ಮದ ಆಧಾರದಲ್ಲಿ ಮತದಾನ ಮಾಡಬಾರದು. ಪ್ರಾಮಾಣಿಕ ಜನಪ್ರತಿನಿಧಿ ಆಯ್ಕೆ ಜವಾಬ್ದಾರಿಯನ್ನು ಮತದಾರರು ಸಮರ್ಥವಾಗಿ ನಿಭಾಯಿಸಬೇಕು. ಪ್ರಾಮಾಣಿಕ ಮತದಾನದಲ್ಲಿ ಪಾಲ್ಗೊಳ್ಳುವುದು ದೇಶವನ್ನು ಭ್ರಷ್ಟಮುಕ್ತಗೊಳಿಸುವಲ್ಲಿ ಮೊದಲ ಮೆಟ್ಟಿಲು. ಇದರೊಟ್ಟಿಗೆ ನಮ್ಮ ಪ್ರಕೃತಿಯ ಸಂರಕ್ಷಣೆಯ ಮಹತ್ವ ಅರಿಯಬೇಕಿದೆ ಎಂದು ಹೇಳಿದರು.

ವಿಜಯನಗರ ರೈಲ್ವೆ ಲೇಔಟ್ ಮೈದಾನದಿಂದ ಆರಂಭವಾದ ಸೈಕಲ್ ಜಾಥಾವು, ಚಂದ್ರಕಲಾ ಆಸ್ಪತ್ರೆ, ಆದಿಪಂಪ ರಸ್ತೆ, ಚೆಲುವಾಂಬ ಪಾರ್ಕ್, ದಾಸಪ್ಪ ವೃತ್ತ, ರೈಲ್ವೆ ನಿಲ್ದಾಣ, ಕೆಆರ್ ಆಸ್ಪತ್ರೆ, ಅಶೋಕ ರಸ್ತೆ, ದೊಡ್ಡ ಗಡಿಯಾರ, ಮೈಸೂರು ಅರಮನೆ, ಕ್ರಾಫರ್ಡ್ ಭವನ, ಕುಕ್ಕರಹಳ್ಳಿಕೆರೆ ರಸ್ತೆ, ಕಾಳಿದಾಸ ರಸ್ತೆ ಮೂಲಕ ಮರಳಿ ವಿಜಯನಗರದ ರೈಲ್ವೆ ಲೇಔಟ್ ಮೈದಾನದಲ್ಲಿ ಅಂತ್ಯಗೊಂಡಿತು.

ಶೀಘ್ರದಲ್ಲಿ ಬಹುಮಾನ ವಿತರಣೆ

ಮಳೆಯ ಕಾರಣ ಇಂದು ಸಂಜೆ ನಡೆಯಬೇಕಿದ್ದ ಖ್ಯಾತ ಗಾಯಕ, ರ್‍ಯಾಪರ್, ನಟ ಅಲೋಕ್ ಆರ್.ಬಾಬು ಅವರ ಸಂಗೀತ ಕಾರ್ಯಕ್ರಮ ಮುಂದೂಡಲಾಗಿದೆ. ಈ ಕಾರ್ಯಕ್ರಮವನ್ನು ನವೆಂಬರ್‌ನಲ್ಲಿ ನಡೆಸಲು ಉದ್ದೇಶಿಸಲಾಗಿದೆ. ಹೆಬ್ಬಾಳು ದಸರಾ ಉತ್ಸವ ಅಂಗವಾಗಿ ನಡೆದ ವಿವಿಧ ಸ್ಪರ್ಧೆಗಳ ಬಹುಮಾನ ವಿತರಣಾ ಕಾರ್ಯಕ್ರಮ ಶೀಘ್ರದಲ್ಲಿ ನಡೆಯಲಿದೆ. **–ಕೆ.ವಿ.ಶ್ರೀಧರ್, ನಗರಪಾಲಿಕೆ ಸದಸ್ಯ**



ಉದ್ಯಮಿ ನಾಗೇಶ್ ಅವರ APN ಪ್ರಾಪರ್ಟೀಸ್ ನೂತನ ಕಚೇರಿ ಉದ್ಘಾಟನೆಗೆ ಮೈಸೂರಿಗೆ ಆಗಮಿಸಿದ ರಾಜ್ಯಸಭಾ ಸದಸ್ಯರು ಚಲನಚಿತ್ರ ನಟರೂ ಆದ ಜಗ್ಗೇಶ್, ಪರಿಮಳಾ ಜಗ್ಗೇಶ್ ಅವರನ್ನು ಕಲಾವಿದ ಹುಯಿಲಾಳು ರಾಮಸ್ವಾಮಿ ಅಭಿನಂದಿಸಿದರು. ಈ ವೇಳೆ ಹರೀಶ್‌ರೆಡ್ಡಿ, ಸುನಿಲ್ ಇನ್ನಿತರರು ಉಪಸ್ಥಿತರಿದ್ದರು.

ವಿಶ್ವ ಹೃದಯ ದಿನಾಚರಣೆ ಅಂಗವಾಗಿ ಉಚಿತ ಹೃದ್ರೋಗ ತಪಾಸಣೆ ಶಿಬಿರ

ಮೈಸೂರು, ಅ.2–ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆಯಲ್ಲಿ ವಿಶ್ವ ಹೃದಯ ದಿನಾಚರಣೆ ಪ್ರಯುಕ್ತ ಅ.10ರವರೆವಿಗೆ ಉಚಿತ ಹೃದಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ. ಹೃದಯ ಶಸ್ತ್ರ ಚಿಕಿತ್ಸಾ ತಜ್ಞ ವೈದ್ಯರಾದ ಡಾ.ಆದಿತ್ಯ ಉಡುಪ ಹಾಗೂ ಡಾ. ರವಿಕುಮಾರ್ ನೇತೃತ್ವದಲ್ಲಿ ಈ ಶಿಬಿರವನ್ನು ಆಯೋಜಿಸಲಾಗಿದೆ. ಶಿಬಿರದಲ್ಲಿ ಉಚಿತ ಸಮಾಲೋಚನೆ ಇದ್ದು, ವೈದ್ಯರು ಸೂಚಿಸುವ ಇ.ಸಿ.ಜಿ, ಲಿಪಿಡ್ ಪ್ರೊಫೈಲ್, ಆರ್.ಬಿ.ಎಸ್., ಎಕೋ ಸ್ಕ್ರೀನಿಂಗ್, ಟಿ.ಎಂ.ಟಿ ಪರೀಕ್ಷೆಗಳಿಗೆ ವಿಶೇಷ ಪ್ಯಾಕೇಜ್ ಲಭ್ಯವಿರುತ್ತದೆ. ಹೃದಯದ ಸಮಸ್ಯೆಗಳಿರುವವರು ಕೂಡಲೇ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ 0821–2533600, 9986399862 ಸಂಪರ್ಕಿಸಬಹುದಾಗಿದೆ ಎಂದು ಆಸ್ಪತ್ರೆ ಪ್ರಕಟಣೆ ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...

ದಸರಾ ಕಾರ್ಯಕ್ರಮಗಳು



■ **ಯೋಗ ಚಾರಣ:** ಉದ್ಘಾಟನೆ: ಶಾಸಕ ಜಿ.ಟಿ.ದೇವೇಗೌಡ. ಸ್ಥಳ: ಚಾಮುಂಡಿಬೆಟ್ಟದ ತಪ್ಪಲು, ಚಾಮುಂಡಿಬೆಟ್ಟ ದೇವಸ್ಥಾನದ ಆವರಣ. ಬೆಳಗ್ಗೆ 6 ಗಂಟೆಗೆ.

■ **ಪ್ರಧಾನ ಕವಿಗೋಷ್ಠಿ:** ಉದ್ಘಾಟನೆ: ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಚಂದ್ರಶೇಖರ ಕಂಬಾರ. ಸ್ಥಳ: ಸೆನೆಟ್ ಭವನ, ಮಾನಸ ಗಂಗೋತ್ರಿ, ಬೆಳಗ್ಗೆ 10.30ಕ್ಕೆ.

ಮೈಸೂರು ಅರಮನೆ

ಸಂಜೆ 5.30 ರಿಂದ: ವಿಶೇಷ ಚೇತನ ಕಲಾವಿದರಿಂದ ನೃತ್ಯ ಮತ್ತು ಸಂಗೀತ ಸಮ್ಮಿಲನ.
ಸಂಜೆ 6 ರಿಂದ: ಪುಣೆಯ ಶ್ರೀಮತಿ ನಂದಿನಿರಾವ್ ಗುಜರ್ ಅವರಿಂದ ಕಲರ್ಸ್ ಆಫ್ ಇಂಡಿಯಾ (ಸಂಗೀತ ಕಾರ್ಯಕ್ರಮ).
ಸಂಜೆ 7 ರಿಂದ: ಮುಂಬೈನ ಭಜನ್ ಸಾಮ್ರಾಟ್ ಪದ್ಮಶ್ರೀ ಅನೂಪ್ ಜಿಲೋಟ್ ಅವರಿಂದ ಗಝಲ್

ಜಗನ್ಮೋಹನ ಅರಮನೆ

ಸಂಜೆ 6 ರಿಂದ : ಮೈಸೂರಿನ ಎನ್.ಶಾಸ್ತ್ರಿ ಅವರಿಂದ ಮ್ಯಾಂಡೊಲಿನ್ ವಾದನ.
ಸಂಜೆ 6.45 ರಿಂದ : ಬೆಂಗಳೂರಿನ ವಿನಯ್ ಶರ್ಮಾ ಅವರಿಂದ ಕರ್ನಾಟಕ ಸಂಗೀತ.
ಸಂಜೆ 7.30 ರಿಂದ : ಬೆಂಗಳೂರಿನ ಡಾ. ದತ್ತಾತ್ರೇಯ ಅರಳಿಕಟ್ಟೆ ಅವರಿಂದ ಬೊಂಬೆ ಪ್ರದರ್ಶನ.
ರಾತ್ರಿ 8.30 ರಿಂದ : ಕೊಡಗಿನ ಅವಳಿ ಸಹೋದರರಾದ ಹೇರಂಬ ಮತ್ತು ಹೇಮಂತ್ ಅವರಿಂದ ಕೊಳಲು ವಾದನ.

ಕಲಾಮಂದಿರ

ಸಂಜೆ 6 ರಿಂದ: ಸ್ಥಳೀಯ ಕಲಾವಿದರಿಂದ ಸೋಬಾನೆ ಪದ.
ಸಂಜೆ 6.45 ರಿಂದ: ಮೈಸೂರಿನ ಸ್ವರ್ಣಲತಾ ನಾಗರಾಜ್ ಅವರಿಂದ ಒಡೆಯರ್ ಕೃತಿಗಳು.
ಸಂಜೆ 7.30 ರಿಂದ: ಬೆಂಗಳೂರಿನ ರಾಜೀವ್ ಅಗಲಿ ಅವರಿಂದ ಸುಗಮ ಸಂಗೀತ.
ರಾತ್ರಿ 8.30ರಿಂದ: ಬೆಂಗಳೂರಿನ ಅಶ್ವತ್ಥ ಹರ್ಷಿತ್ ಅವರಿಂದ ನೃತ್ಯ ಕಾರ್ಯಕ್ರಮ.

ಗಾನಭಾರತಿ

ಸಂಜೆ 6 ರಿಂದ: ಸಾವಿತ್ರಿ ಮಾಲ್ತೇಶ್ ಲಮಾಣಿ ಅವರಿಂದ ಬಂಜಾರಾ ಭಜನೆ.
ಸಂಜೆ 6.45 ರಿಂದ: ಮೈಸೂರಿನ ಸಿ.ಎಸ್.ನಾಗರತ್ನಮ್ಮ ಮತ್ತು ತಂಡದಿಂದ ವಯೋಲಿನ್ ವಾದನ.
ಸಂಜೆ 7.45 ರಿಂದ: ಮೈಸೂರಿನ ಮಾಲಿನಿ ಅವರಿಂದ ಹರಿಕಥೆ.
ರಾತ್ರಿ 8.30 ರಿಂದ: ಮೈಸೂರಿನ ಆಕಾಶ್ ದೀಕ್ಷಿತ್‌ರಿಂದ ಸುಗಮ ಸಂಗೀತ.

ಶ್ರೀ ನಾದಬ್ರಹ್ಮ ಸಂಗೀತ ಸಭಾ

ಸಂಜೆ 6 ರಿಂದ: ಚಿಕ್ಕಬಳ್ಳಾಪುರ, ಚಿಂತನಾಪಳ್ಳಿ ನಾಗಣ್ಣರಿಂದ ನಾದಸ್ವರ.
ಸಂಜೆ 6.45 ರಿಂದ: ರಾಯಚೂರಿನ ರಘುಪತಿ ಪೂಜಾರಿ ದಿನ್ನಿ ಅವರಿಂದ ಕ್ಲಾರಿಯೋನೆಟ್ ವಾದನ.
ಸಂಜೆ 7.30 ರಿಂದ: ಅರಸೀಕೆರೆಯ ಶಾಂತಮ್ಮ ಮತ್ತು ತಂಡದವರಿಂದ ಜಾನಪದ ಗೀತೆ.
ರಾತ್ರಿ 8.30ಕ್ಕೆ: ಮೈಸೂರಿನ ಲಾಸ್ಯ ರಂಜನ ಅವರಿಂದ ನೃತ್ಯ ವೈಭವ.

ಚಿಕ್ಕಗಡಿಯಾರ

ಸಂಜೆ 5.30 ರಿಂದ: ಪರಮಾನಂದ ಕರಡಿ ಮೇಳದವರಿಂದ ಕರಡಿ ಮಜಲು.
ಸಂಜೆ 6 ರಿಂದ: ತಿ.ನರಸೀಪುರ ಕಿರಗಸೂರಿನ ಶ್ರೀ ಕಿರಗಸೂರು ರಾಜಣ್ಣ ಮತ್ತು ತಂಡದಿಂದ ರಂಗಗೀತೆಗಳು.
ಸಂಜೆ 7 ರಿಂದ: ಅಂಕುರಾ ಸಾಂಸ್ಕೃತಿಕ ಟ್ರಸ್ಟ್‌ನ ಕೆ.ಎಸ್.ಮಂಜುನಾಥ್ ಅವರಿಂದ ಜಾನಪದ ಗೀತೆಗಳು.



ಇಂದಿನ ಪಂಚಾಂಗ

3.10.2022 ಸೋಮವಾರ, ಮಳೆ ನಕ್ಷತ್ರ: ಹಸ್ತ 27.09.2022ರಿಂದ 10.10.2022 ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಆಶ್ವಯುಜ ಮಾಸ, ಶುಕ್ಲ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ : ಮೂಲ, ರಾಹುಕಾಲ: ಸಂಜೆ 7.30ರಿಂದ 9ರವರೆಗೆ

ರಾತ್ರಿ 8 ರಿಂದ: ಮೈಸೂರಿನ ಕನಕ ಮತ್ತು ತಂಡದಿಂದ ಭಜನೆಗಳು.

ಪುರಭವನ

ಬೆಳಗ್ಗೆ 10.30 ರಿಂದ: ರಂಗನಾಥ ಕಲಾ ಸಂಘದಿಂದ 'ಶ್ರೀ ಕೃಷ್ಣ ದೇವರಾಯ' ಪೌರಾಣಿಕ ನಾಟಕ.
ಮಧ್ಯಾಹ್ನ 3 ರಿಂದ: ಉತ್ತನಹಳ್ಳಿಯ ಶ್ರೀ ಬೀರೇಶ್ವರ ಕನ್ನಡ ಕಲಾ ಸಂಗದಿಂದ 'ಶಾಪ ವಿಮೋಚನೆ' ಪೌರಾಣಿಕ ನಾಟಕ.
ಸಂಜೆ 6 ರಿಂದ: ಬೆಂಗಳೂರಿನ ಮಾಲತಿ ಸುಧೀರ್ ಅವರಿಂದ 'ಧರ್ಮ ದೇವತೆ' ಸಾಮಾಜಿಕ ನಾಟಕ.

ಅರಮನೆ ಮಾಳ, ನಂಜನಗೂಡು

ಸಂಜೆ 5.30 ರಿಂದ: ರೋಟರಿ ಶಾಲೆಯವರಿಂದ ಯೋಗ ನೃತ್ಯ, ಜಾನಪದ ನೃತ್ಯ, ಭರತನಾಟ್ಯ, ಕಂಸಾಳೆ.
ಸಂಜೆ 6 ರಿಂದ: ರಾಮನಗರದ ಸಿದ್ದರಾಜಯ್ಯ ಮತ್ತು ತಂಡದವರಿಂದ ಜಾನಪದ ಗೀತೆಗಳು.
ಸಂಜೆ 7 ರಿಂದ: ಮೈಸೂರಿನ ಹರಿದಾಸ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ.
ರಾತ್ರಿ 8 ರಿಂದ: ದಾವಣಗೆರೆಯ ಶ್ರೀ ಸಂಚಾರಿ ಕೆಬಿಆರ್ ಡ್ರಾಮಾ ಕಂಪನಿಯಿಂದ 'ಧರ್ಮ ದೇವತೆ' ಸಾಮಾಜಿಕ ನಾಟಕ.

ಕಿರು ರಂಗಮಂದಿರ, ಕಲಾಮಂದಿರ

ಮಧ್ಯಾಹ್ನ 2 ರಿಂದ: ವಿಜಯಪುರದ ಶ್ರೇಯಾ ಪಾಟೀಲ್ ಅವರಿಂದ ಭರತನಾಟ್ಯ.
ಮಧ್ಯಾಹ್ನ 3 ರಿಂದ: ಮೈಸೂರಿನ ಸಂಚಲನದಿಂದ 'ಕಂಚುಗನ್ನಡಿ' ನಾಟಕ.
ಸಂಜೆ 7 ರಿಂದ: ಪ್ರಯೋಗ್ ತಂಡದಿಂದ ಡಾ.ರಾಜ್ – ಒಂದು ಸ್ಫೂರ್ತಿ' ನಾಟಕ.

ಆಹಾರ ಮೇಳ, ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನ

ಸಂಜೆ 6 ರಿಂದ: ಕರಾವಳಿ ಯಕ್ಷಗಾನ ಕೇಂದ್ರದಿಂದ 'ಜಾಂಬವತಿ ಕಲ್ಯಾಣ' ಯಕ್ಷಗಾನ

ಯುವ ದಸರಾ ಮಹಾರಾಜ ಕಾಲೇಜು ಮೈದಾನ

ಸಂಜೆ 6ರಿಂದ: ಮದ್ದೂರಿನ ಭಾರತೀನಗರದ ಭಾರತೀ ಕಾಲೇಜು ವಿದ್ಯಾರ್ಥಿಗಳಿಂದ ಕಲೆಯ ಪ್ರದರ್ಶನ. ಸಂಜೆ 6.15ರಿಂದ: ಮೈಸೂರು ರಾಮಕೃಷ್ಣನಗರದ ರಾಮಕೃಷ್ಣ ವಿದ್ಯಾಕೇಂದ್ರ ಸಂಯುಕ್ತ ಪಿಯು ಕಾಲೇಜು ವಿದ್ಯಾರ್ಥಿಗಳಿಂದ ಕಲಾ ಪ್ರತಿಭೆ ಅನಾವರಣ. ಸಂಜೆ 6.30ರಿಂದ: ಸುಪ್ರಿಂಯಾರಾಂ ಮತ್ತು ಮಹಿಳಾ ಬ್ಯಾಂಡ್ ತಂಡದಿಂದ ಪ್ರತಿಭಾ ಪ್ರದರ್ಶನ. ಸಂಜೆ 7.30ರಿಂದ: ಎಲೈಟ್ ತಂಡದಿಂದ ಫ್ಯಾಷನ್ ಶೋ. ರಾತ್ರಿ 8.30 ರಿಂದ: ಖ್ಯಾತ ಗಾಯಕಿ ಸುನಿಧಿ ಚೌಹಾಣ್ ಅವರಿಂದ ಸಂಗೀತ ಸಂಜೆ.

ಶರನ್ನವರಾತ್ರಿ ಕಾರ್ಯಕ್ರಮ

■ **ತ್ರಯೀನ್ಯಾಸ್ :** 26ನೇ ವರ್ಷದ ಶರನ್ನವರಾತ್ರಿ ಮಹೋತ್ಸವ, ಬೆಳಗ್ಗೆ 8.30 ರಿಂದ ಮಹಾಭಿಷೇಕ, ಶ್ರೀ ಗೌರಿ, ಶ್ರೀ ವಿದ್ಯಾ ದೀಪದುರ್ಗಾ ಪೂಜಾ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀ ಚಕ್ರಾರ್ಚನೆ, ಶ್ರೀ ಸುಂದರಕಾಂಡ ಪಾರಾಯಣ, ಸಂಜೆ 5.30ರಿಂದ ಕ್ಕೆ ಶ್ರೀ ವಿದ್ಯಾ ಷೋಡಶ ದುರ್ಗಾ ಹೋಮ, ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮೀಪುರಂ.



■ **ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ :** ಶ್ರೀ ಶಾರದಾಶರನ್ನವರಾತ್ರೋತ್ಸವ, ದುರ್ಗಾ ಹೋಮ, ದುರ್ಗಾ ಪರಮೇಶ್ವರಿ ಅಲಂಕಾರ, ಸ್ಥಳ: ಶೃಂಗೇರಿ ಶ್ರೀ ಶಂಕರ ಮಠ, ಅಭಿನವ ಶಂಕರಾಲಯ, ಫೋರ್ಟ್ ಮೊಹಲ್ಲಾ.

■ **ಶ್ರೀ ಮುಕ್ಕಣ್ಣೇಶ್ವರ ಸ್ವಾಮಿ ದೇವಸ್ಥಾನ:** ನವರಾತ್ರಿ ವೈಭವ, ದುರ್ಗಾ ಪರಮೇಶ್ವರಿ ಅಲಂಕಾರ, ಸ್ಥಳ: ದೇವಸ್ಥಾನದ ಆವರಣ, ಅಶೋಕ ರಸ್ತೆ, ಸಂಜೆ 6 ಗಂಟೆಯಿಂದ.

■ **ಶ್ರೀ ಶಾರದ ಪ್ರತಿಷ್ಠಾನ ಟ್ರಸ್ಟ್:** ಶರನ್ನವರಾತ್ರಿ ಸಂಗೀತೋತ್ಸವ, ವಿದುಷಿ ವಿಜಯಶ್ರೀ, ವಿದುಷಿ ಶ್ರೀವಿದ್ಯಾ ಮತ್ತು ತಂಡದಿಂದ ಯುಗಳ ಗಾಯನ, ಸ್ಥಳ: ಶ್ರೀ ರಾಮ ಮಂದಿರ, ಸಂಜೆ 6 ಗಂಟೆಗೆ.

■ **ಶ್ರೀ ಕಾಲ ಭೈರವೇಶ್ವರ ಸ್ವಾಮಿ ದೇವಸ್ಥಾನ:** ಶ್ರೀ ಪಾರ್ವತಿ ಅಮ್ಮನವರಿಗೆ ನವರಾತ್ರಿ ಪ್ರಯುಕ್ತ ವಿಶೇಷ ಅಲಂಕಾರ ಪೂಜಾ ಮಹೋತ್ಸವ, ಮಹಾಕಾಳಿ ದುರ್ಗಾದೇವಿ ಅಲಂಕಾರ, ಸ್ಥಳ: ದೇವಸ್ಥಾನದ ಆವರಣ, ಕೆ.ಟಿ. ಸ್ಟ್ರೀಟ್, ಸಂಜೆ 7 ಗಂಟೆಗೆ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ದೇವಿ ನವರಾತ್ರಿ ಉತ್ಸವಗಳು, ಬೆಳಗ್ಗೆ 9ಕ್ಕೆ ಶ್ರೀದೇವಿ ಪಲ್ಲಕ್ಕಿ ಉತ್ಸವ, ಕುಮಾರಿ ಪೂಜೆ, ಶ್ರೀಚಕ್ರಪೂಜೆ, ನವಾವರಣ ಪೂಜೆ, ಶ್ರೀ ಜಯಲಕ್ಷ್ಮಿ ಮಾತಾ ಜಯಂತಿ, ಮ.12ಕ್ಕೆ ಅನ್ನಾರ್ಚನೆ, ಚಂಡಿಪೂಜೆ, ಹೋಮ ಪೂರ್ಣಾಹುತಿ, ಮ.3.30ಕ್ಕೆ ಮಹಾಮಂಗಳಾರತಿ, ಡೋಲೋತ್ಸವ, ಸುವಾಸಿನಿ ಪೂಜೆ, ಸಂಜೆ 6 ರಿಂದ ಪೂಜ್ಯ ಶ್ರೀ ಸ್ವಾಮೀಜಿಯವರಿಂದ ದೇವಿ ಭಜನೆ ಮತ್ತು ಪ್ರವಚನ, ಸ್ಥಳ: ನಾದಮಂಟಪ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್:** ಶರನ್ನವರಾತ್ರಿ ಉತ್ಸವ, ಬೆಳಗ್ಗೆ 9 ಗಂಟೆಗೆ ಕುಮಾರಿ ಪೂಜೆ, ಬ್ರಹ್ಮಚಾರಿಣಿ ಪೂಜೆ, ದುರ್ಗಾ ಅಲಂಕಾರ, ಸ್ಥಳ: ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ, ವಾಣಿವಿಲಾಸ ಮೊಹಲ್ಲಾ, ಬೆಳಗ್ಗೆ 8 ಗಂಟೆಗೆ.

■ **ಜೆ.ಪಿ.ನಗರ ಬ್ರಾಹ್ಮಣ ಸಂಘ:** ಶರನ್ನವರಾತ್ರಿ, ಸುದಿತಿ ರಾಘವನ್ ಹಾಡುಗಾರಿಕೆ ಮತ್ತು ವೈಲಿನ್, ಸುಹಾಸ ರಾಘವನ್ ಮೃದಂಗ, ಅಭಿನವ ಭಾರದ್ವಾಜ್ ತಬಲ, ಸ್ಥಳ: ಜೆ.ಪಿ.ನಗರ, ಎಫ್ ಬ್ಲಾಕ್, ಸಂಜೆ 6 ಗಂಟೆಯಿಂದ.

■ **ರಂಗಾಯಣ:** ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ನೆನಪಿನ ರಂಗೋತ್ಸವ–2022, ಉಡುಪಿ ರಂಗಭೂಮಿ ತಂಡದಿಂದ ವಿಶಾಂಕೇ, ಸ್ಥಳ: ಭೂಮಿಗೀತ, ಸಂಜೆ 6.30ಕ್ಕೆ.

■ **ಗೊಂಬೆಗಳ ಪ್ರದರ್ಶನ:** ರಾಘವೇಂದ್ರ ಕೆ.ಎಸ್. ಅವರು ಕೈಯಿಂದ ಮಾಡಿರುವ 170 ಬೊಂಬೆಗಳ ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ವಿಜಯನಗರ, ಬೆಳಗ್ಗೆ 10 ಗಂಟೆಯಿಂದ.

■ **ಶ್ರೀ ಮೈಸೂರು ಗುಜರಾತಿ ಸಮಾಜ :** ನವರಾತ್ರಿ ಉತ್ಸವದ ಅಂಗವಾಗಿ ಗುಜರಾತಿ ಗರ್ಬಾ ಹಾಗೂ ದಾಂಡಿಯಾ ಜಾನಪದ ನೃತ್ಯ ಸ್ಥಳ: ಸಮಾಜದ ಭವನ, ಯಾದವಗಿರಿ, ಸಂಜೆ 7.30 ರಿಂದ.

■ **ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠಿಕ ಸೇವಾ ಟ್ರಸ್ಟ್ :** ಶರನ್ನವರಾತ್ರಿ ಪೂಜಾ ಮಹೋತ್ಸವ, ಬೆಳಗ್ಗೆ 10 ರಿಂದ ಶ್ರೀ ದುರ್ಗಾ ಹೋಮ, ಮಧ್ಯಾಹ್ನ 1 ಗಂಟೆಗೆ ಪ್ರಸಾದ ವಿನಿಯೋಗ, ಸಂಜೆ 7ಕ್ಕೆ ದುರ್ಗಾ ದೀಪ ನಮಸ್ಕಾರ, ಸ್ಥಳ: ಶ್ರೀರಾಮ ಮಂದಿರ, ಜಯನಗರ.

■ **ಶ್ರೀ ರಾಜರಾಜೇಶ್ವರಿ ದೇವಸ್ಥಾನ:** ಶರನ್ನವರಾತ್ರಿ ಮಹೋತ್ಸವ, ಕಾಳರಾತ್ರಿ, ದುರ್ಗಾ ಅಲಂಕಾರ, ಬೆಳಗ್ಗೆ ಮತ್ತು ಸಂಜೆ ದೇವಿಯ ದರ್ಶನ, ಸಂಜೆ ವಿದುಷಿ ಶುಭ ರಾಘವೇಂದ್ರ, ಶಿಷ್ಯ ವೃಂದದಿಂದ ದೇವರನಾಮ ಮತ್ತು ಶಾಸ್ತ್ರೀಯ ಸಂಗೀತ, ಸ್ಥಳ: ದೇವಸ್ಥಾನದ ಆವರಣ, ರಾಜರಾಜೇಶ್ವರಿನಗರ.

■ **ಶ್ರೀ ಗಣಪತಿ ಸೇವಾ ಮಂಡಳಿ :** ಶರನ್ನವರಾತ್ರೋತ್ಸವ, ಲಕ್ಷ್ಮೀ ಅಲಂಕಾರ, ಸ್ಥಳ: ಶ್ರೀ ಗಣಪತಿ ಸೇವಾ ಮಂಡಳಿ, ರಾಮಕೃಷ್ಣನಗರ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ– ನಾರಾಯಣ ಜಿ, 6.20 ದಸರಾ ವಿಶೇಷ ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: ಶತಮಾನದ ಸ್ಮರಣೆಗಳು: ಮಂಡ್ಯ ಜಿಲ್ಲೆಯ ಶತಮಾನದ ನೆನಪುಗಳು: ಲೇಖನ ಪ್ರಸ್ತುತಿ– ಡಿ.ಎನ್.ಶ್ರೀಪಾದ್, 6.40 ದಸರಾ ಸಂದರ್ಭದಲ್ಲಿ ವಿಶೇಷ ಸರಣಿ 'ರಾಜಮಾರ್ಗ' ಮೈಸೂರಿನ ಐತಿಹಾಸಿಕ ರಸ್ತೆಗಳ ಪರಿಚಯ, ಪ್ರಸ್ತುತಿ– ಡಾ. ಮೈಸೂರು ಉಮೇಶ್, 9.05 'ಹರಿಕೇಶಾಂಗಿ ಮಾತಂಗಿ': ನವರಾತ್ರಿ ದಸರಾ ಸಂದರ್ಭದಲ್ಲಿ ರಾಜ್ಯವ್ಯಾಪಿ ವಿಶೇಷ ಸಂಗೀತ ಸರಣಿ, ಪ್ರಸ್ತುತಿ– ಮೈಸೂರು ಎಸ್. ರಾಜಲಕ್ಷ್ಮಿ, 10.00 'ಶ್ರೀ ಕಮಲಾಂಬಾ ಜಯತಿ' ನವರಾತ್ರಿ ಸಂದರ್ಭದಲ್ಲಿ ಶ್ರೀ ಮುತ್ತುಸ್ವಾಮಿ ದೀಕ್ಷಿತರ ನವಾವರಣ ಕೃತಿಗಳನ್ನಾಧರಿಸಿದ ವಿಶೇಷ ಸಂಗೀತ ಸರಣಿ: 4ನೇ ಕಾರ್ಯಕ್ರಮ ಪರಿಕಲ್ಪನೆ– ಪ್ರೊ. ರಾ. ವಿಶ್ವೇಶ್ವರನ್, ಪ್ರಸ್ತುತಿ– ಜಿ. ರಾಜಲಕ್ಷ್ಮಿ, ಮಧ್ಯಾಹ್ನ: 12.30 ಭಕ್ತಿಗೀತೆಗಳು– ವಿದ್ಯಾಭೂಷಣ, 12.45 ನಮ್ಮ ಆರೋಗ್ಯ ಕಾರ್ಯಕ್ರಮ "ಯುವಜನರಲ್ಲಿ ಹೃದಯದ ತೊಂದರೆಗಳು" ಕುರಿತು ಡಾ.ಬೆಳ್ಳಿಪ್ಪಾಡಿ ಶ್ಯಾಮ್ ಪ್ರಸಾದ್ ಅವರೊಂದಿಗೆ ಮಾತುಕತೆ, 1.20 'ಜಂಬೂ ಸವಾರಿ' ಮೈಸೂರು ದಸರಾ ಆನೆ ಸ್ಟೋರಿ: ದಸರಾ ಸಂದರ್ಭದಲ್ಲಿ ವಿಶೇಷ ಬಾನುಲಿ ಸರಣಿ, ಪ್ರಸ್ತುತಿ– ಅಬ್ದುಲ್ ರಶೀದ್ ಹಾಗೂ ಡಾ.ಮೈಸೂರು ಉಮೇಶ್, 3.00 ನಾಡ ಹಬ್ಬ ದಸರಾ ಸಂದರ್ಭದಲ್ಲಿ ದುರ್ಗಾ ಸಪ್ತ ಶತಿಯನ್ನಾಧರಿಸಿದ ಕಥಾ ಕಾಲಕ್ಷೇಪ ಸರಣಿ 'ದೇವೀ ಮಹಾತ್ಮೆ', 4.00 ಮಹಿಳಾರಂಗ: ಡಾಕ್ಟರ್ ಸಮಯ. ಭಾಗವಹಿಸುವ ವೈದ್ಯರು–ಡಾ.ಅಶ್ವಿನಿ ಕೆ., ವಿಷಯ– ಚರ್ಮದ ತೊಂದರೆಗಳು, ಪ್ರಸ್ತುತಿ– ಕೆ.ಬಿ.ಮೀನಾ. ಸಂಜೆ: 4.30 ಝೇಂಕಾರ: ಮಕ್ಕಳ ಗೀತ ಗಾಯನ ಕಲಿಕಾ ಕಾರ್ಯಕ್ರಮ, 5.30 ಚಾಮುಂಡಿ ಹಬ್ಬ: ಜನಪದ ನಾಲಗೆಯಲ್ಲಿ ಮೈಸೂರ ದೇವತೆ, ಲೇಖನ ಡಾ.ಪಿ.ಕೆ.ರಾಜಶೇಖರ್, ಪ್ರಸ್ತುತಿ– ಡಾ. ಮೈಸೂರು ಉಮೇಶ್, ಭಾಗವಹಿಸುವವರು ಕೆಂಚಮ್ಮ ಮತ್ತು ಸಂಗಡಿಗರು, 6.50 ಕೃಷಿರಂಗ 'ಪೌಷ್ಟಿಕ ಕೈತೋಟದ ಪ್ರಾಮುಖ್ಯತೆ' ನೇತ್ರಾವತಿ ಎತ್ತಿನಮನಿ ಅವರೊಡನೆ ಸಂದರ್ಶನ. ರಾತ್ರಿ: 10.10 ನಾಟಕ 'ಅಂಚು ಕತ್ತರಿಸಿದ ಕಾಗದ' ಮೂಲ ಇಂಗ್ಲೀಷ್ ಕಥೆ– ಜಿ.ಕೆ. ಚೆಸ್ಟರ್‌ಟನ್, ಕನ್ನಡ ರೇಡಿಯೋ ನಾಟಕ ರೂಪಾಂತರ– ಶ್ರೀನಿವಾಸ್ ಪ್ರಸಾದ್, ನಿರ್ಮಾಣ– ಪ್ರಭುಸ್ವಾಮಿ ಮಳೀಮಠ್, 10.30 ಸವಿನೆನಪು.

■ **ಶ್ರೀ ಅಮೃತೇಶ್ವರ ದೇವಸ್ಥಾನ :** ಶರನ್ನವರಾತ್ರಿ ಪ್ರಯುಕ್ತ ಮಹಾಗೌರಿ ದುರ್ಗಾ ಹೋಮ, ಶ್ರೀಚಕ್ರ ನವಾವರಣ ಪೂಜೆ, 8ನೇ ದಿನದ ಶತಚಂಡಿಯಾಗ 12.30ಕ್ಕೆ ಪೂರ್ಣಾಹುತಿ, ಸ್ಥಳ: ಶ್ರೀ ಅಮೃತೇಶ್ವರ ದೇವಸ್ಥಾನ, ದೇವರಾಜ ಮೊಹಲ್ಲಾ.

■ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ:** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ರಿಂದ.

■ **ಶ್ರೀ ರಾಮಕೃಷ್ಣ ಆಶ್ರಮ :** ಬೆಳಗ್ಗೆ 7 ರಿಂದ ಶ್ರೀ ದುರ್ಗಾಪೂಜೆ, ಮಹಾಷ್ಟಮಿ, ಚಂಡೀಪಾರಾಯಣ, ಭಜನೆ, ಆರತಿ, ಪುಷ್ಪಾಂಜಲಿ, ಸಂಜೆ 7ಕ್ಕೆ ಸಂಧ್ಯಾರತಿ, ವಿಶೇಷ ಭಜನೆ, ಸ್ಥಳ: ಆಶ್ರಮದ ಆವರಣ.

■ **ಚಿತ್ಕಲಾ ಫೌಂಡೇಷನ್, ಹಾಸನ, ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ :** ಬಿ.ಎನ್. ದೇಸಾಯಿ ಇವರಿಂದ ಪಕ್ಷಿ–ಕೀಟಗಳ ನವರಾತ್ರಿ ಕಲೋತ್ಸವ, ಏಕವ್ಯಕ್ತಿ ಛಾಯಾಚಿತ್ರ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ 2ನೇ ಹಂತ, ಬೆಳಗ್ಗೆ 10ರಿಂದ.

■ **ಶ್ರೀ ಲಕ್ಷ್ಮಿವೆಂಕಟರಮಣಸ್ವಾಮಿ ದೇವಸ್ಥಾನ ಟ್ರಸ್ಟ್:** 48ನೇ ಬ್ರಹ್ಮೋತ್ಸವ, ಬೆಳಗ್ಗೆ 9 ಚತುಃಸ್ಥಾನಾರ್ಚನೆ, ನಿತ್ಯ ಹೋಮ, ಗರುಡೋತ್ಸವ, ನಿವೇದನೆ, ಸ್ಥಳ: ಶ್ರೀ ಲಕ್ಷ್ಮೀವೆಂಕಟರಮಣಸ್ವಾಮಿ ದೇವಸ್ಥಾನ, ವಿ.ವಿ. ಮೊಹಲ್ಲಾ.

■ **ಶ್ರೀ ಅಭಯಂ ಫೌಂಡೇಷನ್ :** ದಸರಾ ಅಂಗವಾಗಿ ಮೈಸೂರು–ಚಾಮರಾಜನಗರ ಕಲಾವಿದರೊಂದಿಗೆ ಕಲಾವಿದರ ದಸರಾ ಮೈಸೂರು–2022, ಸ್ಥಳ: ತಗಡೂರು ರಾಮಚಂದ್ರರಾವ್ ಉದ್ಯಾನವನ, ಚಾಮುಂಡಿಪುರಂ, ಬೆಳಗ್ಗೆ 10.30ಕ್ಕೆ.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಅಕ್ಟೋಬರ್ 3 ಸೋಮವಾರ 2022

ಸಂಪುಟ: 43 | ಸಂಚಿಕೆ: 168 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಮೈಸೂರು ಪ್ರವೇಶಿಸಿದ 'ಭಾರತ್ ಐಕ್ಯತಾ ಯಾತ್ರೆ'

ಅರಮನೆ ಎದುರು ರಾಹುಲ್ ವಾಸ್ತವ್ಯ



ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಮಠಕ್ಕೆ ಎಐಸಿಸಿ ನಾಯಕ ರಾಹುಲ್ ಗಾಂಧಿ ಭಾನುವಾರ ಸಂಜೆ ಭೇಟಿ ನೀಡಿ, ಶ್ರೀಗಳಿಂದ ಆಶೀರ್ವಾದ ಪಡೆದರು.



ಮೈಸೂರು, ಅ.2(ಎಸ್‌ಬಿಡಿ)– ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸಾರಥ್ಯದ 'ಭಾರತ ಐಕ್ಯತಾ ಯಾತ್ರೆ' ಭಾನುವಾರ ಸಂಜೆ ಮೈಸೂರು ತಲುಪಿತು.

ನಂಜನಗೂಡಿನಲ್ಲಿ ಶ್ರೀಕಂಠೇಶ್ವರ ಸ್ವಾಮಿ ದೇವಾಲಯದಲ್ಲಿ ಪೂಜೆ ಸಲ್ಲಿಸಿದ ಬಳಿಕ ಕಾರಿನಲ್ಲಿ ಮೈಸೂರು ತಾಲೂಕು ಕಡಕೊಳಕ್ಕೆ ಆಗಮಿಸಿದ ರಾಹುಲ್ ಗಾಂಧಿ ಅಲ್ಲಿನ ಕಾಳಿ ಬೀರಮ್ಮ ದೇವಸ್ಥಾನದ ಬಳಿಯಿಂದ ಪಕ್ಷದ ಮುಖಂಡರು, ಸಾವಿರಾರು ಕಾರ್ಯಕರ್ತರೊಂದಿಗೆ ಪಾದಯಾತ್ರೆ ಆರಂಭಿಸಿದರು. ಸಂಜೆ 4.45ಕ್ಕೆ ಆರಂಭಗೊಂಡ ಯಾತ್ರೆ ಸಂಜೆ 6.48ಕ್ಕೆ ಮೈಸೂರಿನ ಬಂಡಿಪಾಳ್ಯ ತಲುಪಿತು. ಅಲ್ಲಿ ಸಾರ್ವಜನಿಕರನ್ನುದ್ದೇಶಿಸಿ ಮಾತನಾಡಲು ರಾಹುಲ್ ಗಾಂಧಿ ವೇದಿಕೆ ಏರುತ್ತಿದ್ದಂತೆ ಧೋ.. ಎಂದು ಜೋರು ಮಳೆ ಸುರಿಯಿತು.

ಸುತ್ತೂರು ಶ್ರೀಗಳ ಭೇಟಿ: ಮಳೆಯಲ್ಲೇ ಭಾಷಣ ಮಾಡಿ ಬಿಜೆಪಿ ವಿರುದ್ಧ ಹರಿಹಾಯ್ದ ರಾಹುಲ್ ಗಾಂಧಿ, ನಂತರ ಕಾರಿನಲ್ಲಿ ಚಾಮುಂಡಿಬೆಟ್ಟದ ತಪ್ಪಲಿನ ಶ್ರೀ ಸುತ್ತೂರು ಶಾಖಾ ಮಠಕ್ಕೆ ಭೇಟಿ ನೀಡಿ ಶ್ರೀಗಳೊಂದಿಗೆ ಮಾತುಕತೆ ನಡೆಸಿದರು. ಅಲ್ಲಿಂದ ನೇರವಾಗಿ ವಸ್ತು ಪ್ರದರ್ಶನ ಆವರಣದ ಎದುರಿನ ಮೈದಾನದಲ್ಲಿ ವಾಸ್ತವ್ಯ ಹೂಡಿದರು. ಕಡಕೊಳದಿಂದ ರಾಹುಲ್ ಗಾಂಧಿ ಅವರೊಂದಿಗೆ ಸುಮಾರು 25 ಸಾವಿರಕ್ಕೂ ▶ 9ನೇ ಪುಟಕ್ಕೆ

ಇಂದು ಮೈಸೂರಿಗೆ ಸೋನಿಯಾ ಗಾಂಧಿ

ಅ.6ರಂದು ಐಕ್ಯತಾ ಯಾತ್ರೆಯಲ್ಲಿ ಭಾಗಿ



ಮೈಸೂರು, ಅ.2–ಎಐಸಿಸಿ ಅಧ್ಯಕ್ಷೆ ಸೋನಿಯಾಗಾಂಧಿಯವರು ನಾಳೆ(ಅ.3) ಮಧ್ಯಾಹ್ನ ಮೈಸೂರಿಗೆ ಆಗಮಿಸಲಿದ್ದು, ಕೊಡಗಿನಲ್ಲಿ ವಾಸ್ತವ್ಯ ಹೂಡಿ, ಅ.6ರಂದು ಭಾರತ ಐಕ್ಯತಾ ಯಾತ್ರೆಯಲ್ಲಿ ಸಾಂಕೇತಿಕವಾಗಿ ಹೆಜ್ಜೆ ಹಾಕಲಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ. ಸೋನಿಯಾ ಗಾಂಧಿಯವರು ನಾಳೆ ಮಧ್ಯಾಹ್ನ 12.30ಕ್ಕೆ ವಿಶೇಷ ವಿಮಾನದ ಮೂಲಕ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಿ, ಮಧ್ಯಾಹ್ನ 1.30ಕ್ಕೆ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆಯಲಿದ್ದಾರೆ. ನಂತರ ಕೊಡಗಿಗೆ ತೆರಳಿ ಅಲ್ಲಿನ ರೆಸಾರ್ಟ್‌ವೊಂದರಲ್ಲಿ ವಾಸ್ತವ್ಯ ಹೂಡಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ಅ.6ರಂದು ಮಂಡ್ಯ ಜಿಲ್ಲೆಯಲ್ಲಿ ನಡೆಯಲಿರುವ ಐಕ್ಯತಾ ಯಾತ್ರೆಯಲ್ಲಿ ಸಾಂಕೇತಿಕವಾಗಿ ಸೋನಿಯಾ ಗಾಂಧಿ ಹೆಜ್ಜೆ ಹಾಕಲಿದ್ದಾರೆ ಎಂದು ಮೂಲಗಳು ಹೇಳಿವೆ.

ಬದನವಾಳಲ್ಲಿ ಗಾಂಧಿ ಜಯಂತಿ

ರಸ್ತೆಗೆ 'ಭಾರತ ಐಕ್ಯತಾ' ನಾಮಕರಣ



ನಂಜನಗೂಡು, ಅ.2(ರಂಗಸ್ವಾಮಿ)– ಕಾಂಗ್ರೆಸ್ ವರಿಷ್ಠರಾದ ರಾಹುಲ್‌ಗಾಂಧಿ ಮತ್ತು ರಾಜ್ಯ ನಾಯಕರು ಮಹಾತ್ಮ ಗಾಂಧೀಜಿ ಭೇಟಿ ನೀಡಿದ್ದ ಐತಿಹಾಸಿಕ ಸ್ಥಳವಾದ ತಾಲೂಕಿನ ಬದನವಾಳು ಗ್ರಾಮದ ಖಾದಿ ಗ್ರಾಮೋದ್ಯೋಗ ಕೇಂದ್ರದಲ್ಲಿ ಗಾಂಧಿ ಜಯಂತಿಯನ್ನು ವಿಭಿನ್ನವಾಗಿ ಆಚರಿಸಿದರು.

ತಾಂಡವಪುರದ ಬಳಿಯ ಎಂಐಟಿ ಕಾಲೇಜಿನ ಬಳಿಯಿಂದ ವಾಹನದಲ್ಲಿ ಬದನವಾಳು ಖಾದಿ ಗ್ರಾಮೋದ್ಯೋಗ ಕೇಂದ್ರಕ್ಕೆ ಬೆಳಗ್ಗೆ 8ಕ್ಕೆ ರಾಹುಲ್ ಗಾಂಧಿ ಆಗಮಿಸಿದರು. ಖಾದಿ ಗ್ರಾಮೋದ್ಯೋಗ ಕೇಂದ್ರದಲ್ಲಿರುವ ಮಹಾತ್ಮ ಗಾಂಧೀಜಿ ಪುತ್ಥಳಿಗೆ ಮಾಲಾರ್ಪಣೆ ಮಾಡಿ, ಪುಷ್ಪನಮನ ಸಲ್ಲಿಸಿದರು.

ಬಳಿಕ ವಿಪಕ್ಷ ನಾಯಕ ಸಿದ್ದರಾಮಯ್ಯ, ಕೆ.ಸಿ.ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೆವಾಲಾ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಕಾರ್ಯಾಧ್ಯಕ್ಷರಾದ ಆರ್.ಧ್ರುವನಾರಾಯಣ್, ಸಲಿಂಅಹಮದ್, ಬಿ.ಕೆ.ಹರಿಪ್ರಸಾದ್ ಪುಷ್ಪನಮನ ಸಲ್ಲಿಸಿದರು.

ನಂತರ ಗಾಯಕಿ ಸಂಗೀತಕಟ್ಟಿ ಮತ್ತು ತಂಡದವರು ಹಾಡಿದ ಪ್ರಾರ್ಥನೆ ಗೀತೆಗೆ ರಾಹುಲ್‌ಗಾಂಧಿ ಧ್ಯಾನಾಸಕ್ತರಾಗಿ ಗಾಂಧೀಜಿಗೆ ನಮನ ಸಲ್ಲಿಸಿದರು. ವೈಷ್ಣವ ಜನತೋ, ರಘುಪತಿ ರಾಘವ ರಾಜಾರಾಂ, ವಂದೇಮಾತರಂ, ರಾಮ್‌ರಾಮ್ ಗೀತೆಗಳು ಕಾರ್ಯಕ್ರಮಕ್ಕೆ ಕಳೆಗಟ್ಟಿದವು. ಗಾಂಧೀಜಿರವರು 1927 ಮತ್ತು 1932ರಲ್ಲಿ ಭೇಟಿ ನೀಡಿದ್ದ ವೇಳೆ ಖಾದಿ ಕೇಂದ್ರದಲ್ಲಿ ನೌಕರರಾಗಿದ್ದ ಬದನವಾಳು ಗ್ರಾಮದ ಕೆ.ರಂಗಯ್ಯರವರನ್ನು ಆತ್ಮೀಯವಾಗಿ ಮಾತನಾಡಿಸಿ, ಕುಶಲೋಪರಿ ವಿಚಾರಿಸಿದರು. ನಂತರ 8.30ರ ವೇಳೆಗೆ ಖಾದಿಬಟ್ಟೆ ನೇಯ್ಗೆ ಮಾಡುವುದನ್ನು ವೀಕ್ಷಣೆ ನಡೆಸಿದ ರಾಹುಲ್‌ಗಾಂಧಿ, ಕೇಂದ್ರದ ಮಹಿಳಾ ನೌಕರರ ಸಮಸ್ಯೆ ಆಲಿಸಿದರು. ಬಳಿಕ ಖಾದಿ ಕೇಂದ್ರದಲ್ಲಿ ತೆಂಗಿನ ಗಿಡವನ್ನು ನೆಡುವ ಮೂಲಕ ಶ್ರಮದಾನ ನಡೆಸಿದರು. ನಂತರ 11.15ರ ವೇಳೆಗೆ ಗ್ರಾಮದ ಶಾಲೆಯ ಆವರಣದಲ್ಲಿ ಬಣ್ಣ ಬಳಿದರು. ಇದೇ ವೇಳೆ ಶಾಲೆಯ ವಿದ್ಯಾರ್ಥಿನಿಯರಾದ ಸೌಜನ್ಯ, ಜಾನವಿ, ಸಂಜನಾರವರನ್ನು ಆತ್ಮೀಯವಾಗಿ ಅಪ್ಪಿಕೊಂಡು ಮುಂದೆ ನೀವು ಏನಾಗಬೇಕು ಎಂದುಕೊಂಡಿದ್ದೀರಿ? ಎಂದು ಪ್ರಶ್ನಿಸಿದರು. ತಾಲೂಕಿನ ಬದನವಾಳು ಗ್ರಾಮದಲ್ಲಿ 1993ರಲ್ಲಿ ನಡೆದ ▶ 9ನೇ ಪುಟಕ್ಕೆ

ಮಳೆಯಲ್ಲೇ ರಾಹುಲ್ ಗಾಂಧಿ ಭಾಷಣ



ಮೈಸೂರು,ಅ.2–ಮೈಸೂರಿನ ಬಂಡಿಪಾಳ್ಯದ ಬಳಿ ಪಾದಯಾತ್ರೆ ಅಂತ್ಯವಾದ ಬಳಿಕ ಕಾರ್ಯಕರ್ತರನ್ನುದ್ದೇಶಿಸಿ ಮಳೆಯಲ್ಲೇ ಭಾಷಣ ಮಾಡಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಬಿಜೆಪಿ ವಿರುದ್ಧ ಹರಿಹಾಯ್ದರು.

ಬಿಜೆಪಿ ವಿರುದ್ಧ ಟೀಕಾ ಪ್ರಹಾರ

ರಾಹುಲ್ ಗಾಂಧಿ ಅವರು ಸಂಜೆ 6.48ಕ್ಕೆ ವೇದಿಕೆಯನ್ನೇರುತ್ತಿದ್ದಂತೆ ಜೋರು ಮಳೆ ಆರಂಭವಾಯಿತು. ಈ ವೇಳೆ ಸಹಾಯಕರು ಛತ್ರಿ ಹಿಡಿಯಲು ಮುಂದಾದಾಗ ಅದನ್ನು ನಿರಾಕರಿಸಿದ ಮಾತು ಮುಂದುವರಿಸಿದ ಅವರು ರಾಜ್ಯದಲ್ಲಿರುವ 40 ಪರ್ಸೆಂಟ್ ಬಿಜೆಪಿ ಸರ್ಕಾರವನ್ನು ಕಿತ್ತೊಗೆಯಬೇಕೆಂದು ಹೇಳುತ್ತಿದ್ದಂತೆ ನೆರೆದಿದ್ದ ಸಹಸ್ರಾರು ಕಾರ್ಯಕರ್ತರು ಕೇಕೆ, ಶಿಳ್ಳೆ ▶ 9ನೇ ಪುಟಕ್ಕೆ

ಡಿಕೆಶಿ ಸಹೋದರರಿಗೆ ಇಡಿ ಹೊಸ ಸಮನ್ಸ್

ನವದೆಹಲಿ: ಯಂಗ್ ಇಂಡಿಯಾ ಪ್ರೈವೇಟ್ ಲಿ.ಗೆ ನೀಡಿರುವ ಹಣಕಾಸು ನೆರವು ಪ್ರಕರಣದ ತನಿಖೆಗೆ ಸಂಬಂಧಿಸಿದಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಸಹೋದರ ಸಂಸದ ಡಿ.ಕೆ.ಸುರೇಶ್ ಅವರಿಗೆ ಜಾರಿ ನಿರ್ದೇಶನಾಲಯವು ಹೊಸದಾಗಿ ಸಮನ್ಸ್ ಜಾರಿ ಮಾಡಿದೆ.

ಅ.7ರಂದು ಇ.ಡಿ ಕೇಂದ್ರ ಕಚೇರಿ ತನಿಖಾಧಿಕಾರಿ ಎದುರು ಹಾಜರಾಗುವಂತೆ ಇಬ್ಬರಿಗೂ ಸೂಚಿಸಿದೆ. ಕರ್ನಾಟಕದಲ್ಲಿ ಭಾರತ ಐಕ್ಯತಾ ಯಾತ್ರೆ ನಡೆಯುತ್ತಿರುವ ಕಾರಣ ಶಿವಕುಮಾರ್ ಅವರು ತನಿಖಾಧಿಕಾರಿ ಎದುರು ಹಾಜರಾಗಲು ಕಾಲಾವಕಾಶ ಕೇಳಿದ್ದಾರೆ. ಶಿವಕುಮಾರ್ ಅಕ್ರಮ ಆಸ್ತಿ ಸಂಪಾದನೆಗೆ ಸಂಬಂಧಿಸಿದಂತೆ ಇತ್ತೀಚೆಗೆ ಇ.ಡಿ ಎದುರು ಹಾಜರಾಗಿದ್ದ ವೇಳೆ, ಯಂಗ್ ಇಂಡಿಯಾಗೆ ನೀಡಿರುವ ಹಣಕಾಸು ನೆರವು ▶ 5ನೇ ಪುಟಕ್ಕೆ

ಮೈಸೂರು ದಸರಾ ಕುಸ್ತಿ ಪಂದ್ಯಾವಳಿ ಸಮಾರೋಪ

ಮುದೋಳ್ ಪೈ.ಸುನೀಲ್ ಪಡತಾರೆ ದಸರಾ ಕಂಠೀರವ

ಮೈಸೂರಿನ ಪೈ.ಯಶವಂತ್ 'ದಸರಾ ಕುಮಾರ್', ಬಾಗಲಕೋಟೆ ಪೈ.ಬಾಪು ಸಾಹೇಬ್ ಶಿಂದೆ 'ದಸರಾ ಕೇಸರಿ'



(ಎಡದಿಂದ)'ದಸರಾ ಕಿಶೋರ್' ವಿಜೇತ ಪೈ.ರೋಹನ್ ನಾರಾಯಣ, 'ದಸರಾ ಕೇಸರಿ' ವಿಜೇತ ಪೈ.ಬಾಪು ಸಾಹೇಬ್ ಶಿಂದೆ, 'ದಸರಾ ಕಂಠೀರವ' ವಿಜೇತ ಪೈ.ಸುನೀಲ್ ಪಡತಾರೆ, 'ದಸರಾ ಕಿಶೋರಿ' ವಿಜೇತೆ ಪೈ.ಪ್ರಿನ್ಸಿತಾ ಪೆಡ್ರು, 'ದಸರಾ ಕುಮಾರ್' ವಿಜೇತ ಪೈ.ಆರ್.ಯಶವಂತ್ ಅವರನ್ನು ಕಾಣಬಹುದು

ಮೈಸೂರು, ಅ.2(ಎಂಕೆ)– ಮೈಸೂರು ದಸರಾ ಕುಸ್ತಿ ಪಂದ್ಯಾವಳಿಯಲ್ಲಿ ಮೈಸೂರಿನ ಪೈಲ್ವಾನ್ ಆರ್.ಯಶವಂತ್ 'ದಸರಾ ಕುಮಾರ್', ಮುದೋಳ್‌ನ ಪೈಲ್ವಾನ್ ಸುನೀಲ್ ಪಡತಾರೆ 'ದಸರಾ ಕಂಠೀರವ', ಬಾಗಲಕೋಟೆ ಪೈಲ್ವಾನ್ ಬಾಪು ಸಾಹೇಬ್ ಶಿಂದೆ 'ದಸರಾ ಕೇಸರಿ', ಬೆಳಗಾವಿಯ ಪೈಲ್ವಾನ್ ರೋಹನ್ ನಾರಾಯಣ 'ದಸರಾ ಕಿಶೋರ್' ಹಾಗೂ ಉತ್ತರ ಕನ್ನಡದ ಮಹಿಳಾ ಪೈಲ್ವಾನ್ ಪ್ರಿನ್ಸಿತಾ ಪೆಡ್ರು 'ದಸರಾ ಕಿಶೋರಿ' ಪ್ರಶಸ್ತಿ ಮುಡಿಗೇರಿಸಿಕೊಂಡರು.

ನಗರದ ದೊಡ್ಡಕೆರೆ ಮೈದಾನದ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಕೊನೆಯ ಪ್ರಶಸ್ತಿ ಕುಸ್ತಿ ಪಂದ್ಯಗಳು ರೋಚಕ ಕ್ಷಣಗಳಿಗೆ ಸಾಕ್ಷಿಯಾಯಿತು. ಜಿದ್ದಾಜಿದ್ದಿನಿಂದ ಕೂಡಿದ್ದ ಪಂದ್ಯಗಳಲ್ಲಿ ತೊಡೆ ತಟ್ಟಿದ ಪೈಲ್ವಾನರು ಅಖಾಡದಲ್ಲಿ ಎದುರಾಳಿಗಳಿಗೆ ಮಣ್ಣು ಮುಕ್ಕಿಸಿ ವಿಜಯ ಸಾಧಿಸಿದರು.

ದಸರಾ ಕುಮಾರ್: ಮೊದಲು ನಡೆದ 'ದಸರಾ ಕುಮಾರ್' ಪ್ರಶಸ್ತಿ ಪಂದ್ಯದಲ್ಲಿ ಮೈಸೂರಿನ ಪೈಲ್ವಾನರಾದ ಆರ್.ಯಶವಂತ್ ಹಾಗೂ ದೀಕ್ಷಿತ್ ಕುಮಾರ್ ನಡುವೆ ಜಿದ್ದಾಜಿದ್ದಿನ ಕುಸ್ತಿ ನಡೆಯಿತು. ಆರಂಭದಿಂದಲೂ ಪಾಯಿಂಟ್ ಗಳಿಸುತ್ತಾ ಗಮನ ಹರಿಸಿದ ಪೈಲ್ವಾನ್ ಆರ್.ಯಶವಂತ್ ವಿಜಯ ಸಾಧಿಸಿದರೆ, ಉತ್ತಮ ಪೈಪೋಟಿ ನೀಡಿದ ದೀಕ್ಷಿತ್ ದ್ವಿತೀಯ ಸ್ಥಾನ ಪಡೆದರು. ಮಂಡ್ಯ ಪೈ.ಎಂ.ಆರ್.ವಿಕಾಶ್ ಹಾಗೂ ಮೈಸೂರು ಪೈ.ಚೇತನ್‌ಗೌಡ ತೃತೀಯ ಬಹುಮಾನ ಹಂಚಿಕೊಂಡರು.

ದಸರಾ ಕಿಶೋರಿ: ಉತ್ತರ ಕನ್ನಡ ಮಹಿಳಾ ಕುಸ್ತಿಪಟು ಪೈ.ಗಾಯತ್ರಿ ರಮೇಶ್ ವಿರುದ್ಧ ಜಯಗಳಿಸಿದ ಪೈ.ಪ್ರಿನ್ಸಿತಾ ಪೆಡ್ರು 'ದಸರಾ ಕಿಶೋರಿ' ಪ್ರಶಸ್ತಿ ▶ 5ನೇ ಪುಟಕ್ಕೆ


ನಾಡಕುಸ್ತಿ ಪದಕ ವಿಜೇತರು...

ಮೈಸೂರಿನ ನಜರ್‌ಬಾದ್ ಪೈ.ಹೇಮಂತ್‌ಗೌಡ 'ಸಾಹುಕಾರ್ ಚೆನ್ನಯ್ಯ ಕಪ್', ನಂಜನಗೂಡು ಪೈ.ಕುಮಾರ್ ಕಾಳಿ 'ಮೈಸೂರು ಮಹಾರಾಜ ಒಡೆಯರ್ ಕಪ್', ಬನ್ನೂರಿನ ಮಹಿಳಾ ಪೈ.ಜಾನವಿ 'ಕಿತ್ತೂರು ರಾಣಿ ಚೆನ್ನಮ್ಮ ಕಪ್' ಹಾಗೂ ಮೈಸೂರು ಕೆ.ಜಿ.ಕೊಪ್ಪಲಿನ ಪ್ರೀತಂಗೌಡ 'ಮೈಸೂರು ಮೇಯರ್ ಕಪ್' ತಮ್ಮದಾಗಿಸಿಕೊಂಡರು.

ಇಂದು ಐಕ್ಯತಾ ಯಾತ್ರೆ ಸಾಗುವ ಮಾರ್ಗದಲ್ಲಿ ಸಂಚಾರ ನಿರ್ಬಂಧ

ಮೈಸೂರು, ಅ.2(ಆರ್‌ಕೆ)–ಮೈಸೂರು ನಗರ ತಲುಪಿರುವ ಎಐಸಿಸಿ ಮುಖಂಡ ರಾಹುಲ್ ಗಾಂಧಿ ಅವರ ಭಾರತ ಐಕ್ಯತಾ ಯಾತ್ರೆಯು ನಾಳೆ(ಅ.3) ಬೆಳಗ್ಗೆ 6 ಗಂಟೆಗೆ ಹಾರ್ಡಿಂಜ್ ಸರ್ಕಲ್‌ನಿಂದ ಆರಂಭವಾಗಿ ಆಲ್ಬರ್ಟ್ ವಿಕ್ಟರ್ ರಸ್ತೆ, ಚಾಮರಾಜ ವೃತ್ತ, ದೊಡ್ಡ ಗಡಿಯಾರ ಸರ್ಕಲ್, ಅಶೋಕ ರಸ್ತೆ, ನೆಹರು ವೃತ್ತ, ಫೌಂಟನ್ ಸರ್ಕಲ್, ಎಲ್‌ಐಸಿ ವೃತ್ತ ಬನ್ನಿಮಂಟಪ ರಸ್ತೆ ಜೆಎಸ್‌ಎಸ್ ಮೆಡಿಕಲ್ ಕಾಲೇಜು, ಟೋಲ್‌ಗೇಟ್, ಮಣಿಪಾಲ್ ಆಸ್ಪತ್ರೆ ಜಂಕ್ಷನ್ ಮೂಲಕ ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಶ್ರೀರಂಗಪಟ್ಟಣ ಕಡೆಗೆ ಮುಂದೆ ಸಾಗಲಿದೆ. ಮೈಸೂರಿನಲ್ಲಿ ಯಾತ್ರೆ ನಡೆಯುವ ಮಾರ್ಗದಲ್ಲಿ ಸೋಮವಾರ ಬೆಳಗ್ಗೆ 6ರಿಂದ 10ರವರೆಗೆ ವಾಹನ ಸಂಚಾರ ನಿರ್ಬಂಧಿಸಿದ್ದು, ಆ ವೇಳೆ ಬದಲಿ ಮಾರ್ಗದಲ್ಲಿ ಸಂಚರಿಸುವಂತೆ ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ ತಿಳಿಸಿದ್ದಾರೆ. ಡಿಸಿಪಿ ಪ್ರದೀಪ್ ಗುಂಟಿ, ಎಸಿಪಿಗಳಾದ ಶಶಿಧರ್, ಎಂ.ಶಿವಶಂಕರ್ ನೇತೃತ್ವದಲ್ಲಿ ಯಾತ್ರೆಗೆ ಭಾರೀ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದ್ದು, ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ ಮೇಲ್ವಿಚಾರಣೆಯಲ್ಲಿ ಸುಗಮ ಸಂಚಾರಕ್ಕೆ ವ್ಯವಸ್ಥೆ ಮಾಡಲಾಗಿದೆ.

ಯುವ ದಸರಾದಲ್ಲಿ ಮಂಗ್ಲಿ ಗಾಯನ ಮೋಡಿ



'ಸ್ಟಾರ್ ನೈಟ್'ನಲ್ಲಿ ತಾರೆಯರ ನೃತ್ಯ ಮನರಂಜನೆ





ಮಂಗ್ಲಿ ಹಾಡಿಗೆ ಎಸ್‌ಟಿಎಸ್ ಸಖತ್ ಸ್ಟೆಪ್...

ಖ್ಯಾತ ಗಾಯಕಿ ಮಂಗ್ಲಿ ಅವರ 'ಕಣ್ಣು ಹೊಡಿಯಾಕ ಮೊನ್ನೆ ಕಲತೀನಿ, ನಿನ್ನ ನೋಡಿ ಸುಮ್ಮನ್ ಹೆಂಗಿರ್ಲಿ' ಹಾಡಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಸಖತ್ ಸ್ಟೆಪ್ ಹಾಕಿದರು. ಅವರೊಟ್ಟಿಗೆ ಮೇಯರ್ ಶಿವಕುಮಾರ್, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಸೇರಿದಂತೆ ಹಲವರು ಕುಣಿದು ಕುಪ್ಪಳಿಸಿದರು.

ಮೈಸೂರು, ಅ.2(ಎಂಕೆ)– ಸ್ಟಾರ್ ನಟ–ನಟಿಯರ ಮಸ್ತ್ ಮನರಂಜನೆಯೊಂದಿಗೆ ಮಂಗ್ಲಿ ಮೋಡಿಗೆ ಮನಸೋತ ಯುವ ಮಂದಿ...!

ನಾಡಹಬ್ಬ ಮೈಸೂರು ದಸರಾ ಆಕರ್ಷಣೆಯಾದ 'ಯುವ ದಸರಾ'ದಲ್ಲಿ ಹಾಡು, ನೃತ್ಯ, ಹಾಸ್ಯದ ಹೊನಲು ಯುವ ಮನಸುಗಳಿಗೆ ಮಸ್ತ್ ಮನರಂಜನೆ ನೀಡಿದರೆ, ಖ್ಯಾತ ಗಾಯಕಿ ಮಂಗ್ಲಿ ತಮ್ಮ ಕಂಚಿನ ಕಂಠಸಿರಿಯಿಂದ ಎಲ್ಲರ ಹೃದಯದಲ್ಲಿ ಮನೆ ಮಾಡಿದರು.

ಮೊದಲ ಬಾರಿಗೆ 'ಯುವ ದಸರಾ' ವೇದಿಕೆಯಲ್ಲಿ ಸಂಗೀತ ಸುಧೆ ಹರಿಸಿದ ಗಾಯಕಿ ಮಂಗ್ಲಿ, ಕನ್ನಡ ಹಾಗೂ ತೆಲುಗು ಹಾಡುಗಳನ್ನು ಹಾಡಿ ಭಾರೀ ಪ್ರಶಂಸೆ ಪಡೆದರು. ಮೈಸೂರೆಂದರೆ ನನಗೆ ತುಂಬಾ ಇಷ್ಟ... ಕನ್ನಡ ನನ್ನ ಎರಡನೇ ಮನೆ ಎಂದ ಮಂಗ್ಲಿ, 'ಕಣ್ಣು ಹೊಡಿಯಾಕ ಮೊನ್ನೆ ಕಲತೀನಿ, ನಿನ್ನ ನೋಡಿ ಸುಮ್ಮನ್ ಹೆಂಗಿರ್ಲಿ' ಹಾಡನ್ನು ಹಾಡಿ ರಂಜಿಸಿದರಲ್ಲದೆ, 'ಬೊಂಬೆ ಹೇಳುತೈತೆ ಮತ್ತೆ ಹೇಳುತೈತೆ ನೀನೇ ರಾಜಕುಮಾರ' ಹಾಡನ್ನು ಹಾಡಿ ಅಪ್ಪು ಅಭಿಮಾನ ಮೆರೆದರು.

ಗಾಯಕ ಅನಿರುದ್ಧ್ ಜೊತೆಗೂಡಿ 'ಸಾಧು ಜಂಗಮ ಆದಿ ದೇವುಡಾ', 'ಎಣ್ಣೆಗೂ–ಹೆಣ್ಣಿಗೂ ಎಲ್ಲಿಂದ ಲಿಂಕ್ ಇಟ್ಟೆ ಹೇಳೋ ಭಗವಂತ', 'ರಾ ರಾ ರಕ್ಕಮ್ಮ' ಹಾಡನ್ನು ಹಾಡಿ ವೇದಿಕೆಗೆ ರಂಗು ತಂದರಲ್ಲದೆ ನೆರೆದಿದ್ದ ಜನಸ್ತೋಮವೇ ಕುಣಿದು ಕುಪ್ಪಳಿಸುವಂತೆ ಮಾಡಿದರು. ಈ ವೇಳೆ 'ಐಗಿರಿ ನಂದಿನಿ ನಂದಿತ ಮೇದಿನಿ ವಿಶ್ವ ವಿನೋದಿನಿ ನಂದನುತೆ' ಹಾಡಿನ ಮೂಲಕ ಪ್ರೇಕ್ಷಕರೇ ನಿಬ್ಬೆರಗಾಗುವಂತೆ ಮಾಡಿದರು. ಹಾಡಿನಿಂದಲೇ ಮೈಸೂರಿಗರಿಗೆ ಮೋಡಿ, ಮಾಡಿ ಮಂಗ್ಲಿ ಕುಣಿದರಲ್ಲದೆ ತಮ್ಮೊಂದಿಗೆ ಅಭಿಮಾನಿಗಳನ್ನು ಕುಣಿಸಿ ಅಪಾರ ಪ್ರೀತಿ ಗಳಿಸಿದರು.

ಅಮಿತ್ ತ್ರಿವೇದಿ ಮಿಂಚು: ಖ್ಯಾತ ಬಾಲಿವುಡ್ ಗಾಯಕ ಅಮಿತ್ ತ್ರಿವೇದಿ ಹಿಂದಿ ಹಾಡುಗಳನ್ನು ಹಾಡುವ ಮೂಲಕ ಯುವ ದಸರಾದಲ್ಲಿ ಮಿಂಚು ಹರಿಸಿದರು. ಆರ್‌ಆರ್‌ಆರ್ ಸಿನಿಮಾ ಹಾಡಿನೊಂದಿಗೆ ವೇದಿಕೆಗೆ ಆಗಮಿಸಿದ ತ್ರಿವೇದಿ, ▶ 5ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಮೇಷ್ಟ್ರು : ಮಕ್ಕಳೇ ಈ ದಿನದ ಪಾಠ ಶುರು ಮಾಡೋಣವ?

ಮಕ್ಕಳು : ಆಯ್ತು ಸಾರ್...

ಮೇಷ್ಟ್ರು : ಲೇ ಗುಂಡ, ಶಬ್ಧ ಮಾಲಿನ್ಯಕ್ಕೆ ಏನ್ ಮಾಡಬೇಕೋ?

ಗುಂಡ : ಅದು, ಅದು, ಅದು, ಕಿವಿ ಮುಚ್ಕೋಬೇಕು ಸಾರ್...

ಮೈಸೂರು ಮಿತ್ರ

ಸೋಮವಾರ, 3 ಅಕ್ಟೋಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಒಂದು ಸಾಮಾನ್ಯ ಕೆಲಸವನ್ನು ಅತ್ಯುತ್ತಮವಾಗಿ ಮಾಡುವುದರಿಂದ ಶ್ರೇಷ್ಠ ಪ್ರತಿಫಲ ದೊರಕುತ್ತದೆ. – ಸ್ವಾಮಿ ವಿವೇಕಾನಂದ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಅಕ್ಕಿ ಮೇಲೆ ಆಸೆ, ನೆಂಟರ ಮೇಲೆ ಪ್ರೀತಿ.

ನಿಮ್ಮ ಪತ್ರಗಳು

ಕನ್ನಡ ಮಾಯವಾಗಿ ಐ ಲವ್ ದಸರಾ



ಮಾನ್ಯರೆ,

ದಸರಾ ಲೈಟಿಂಗ್ ಕಮಿಟಿಯಿಂದ ಮೈಸೂರಿನ ರಾಮಕೃಷ್ಣನಗರ ವೃತ್ತದಲ್ಲಿ ಜಾಹೀರಾತು ಫಲಕ ಹಾಗೂ ನಾಡದೇವತೆ ಚಾಮುಂಡೇಶ್ವರಿ ವಿಗ್ರಹ ಮತ್ತು ಐ ಲವ್ ದಸರಾ ಸೆಲ್ಫಿ ಸ್ಪಾಟ್ ಹಾಕಿದ್ದು ಅದರಲ್ಲಿ ನಮ್ಮ ಪ್ರೀತಿಯ ದಸರಾ ಎಂದು ಹಾಕಲು ಹಿಂದೇಟು ಹಾಕಲಾಗುತ್ತಿದೆ. ಕನ್ನಡ ನಾಡಿನ ದಸರಾದಲ್ಲಿ ಅಧಿಕಾರಿಗಳ ನಿರ್ಲಕ್ಷ್ಯದಿಂದ ಕನ್ನಡವೇ ಮಾಯವಾಗಿ ಹೋಗುತ್ತಿದೆ. ಸರ್ಕಾರದ ಕಾರ್ಯಕ್ರಮಗಳಲ್ಲೇ ಕನ್ನಡ ಬಳಕೆ ಮಾಡದಿದ್ದರೆ ಜನಸಾಮಾನ್ಯರು ಹೇಗೆ ಬಳಸಿಯಾರು ಎಂಬ ಪ್ರಶ್ನೆ ಹೋರಾಟಗಾರರದ್ದಾಗಿದೆ. ಹಾಗಾಗಿ ದಸರಾ ಲೈಟಿಂಗ್ ಸಮಿತಿಯಿಂದ ಕೂಡಲೇ ಆಂಗ್ಲ ಭಾಷೆಯ ಜೊತೆಗೆ ಕನ್ನಡದಲ್ಲೂ ಹಾಕದಿದ್ದಲ್ಲಿ ಕನ್ನಡ ಹೋರಾಟಗಾರರು ಹಾಗೂ ಕನ್ನಡ ಪ್ರೇಮಿಗಳು ಪ್ರತಿಭಟನೆ ಮಾಡುವುದರಲ್ಲಿ ಸಂದೇಹವಿಲ್ಲ?

– ಅರವಿಂದ್ ಶರ್ಮ, ಸದಸ್ಯರು, ಕನ್ನಡ ಜಾಗೃತಿ ಸಮಿತಿ, ಮೈಸೂರು.

ದಸರಾ ಪುಸ್ತಕ ಮೇಳ ಆಯೋಜಿಸಬೇಕಿತ್ತು...

ಮಾನ್ಯರೆ,

ನಾಡಹಬ್ಬ ಮೈಸೂರು ದಸರಾ ಮಹೋತ್ಸವದಲ್ಲಿ ದಸರಾ ಪುಸ್ತಕ ಮೇಳ ಆಯೋಜಿಸಬೇಕಿತ್ತು. ಸರ್ಕಾರ ಎಲ್ಲಾ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಆದರೆ ಈ ವರ್ಷ ಪುಸ್ತಕ ಮೇಳ ಏರ್ಪಡಿಸದೆ ಇರುವುದು ನೋವಿನ ಸಂಗತಿ. ನಮ್ಮ ದೇಶದ ಮಹಾನ್ ವ್ಯಕ್ತಿಗಳು ಪುಸ್ತಕಗಳನ್ನು ಓದಿ ಜ್ಞಾನಿಗಳಾಗಿ, ಮೇಧಾವಿಗಳಾಗಿ, ವಿದ್ವಾಂಸರಾಗಿ, ಕವಿಗಳಾಗಿ, ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ. ಒಂದು ಪುಸ್ತಕ ಸಾವಿರ ಸ್ನೇಹಿತರಿಗೆ ಸಮವಾಗಿದೆ. ಆದ್ದರಿಂದ ಈ ವರ್ಷ ಪುಸ್ತಕ ಮೇಳ ನಡೆಯದಿರುವುದು ಪುಸ್ತಕ ಪ್ರೇಮಿಗಳಿಗೆ ನೋವುಂಟಾಗಿದೆ.

– ಹೆಚ್. ಮಣಿಕಂಠ, ಜಟ್ಟಿಹುಂಡಿ ಗ್ರಾಮ.

ಅಳಿವಿನಂಚಿನಲ್ಲಿ ಬಸವೇಶ್ವರ ದೇವಸ್ಥಾನ

ಮಾನ್ಯರೆ,

ಮೈಸೂರು ಜಿಲ್ಲೆ ಕೆ.ಆರ್.ನಗರ ತಾಲೂಕಿನಿಂದ ಸುಮಾರು 30 ಕಿಲೋ ಮೀಟರ್ ದೂರದಲ್ಲಿರುವ ಗುಡುಗನಹಳ್ಳಿಯ ಬಸವೇಶ್ವರ ದೇವಸ್ಥಾನವು ಗುಡಗನಹಳ್ಳಿ ಬಸಪ್ಪ ಎಂದು ಪ್ರಸಿದ್ಧಿ ಪಡೆದಿದ್ದು, ಇದೀಗ ಅಳಿವಿನಂಚಿನಲ್ಲಿದೆ. ಈ ದೇವಸ್ಥಾನವು ಗುಡಗನಹಳ್ಳಿಯ ಪಕ್ಕದಲ್ಲಿದ್ದು ಇದು ಚೋಳರ ಕಾಲದಲ್ಲಿ ನಿರ್ಮಾಣವಾದದ್ದಾಗಿದೆ. ಗುಡಗನಹಳ್ಳಿ, ಅಂಕನಹಳ್ಳಿ, ಹಾಡ್ಯ, ಮಾಯಿಗೌಡನಹಳ್ಳಿ, ಹಳೆಯೂರು, ದೊಡ್ಡಕೊಪ್ಪಲು ಹೀಗೆ ಸುಮಾರು 20 ಹಳ್ಳಿಯ ಜನರು ಭಕ್ತರು.

ಈ ದೇವಸ್ಥಾನವು ಈ ಹಿಂದೆ ತುಂಬಾ ಪ್ರಸಿದ್ಧಿ ಪಡೆದುಕೊಂಡಿತ್ತು. ಆದರೆ ಇತ್ತೀಚೆಗೆ ಅಲ್ಲಿಯ ಅರ್ಚಕರು, ತಾಲೂಕು ಆಡಳಿತ ಹಾಗೂ ಮುಜರಾಯಿ ಇಲಾಖೆಯ ನಿರ್ಲಕ್ಷ್ಯದಿಂದ ಅವನತಿಯ ಅಂಚಿಗೆ ಬಂದು ನಿಂತಿದೆ. ಸುತ್ತಮುತ್ತಲಿನ ಹಳ್ಳಿಯ ಜನ ತಮ್ಮ ಮನೆಗಳ ಹಸುಗಳು ಕರುವಿಗೆ ಜನ್ಮ ನೀಡಿದಾಗ ಅದರ ಹಾಲನ್ನು ದೇವರಿಗೆ ಪ್ರಸಾದವಾಗಿ ನೀಡಿ ಯಾವುದೇ ತೊಂದರೆಗಳು ಬರದಂತೆ ಬೇಡಿಕೊಳ್ಳುವ ಪ್ರತೀತಿ ಇತ್ತು. ಆದರೆ ಈಗ ದೇವಸ್ಥಾನದ ಎಲ್ಲಾ ಗೋಡೆಗಳು, ಗರ್ಭಗುಡಿ ಹಾಗೂ ದೇವರು ನೆಲಸಮವಾಗುವ ಪರಿಸ್ಥಿತಿಗೆ ತಲುಪಿದೆ.

ಹಲವಾರು ಬಾರಿ ಸ್ಥಳೀಯ ಶಾಸಕರಿಗೆ ಹಾಗೂ ತಾಲೂಕು ಆಡಳಿತಕ್ಕೆ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಹಿಂದೆ ಈ ದೇವಸ್ಥಾನಕ್ಕೆ ಸುಮಾರು 10 ಎಕರೆ ಜಮೀನು ಇತ್ತು ಎಂದು ಸ್ಥಳೀಯ ಜನರು ಹೇಳುತ್ತಾರೆ. ಈಗ ಅದ್ಯಾವುದೂ ಕೂಡ ಇಲ್ಲ. ಬೇರೆಯವರ ಪಾಲಾಗಿದೆ. ನೆಲಸಮ ಆಗುವ ಪರಿಸ್ಥಿತಿಯಲ್ಲಿರುವ ದೇವಸ್ಥಾನಕ್ಕೆ ತಾಲೂಕು ಆಡಳಿತ ಮುಜರಾಯಿ ಇಲಾಖೆಗೆ ಸೇರಿದ್ದು ಎಂದು ದೊಡ್ಡದಾಗಿ ಫಲಕವನ್ನು ಹಾಕಲಾಗಿದೆ. ಈ ದೇವಸ್ಥಾನವನ್ನು ಪುನಃ ನಿರ್ಮಾಣ ಮಾಡಬೇಕಾಗಿ ಮನವಿ. ದೇವಸ್ಥಾನಗಳು ಚೆನ್ನಾಗಿದ್ದರೆ ದೇಶವು ಕೂಡ ಚೆನ್ನಾಗಿದೆ ಎಂಬ ನಂಬಿಕೆ ಇದೆ.

– ಬಸವರಾಜಪ್ಪ ಹೆಚ್, ಕೆ.ಆರ್. ನಗರ ತಾಲೂಕು

ಅವ್ಯವಸ್ಥೆ, ಬೇಜವಾಬ್ದಾರಿ ದಸರಾ...

ಮಾನ್ಯರೆ,

ಈ ಬಾರಿಯ ದಸರಾ ಮಹೋತ್ಸವದಲ್ಲಿ ಅವ್ಯವಸ್ಥೆ, ಬೇಜವಾಬ್ದಾರಿತನ ಎದ್ದು ಕಾಣುತ್ತಿದೆ. ರಸ್ತೆಗಳಲ್ಲಿ ವಿದ್ಯುತ್ ದೀಪಾಲಂಕಾರ ಹೊರತುಪಡಿಸಿದರೆ, ಉಳಿದ ವ್ಯವಸ್ಥೆಗಳು ಸಮರ್ಪಕವಾಗಿ ಕಾಣುತ್ತಿಲ್ಲ. ಉಪಸಮಿತಿ, ಅಧಿಕಾರಿಗಳ ಬೇಜವಾಬ್ದಾರಿತನ ಹಾಸು ಹೊಕ್ಕಾಗಿದೆ.

ಖ್ಯಾತ ಶಹನಾಯ್ ವಾದಕರ ಕಾರ್ಯಕ್ರಮವನ್ನು ಗದ್ದಲದ ನಡುವೆ ಚಿಕ್ಕಗಡಿಯಾರ ಬಳಿ ನಿಗದಿಪಡಿಸಿದ್ದು, ಅಧಿಕಾರಿಗಳ ಕಾಟಾಚಾರ ಎದ್ದು ಕಾಣುತ್ತಿತ್ತು. ಮಾಧ್ಯಮಗಳಲ್ಲಿ ಈ ಬಗ್ಗೆ ಆಕ್ರೋಶ ವ್ಯಕ್ತವಾದಾಗ ಅರಮನೆ ಆವರಣಕ್ಕೆ ಸ್ಥಳಾಂತರಿಸಲಾಯಿತು. ಇನ್ನು ಕವಿಗೋಷ್ಠಿಯಲ್ಲಂತೂ ಹೇಳಲಾಗದು ಬಿಡಿ, ಉಪಸಮಿತಿಯ ಬೇಜವಾಬ್ದಾರಿ ಎಷ್ಟಿತ್ತೆಂದರೆ ನಿಧನರಾದವರಿಂದಲೂ ಕವನ ವಾಚಿಸುತ್ತಿದ್ದರು. ಸಾಮಾನ್ಯ ಜ್ಞಾನವೂ ಇಲ್ಲದವರಿಂದ ಏನನ್ನು ನಿರೀಕ್ಷಿಸಲು ಸಾಧ್ಯ. ಮೈಸೂರು–ಕೊಡಗು ಸಂಸದರನ್ನು ಚಾಮರಾಜನಗರ ಸಂಸದರೆಂದು ಆಹ್ವಾನ ಪತ್ರಿಕೆಯಲ್ಲಿ ಮುದ್ರಿಸುತ್ತಾರೆಂದರೆ ಇವರ ಜ್ಞಾನ ಎಷ್ಟಿರಬೇಕು. ಇಂತಹವರಿಂದ ದಸರಾ ಮಹೋತ್ಸವಕ್ಕೆ ಒಂದು ಕಳಂಕ, ಕಪ್ಪುಚುಕ್ಕೆ. ದಸರಾ ಉಪಸಮಿತಿಗಳಲ್ಲಿ ರಾಜಕೀಯ ಮಾಡದೆ, ಅರ್ಹರು, ಆಯಾ ಕ್ಷೇತ್ರದಲ್ಲಿ ಜ್ಞಾನವುಳ್ಳವರನ್ನು ನೇಮಿಸಿದರೆ ಇಂತಹ ಅಭಾಸಗಳು ಮರೆಯಾದಾವು. ಅಲ್ಲದೆ ಈ ಬಾರಿ ಪುಸ್ತಕ ಪ್ರದರ್ಶನ–ಮಾರಾಟವೂ ಇಲ್ಲ. ಮುಂದಿನ ಬಾರಿಯಾದರೂ ವ್ಯವಸ್ಥಿತ ದಸರಾ ಬಗ್ಗೆ ಅಧಿಕಾರಿಗಳು ಗಮನ ಹರಿಸುತ್ತಾರೆಂದು ನಿರೀಕ್ಷಿಸೋಣವೇ?

– ಅಭಯ್ ಕಿರಣ್, ಜೆ.ಸಿ.ನಗರ

154ನೇ ಗಾಂಧಿ ಜಯಂತಿ ಪ್ರಯುಕ್ತ ವಿಶ್ವ ಅಹಿಂಸಾ ದಿನಾಚರಣೆ

ಉದಾತ್ತ ಚಿಂತನೆಯಿಂದ ಗಾಂಧಿ ಸರ್ವಕಾಲಕ್ಕೂ ಪ್ರಸ್ತುತ

ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಅಭಿಮತ



ಮಾನಸಗಂಗೋತ್ರಿಯ ಗಾಂಧಿ ಭವನದಲ್ಲಿ ವಿಶ್ವ ಅಹಿಂಸಾ ದಿನಾಚರಣೆಯಲ್ಲಿ ಗಾಂಧಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.

ಮೈಸೂರು,ಅ.2(ಪಿಎಂ)– ಗಾಂಧಿಯವರು ತಮ್ಮ ಉದಾತ್ತ ಚಿಂತನೆಯಿಂದ ಮನುಕುಲದ ಉದ್ಧಾರದ ಹಾದಿ ಸುಗಮಗೊಳಿಸಿದ್ದು, ಅವರ ಮೌಲಿಕ ಚಿಂತನೆಗಳು ಸರ್ವಕಾಲಕ್ಕೂ ಪ್ರಸ್ತುತ ಎಂದು ಮೈಸೂರು ವಿವಿ ಕುಲಪತಿ ಪ್ರೊ.ಜಿ. ಹೇಮಂತ್‌ಕುಮಾರ್ ಸ್ಮರಿಸಿದರು.

ಮೈಸೂರಿನ ಮಾನಸ ಗಂಗೋತ್ರಿಯ ಗಾಂಧಿ ಭವನದ ಆವರಣದಲ್ಲಿ ಮೈಸೂರು ವಿವಿ ಗಾಂಧಿ ಅಧ್ಯಯನ ಕೇಂದ್ರ ಹಾಗೂ ಮೈಸೂರು ಜಿಲ್ಲೆ ಮತ್ತು ನಗರ ಸ್ವಾತಂತ್ರ್ಯ ಹೋರಾಟಗಾರರ ಸಂಘದ ಜಂಟಿ ಆಶ್ರಯದಲ್ಲಿ 154ನೇ ಗಾಂಧಿ ಜಯಂತಿ ಪ್ರಯುಕ್ತ ಭಾನುವಾರ ಹಮ್ಮಿಕೊಂಡಿದ್ದ ವಿಶ್ವ ಅಹಿಂಸಾ ದಿನಾಚರಣೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಷ್ಟ್ರಪಿತ ಎಂಬ ಹೆಗ್ಗಳಿಕೆಗೆ ಪಾತ್ರರಾದ ಮಹಾತ್ಮ ಗಾಂಧಿಯವರು ಭಾರತಕ್ಕೆ ಮಾತ್ರವಲ್ಲದೆ, ವಿಶ್ವದ ದೃಷ್ಟಿಯಿಂದಲೂ ಒಬ್ಬ ಅಸಾಮಾನ್ಯ ಮಹಾಪುರುಷರು. ಸ್ವಾತಂತ್ರ್ಯಪೂರ್ವ ಭಾರತದಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ಅವರು ನಡೆಸಿದ ಅವಿರತ ಹೋರಾಟ, ಕೈಗೊಂಡ ನಿರ್ಣಯ ಮತ್ತು ಅವರ ದೂರದೃಷ್ಟಿತ್ವ ದೇಶದ ಚರಿತ್ರೆಯ ಪುಟಗಳಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಯಲು ಯೋಗ್ಯವಾಗಿವೆ ಎಂದರು.

ಸತ್ಯ, ಅಹಿಂಸೆ, ಸತ್ಯಾಗ್ರಹದ ತಾತ್ವಿಕತೆ, ಆರ್ಥಿಕ, ಸಾಮಾಜಿಕ, ರಾಜಕೀಯ ವಿಚಾರ, ಸಂಸ್ಕೃತಿ, ಜನಜೀವನ, ಸಾಹಿತ್ಯ ಚಿಂತನೆಗಳು ಸೇರಿದಂತೆ ಹತ್ತು ಹಲವು ವಿಷಯಗಳಲ್ಲಿ ಇವರ ಜಿಜ್ಞಾಸೆ ನಡೆದು ಪಕ್ವಗೊಂಡು ಅವುಗಳ ಫಲಶೃತಿ ಭವ್ಯ ಭಾರತ ನಿರ್ಮಾಣದಲ್ಲಿ ಸಾರ್ಥಕವೆನಿಸಿದೆ. ಗಾಂಧಿಯವರಲ್ಲಿದ್ದ ಉದಾರತೆ, ಅಹಿಂಸಾ ಪರ ನಿಲುವು, ಮಾನವೀಯತೆ, ಸತ್ಯಸಂಧತೆ, ಲೋಕ ಕಲ್ಯಾಣ ದೃಷ್ಟಿ, ಶಾಂತಿ, ಸಹನೆ, ಸಾಧಿಸುವ ಛಲ, ಸರಳತೆ, ಸಜ್ಜನಿಕೆ ಹೀಗೆ ಹತ್ತು ಹಲವು ಗುಣಗಳು ಇವರ ಉತ್ಕೃಷ್ಟ ವ್ಯಕ್ತಿತ್ವವನ್ನು ಬೆಳೆಸುವಲ್ಲಿ ಸಹಕಾರಿಯಾಗಿವೆ ಎಂದರು.

ಸಾಮರಸ್ಯದ ಮೂಲಮಂತ್ರವನ್ನು ತಾವೂ ಮೈಗೂಡಿಸಿಕೊಂಡು ಇತರರಿಗೂ ಬೋಧಿಸಿದ ರಾಷ್ಟ್ರಪಿತನ ಸಮತಾಭಾವ, ಐಕ್ಯಮತದ ವಿಚಾರಗಳು, ಚಿಂತನೆಗಳು ಪ್ರಸ್ತುತ ಸಂದರ್ಭದಲ್ಲಿ ವಿಶ್ವಕ್ಕೆ ಬೇಕಾದ ಅನರ್ಘ್ಯ ರತ್ನಗಳಾಗಿವೆ. ಅಂತ್ಯೋದಯ, ಸರ್ವೋದಯ ಎಂಬ ಮಂತ್ರದ ಮೂಲಕ ಜನಕಲ್ಯಾಣದ ಕನಸನ್ನು ಕಂಡವರು ಗಾಂಧಿ ಎಂದು ತಿಳಿಸಿದರು.

ಯಂತ್ರಯುಗದ ಜಾಗತಿಕರಣದ ಭರಾಟೆಯಲ್ಲಿ ಬಸವಳಿದು ದಿನದಿಂದ ದಿನಕ್ಕೆ ಕ್ಷೀಣಿಸುತ್ತಿರುವ ಮಾನವನ ಮನಸ್ಸನ್ನು ಮನಶ್ಚೇತನಗೊಳಿಸುವ ಮತ್ತು ಸನ್ಮಾರ್ಗದಲ್ಲಿ ಕೊಂಡೊಯ್ಯುವ ದಿಶೆಯಲ್ಲಿ ಗಾಂಧಿ ಚಿಂತನೆಗಳು ಸಮಕಾಲೀನ ಸಂದರ್ಭದಲ್ಲಿ ಹೆಚ್ಚು ಮಹತ್ವದಾಗಿವೆ. ಬಹುಶಃ ಗಾಂಧಿಯವರ ಬದುಕಿನ ಮತ್ತು ಚಿಂತನೆಯ ಪ್ರಸ್ತುತತೆ ಅಂದಿಗಿಂತ ಇಂದು ಹೆಚ್ಚು ಎನಿಸುತ್ತದೆ. ಅವರ ಎಲ್ಲಾ ಸಾಮಾಜಿಕ, ಆರ್ಥಿಕ ಮತ್ತು ದಾರ್ಶನಿಕ ಚಿಂತನೆಗಳು ಮುಂದಿನ ತಲೆಮಾರಿಗೆ ಆದರ್ಶ. ಪ್ರಸ್ತುತ ದಿನಗಳಲ್ಲಿ ಯುವ ಜನಾಂಗ ಗಾಂಧಿಯವರ ಬದುಕು, ಬರಹ, ಮಾದರಿಗಳನ್ನು ತಮ್ಮ ಜೀವನದಲ್ಲಿ ರೂಢಿಸಿಕೊಂಡರೆ ಅದಕ್ಕಿಂತ ಆದರ್ಶ ಮತ್ತೊಂದಿಲ್ಲ. ಈ ಕಾರಣಗಳಿಂದ ಅವರ ಚಿಂತನೆ ಕುರಿತ ಅಧ್ಯಯನಶೀಲತೆ ಇಂದು ವಿಶ್ವವ್ಯಾಪಿಯಾಗಿದೆ ಎಂದರು.

'ಗಾಂಧಿ ಚಿಂತನೆ' ಕುರಿತು ಮೈಸೂರು ವಿವಿ 'ಪ್ರಸಾರಾಂಗ'ದ ನಿವೃತ್ತ ಉಪನಿರ್ದೇಶಕ ಸ.ರ. ಸುದರ್ಶನ ಮಾತನಾಡಿ, ಮಾತೃಭಾಷೆಯಲ್ಲಿ ಶಿಕ್ಷಣ ಮಾಧ್ಯಮ ಇರಬೇಕೆಂಬುದು ಗಾಂಧಿಯವರ ನಿಲುವಾಗಿತ್ತು. ಹೀಗಾಗಿ ಅವರು 'ನನ್ನ ಭಾಷೆಯಾದ ಗುಜರಾತಿಯಲ್ಲಿ 1 ವರ್ಷದಲ್ಲಿ ಕಲಿಯುವುದನ್ನು ಇಂಗ್ಲಿಷ್‌ನಲ್ಲಿ ಕಲಿಯಲು ನಾಲ್ಕು ವರ್ಷ ಬೇಕು' ಎಂದಿದ್ದರು. ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಪ್ರಾದೇಶಿಕ ಭಾಷೆಗಳಿಗೆ ಮಹತ್ವ ಕೊಟ್ಟಿರುವುದಾಗಿ ಸರ್ಕಾರ ಹೇಳುತ್ತಿದೆ. ಸರ್ಕಾರ ಇದಕ್ಕೆ ಬದ್ಧವಾಗಿ ಶಾಲಾ ಶಿಕ್ಷಣವನ್ನಾದರೂ ಪ್ರಾದೇಶಿಕ ಭಾಷೆಗಳ ಮಾಧ್ಯಮದಲ್ಲಿ ನೀಡಲು ಮುಂದಾಗಬೇಕು ಎಂದು ಆಗ್ರಹಿಸಿದರು.

ಮಹಾತ್ಮ ಗಾಂಧಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಸ್ವಾತಂತ್ರ್ಯ ಹೋರಾಟಗಾರರಾದ ಮಾಣಿಕ್ಯ ಕಾರ್ಯಕ್ರಮ ಉದ್ಘಾಟಿಸಿದರು. ಮುಖ್ಯ ಅತಿಥಿಯಾಗಿ ಸ್ವಾತಂತ್ರ್ಯ ಹೋರಾಟಗಾರರ ಸಂಘದ ಅಧ್ಯಕ್ಷ ವೈ.ಸಿ.ರೇವಣ್ಣ ಭಾಗವಹಿಸಿದ್ದರು. ಮೈಸೂರು ವಿವಿ ಕುಲಸಚಿವ ಪ್ರೊ.ಆರ್.ಶಿವಪ್ಪ, ಗಾಂಧಿ ಭವನ ನಿರ್ದೇಶಕ ಪ್ರೊ. ಎಂ.ಶಂಕರ್ ಸೇರಿದಂತೆ ಮತ್ತಿತರರು ಹಾಜರಿದ್ದರು.

ದಲಿತರಿಗೆ ಪ್ರತ್ಯೇಕ ಮತದಾನದ ಹಕ್ಕು; ಸಂವಿಧಾನದಲ್ಲಿ ಅಳವಡಿಸಲು ಅವಕಾಶವಿದ್ದರೂ ಸೂಕ್ತವಲ್ಲವೆಂದು ಅಂಬೇಡ್ಕರ್ ಕೈಬಿಟ್ಟಿರಬೇಕು

ಮೈಸೂರು ವಿವಿ ಆಡಳಿತಾಂಗ ಕುಲಸಚಿವ ಪ್ರೊ. ಆರ್.ಶಿವಪ್ಪ ಅಭಿಮತ


ಮೈಸೂರು,ಅ.2(ಪಿಎಂ)– ದಲಿತ ಸಮುದಾಯಕ್ಕೆ ಪ್ರತ್ಯೇಕ ಮತದಾನದ ಹಕ್ಕನ್ನು ಸಂವಿಧಾನದಲ್ಲಿ ಅಳವಡಿಸಲು ಅವಕಾಶವಿದ್ದರೂ ಸೂಕ್ತವಲ್ಲವೆಂದು ಅಂಬೇಡ್ಕರ್ ಅವರು ಅದನ್ನು ಕೈಬಿಟ್ಟಿರಬಹುದು ಎಂದು ಮೈಸೂರು ವಿವಿ ಆಡಳಿತಾಂಗ ಕುಲಸಚಿವ ಪ್ರೊ.ಆರ್.ಶಿವಪ್ಪ ಅಭಿಪ್ರಾಯಪಟ್ಟರು.

ಮೈಸೂರಿನ ಮಾನಸಗಂಗೋತ್ರಿಯ ಗಾಂಧಿ ಭವನದ ಆವರಣದಲ್ಲಿ ಭಾನುವಾರ 154ನೇ ಗಾಂಧಿ ಜಯಂತಿ ಪ್ರಯುಕ್ತ ಹಮ್ಮಿಕೊಂಡಿದ್ದ ವಿಶ್ವ ಅಹಿಂಸಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ಪ್ರತ್ಯೇಕ ಮತದಾನದ ಹಕ್ಕನ್ನು ವಿವಿಧ ಸಮುದಾಯಗಳು ಬೇಕೆಂದು ಬೇಡಿಕೆ ಇಟ್ಟರೆ ಎದುರಾಗುವ ಸನ್ನಿವೇಶವನ್ನು ಊಹಿಸಿಕೊಳ್ಳುವುದು ಕಷ್ಟ. ಬಹುಶಃ ಗಾಂಧಿಯವರು ಪ್ರತ್ಯೇಕ ಮತದಾನದಿಂದ ಸಮುದಾಯಗಳನ್ನು ಒಗ್ಗೂಡಿಸಲು ಸಾಧ್ಯವಿಲ್ಲವೆಂದು ಭಾವಿಸಿರಬಹುದು. ಈ ಹಿನ್ನೆಲೆಯಲ್ಲಿ 'ಪೂನಾ ಒಪ್ಪಂದ' ಆಗಿರಬಹುದು. ಕಟ್ಟ ಅಂಬೇಡ್ಕರ್ ಚಿಂತನೆಯನ್ನೇ ಪ್ರತಿಪಾದಿಸುವವರು ಪೂನಾ ಒಪ್ಪಂದ ವಿರೋಧಿಸುತ್ತಾರೆ. ಆದರೆ ಅಂಬೇಡ್ಕರ್ ಅವರಿಗೂ ಸಂವಿಧಾನ ರಚನೆ ವೇಳೆಗೆ ಪ್ರತ್ಯೇಕ ಮತದಾನದ ಹಕ್ಕು ಸೂಕ್ತವಲ್ಲ ಎನ್ನಿಸಿರಬಹುದು ಎಂದು ತಿಳಿಸಿದರು.

ದಲಿತ ಸಮುದಾಯಕ್ಕೆ ಪ್ರತ್ಯೇಕ ಮತದಾನದ ಹಕ್ಕು ನೀಡುವ ಪ್ರಸ್ತಾಪ ಕೈಬಿಡುವ 'ಪೂನಾ ಒಪ್ಪಂದ' ಸ್ವಾತಂತ್ರ್ಯಪೂರ್ವ 1932ರಲ್ಲಿ ಆಗಿದೆ. ಇದಾದ ಮೇಲೆ ಸ್ವಾತಂತ್ರ್ಯ ಭಾರತದಲ್ಲಿ ಸಂವಿಧಾನ ಕರಡು ಸಮಿತಿಗೆ ಅಂಬೇಡ್ಕರ್ ಅವರೇ ಅಧ್ಯಕ್ಷರಾಗುತ್ತಾರೆ. ಹೀಗಾಗಿ ಅಂಬೇಡ್ಕರ್ ಅವರು ಈ ಸಂದರ್ಭದಲ್ಲಿ ದಲಿತ ಸಮುದಾಯಕ್ಕೆ ಪ್ರತ್ಯೇಕ ಮತದಾನದ ಹಕ್ಕು ಕಲ್ಪಿಸುವ ವ್ಯವಸ್ಥೆ ಅಳವಡಿಸಬಹುದಿತ್ತು. ಆದರೆ ಅಂಬೇಡ್ಕರ್ ಅವರಿಗೂ ಇದು ಸೂಕ್ತವಲ್ಲ ಎನ್ನಿಸಿರಬಹುದು. ಈ ಹಿನ್ನೆಲೆಯಲ್ಲಿ ದಲಿತರಿಗೆ ಪ್ರತ್ಯೇಕ ಮತದಾನ ಹಕ್ಕು ಬೇಡವೆಂದೇ ಬಿಟ್ಟಿದ್ದಾರೆ ಎಂಬುದು ನನ್ನ ಭಾವನೆ ಎಂದರು. ಗಾಂಧಿಯವರ ಪ್ರೀತಿ–ವಿಶ್ವಾಸ, ಅಹಿಂಸೆ ಮತ್ತು ಸತ್ಯದ ಅಸ್ತ್ರಗಳು ಎಂದೆಂದಿಗೂ ಪ್ರಸ್ತುತ. ಅವರ ಬದುಕಿನ ರೀತಿ ಇಡೀ ಮನುಕುಲಕ್ಕೂ ಆದರ್ಶ. ವ್ಯಕ್ತಿ, ಕುಟುಂಬ, ನೆರೆಹೊರೆ, ಸಮುದಾಯ ಹಾಗೂ ಸಮಾಜ ಈ ಎಲ್ಲಾ ನೆಲೆಗಳಲ್ಲೂ ಗಾಂಧಿ ಅತ್ಯಂತ ಪ್ರಸ್ತುತ ಆಗುತ್ತಾರೆ ಎಂದರು.

ಆಲನಹಳ್ಳಿ ಹಿರಿಯ ನಾಗರಿಕರ ನಿವಾಸದಲ್ಲಿ 30ನೇ ವಾರ್ಷಿಕೋತ್ಸವ

ಲೋಕಕಲ್ಯಾಣಾರ್ಥ ವಿವಿಧ ಹೋಮ, ಹವನ



ಬಿ.ವಿ.ಶ್ರೀನಿವಾಸಗುಪ್ತ ಅವರ 'ಸವಿ ನೆನಪುಗಳೇ ಜೀವನ ಸಾರ' ಪುಸ್ತಕವನ್ನು ಲೇಖಕ, ಅನುವಾದಕ ಪ್ರಧಾನ ಗುರುದತ್ತ, ಉದ್ಯಮಿ ಜಗನ್ನಾಥ್ ಶೆಣೈ, ನಿವೃತ್ತ ಪ್ರಾದೇಶಿಕ ಆಯುಕ್ತ ಕೆ.ಎಂ.ಚಂದ್ರೇಗೌಡ, ಪ್ರೊ.ವೆಂಕಟರಮಣಶೆಟ್ಟಿ ಅವರು ಸಾಮೂಹಿಕವಾಗಿ ಬಿಡುಗಡೆ ಮಾಡಿದರು.

ಮೈಸೂರು,ಅ.2(ಆರ್‌ಕೆಬಿ)–ಮೈಸೂರಿನ ಆಲನಹಳ್ಳಿ ಬಡಾವಣೆಯ ನಾಡನಹಳ್ಳಿ ರಸ್ತೆಯಲ್ಲಿ ಶ್ರೀ ವಾಸವಿ ಶಾಂತಿಧಾಮ ಪಬ್ಲಿಕ್ ಚಾರಿಟಬಲ್ ಟ್ರಸ್ಟ್ ಆಶ್ರಯದಲ್ಲಿ ನಡೆಯುತ್ತಿರುವ ಹಿರಿಯ ನಾಗರಿಕರ ನಿವಾಸದ 30ನೇ ವಾರ್ಷಿಕೋತ್ಸವದ ಅಂಗವಾಗಿ ಭಾನುವಾರ ಲೋಕಕಲ್ಯಾಣಾರ್ಥವಾಗಿ ಹಾಗೂ ಆಶ್ರಮದ ನಿವಾಸಿಗಳ ಕ್ಷೇಮಾಭಿವೃದ್ಧಿಗಾಗಿ ಗಣಪತಿ, ಕುಲದೇವತಾ ಶ್ರೀಮತ್ ಕನ್ಯಕಾಪರಮೇಶ್ವರಿ, ಶ್ರೀ ವೆಂಕಟೇಶ್ವರಸ್ವಾಮಿ ಹಾಗೂ ನವಗ್ರಹ ದೇವತೆಗಳ ಸನ್ನಿಧಿಯಲ್ಲಿ ವಿವಿಧ ಹೋಮ ಮತ್ತು ಹವನಗಳನ್ನು ಒಳಗೊಂಡ ವರ್ಧಂತ್ಯೋತ್ಸವ ಕಾರ್ಯಕ್ರಮ ನೆರವೇರಿಸಲಾಯಿತು.

ಟ್ರಸ್ಟ್‌ನ ಗೌರವ ಕಾರ್ಯದರ್ಶಿ ಬಿ.ವಿ.ಶ್ರೀನಿವಾಸಗುಪ್ತ, ಉಪಾಧ್ಯಕ್ಷ ಆನಂದಕುಮಾರ್, ಖಜಾಂಚಿ ಬಿ.ಎಸ್.ಶ್ರೀನಿವಾಸಮೂರ್ತಿ ನೇತೃತ್ವದಲ್ಲಿ ನಡೆದ ಹೋಮ, ಹವನ ಕಾರ್ಯಕ್ರಮದಲ್ಲಿ ವಿವಿಧ ಗಣ್ಯರು ಅತಿಥಿಯಾಗಿ ಭಾಗವಹಿಸಿದ್ದರು. ಬೆಳಗ್ಗೆ 7ರಿಂದಲೇ ಆರಂಭವಾದ ಹೋಮ, ಹವನ 10.30ರ ವೇಳೆಗೆ ಮಹಾ ಪೂರ್ಣಾಹುತಿ, ಮಂತ್ರಪುಷ್ಪ, ತೀರ್ಥ ಪ್ರಸಾದ ವಿನಿಯೋಗ, ವೇದಮೂರ್ತಿಗಳಿಂದ ವೇದಾಶಿರ್ವಚನಗಳೊಂದಿಗೆ ಸಂಪನ್ನಗೊಂಡಿತು.

'ಸವಿ ನೆನಪುಗಳೇ ಜೀವನ ಸಾರ' ಪುಸ್ತಕ ಬಿಡುಗಡೆ

ನಂತರ ಟ್ರಸ್ಟ್ ಗೌರವ ಕಾರ್ಯದರ್ಶಿ ಬಿ.ವಿ.ಶ್ರೀನಿವಾಸಗುಪ್ತ ಅವರ 'ಸವಿ ನೆನಪುಗಳೇ ಜೀವನ ಸಾರ' ಪುಸ್ತಕವನ್ನು ಲೇಖಕ, ಅನುವಾದಕ ಪ್ರಧಾನ ಗುರುದತ್ತ, ಉದ್ಯಮಿ ಜಗನ್ನಾಥ್ ಶೆಣೈ ನಿವೃತ್ತ ಪ್ರಾದೇಶಿಕ ಆಯುಕ್ತ ಕೆ.ಎಂ.ಚಂದ್ರೇಗೌಡ, ಪ್ರೊ.ವೆಂಕಟರಮಣಶೆಟ್ಟಿ ಅವರು ಸಾಮೂಹಿಕವಾಗಿ ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿದ ಪ್ರಧಾನ ಗುರುದತ್ತ, ಶ್ರೀನಿವಾಸಗುಪ್ತ ಅವರು ತಮ್ಮ ಪುಸ್ತಕದಲ್ಲಿ ಬರೀ ಸವಿನೆನಪುಗಳನ್ನೇ ಹೇಳಿದ್ದಾರೆ. ಒಂದು ಆಶ್ರಮ ನಡೆಸಬೇಕಾದರೆ, ಅದರಲ್ಲೂ ಹಿರಿಯ ನಾಗರಿಕರ ಆಶ್ರಮ ನಡೆಸುವುದೆಂದರೆ ಅಷ್ಟು ಸುಲಭದ ಕೆಲಸವಲ್ಲ. ನಾನು ಹಲವು ದೇಶ–ವಿದೇಶಗಳಲ್ಲಿ ಇಷ್ಟೊಂದು ಉತ್ತಮವಾದ ಆಶ್ರಮವನ್ನು ನೋಡೇ ಇರಲಿಲ್ಲ. ಅಷ್ಟೊಂದು ಉತ್ತಮವಾಗಿ ಅದನ್ನು ನಡೆಸುತ್ತಾ ಯಶಸ್ವಿಯಾಗಿದ್ದಾರೆ. ಅದೇ ರೀತಿ ಅವರು ಆಶ್ರಮದಲ್ಲಿರುವ ನಿವಾಸಿಗಳ ಅನಿಸಿಕೆ, ಅನುಭವಗಳನ್ನು ಕುರಿತು ಮತ್ತೊಂದು ಪುಸ್ತಕ ಬರೆಯುವಂತೆ ಸಲಹೆ ನೀಡಿದರು.

ಉದ್ಯಮಿ ಜಗನ್ನಾಥ ಶೆಣೈ ಮಾತನಾಡಿ, ಈ ರೀತಿಯಲ್ಲೂ ಆಶ್ರಮ ನಡೆಸುವವರಿದ್ದಾರೆ. ಬರೀ ಒಂದೂಕಾಲು ಸಾವಿರ ರೂ.ನಲ್ಲಿ ಆಶ್ರಮ ನಿರ್ಮಿಸಿ, ಇದು ಅದರ ಆಸ್ತಿ ಕೋಟ್ಯಂತರ ಬೆಲೆಬಾಳುವಂತಿದೆ ಎಂದು ಶ್ರೀನಿವಾಸಗುಪ್ತರ ಕಾರ್ಯ ಚಟುವಟಿಕೆಗಳನ್ನು ಶ್ಲಾಘಿಸಿದರು. ಇದೇ ಸಂದರ್ಭದಲ್ಲಿ ಬರಹಗಾರ್ತಿ ವಿಜಯಾ ಚಂದ್ರಮೌಳೇಶ್ವರ ಅವರು ತಮ್ಮ ತಂದೆ–ತಾಯಿಯರ ಹೆಸರಿನಲ್ಲಿ ಕಟ್ಟಿಸಿರುವ (ಎನ್‌ಆರ್‌ಐ ಕಾಟೇಜು) ನೂತನ ಕಟ್ಟಡದ ಗೃಹ ಪ್ರವೇಶ ನಡೆಸಲಾಯಿತು. ಕಾರ್ಯಕ್ರಮದಲ್ಲಿ ವಿಜಯಾ ಚಂದ್ರ ಮೌಳೇಶ್ವರ, ಟ್ರಸ್ಟ್‌ನ ನಿರ್ದೇಶಕ ಧರ್ಮದರ್ಶಿಗಳಾದ ಕಡಬಂ ಸತೀಶ್, ಆರ್.ರಾಜೇಶ್, ಕೆ.ಕೆ.ರಾಜೇಶ್‌ಬಾಬು, ಹೆಚ್.ವಿ.ನಾಗೇಂದ್ರ ಶೆಟ್ಟಿ, ಬಿ.ಶ್ರೀರಾಮ್ ಭಗವತ್, ಎಸ್.ಶ್ರೀಕಾಂತ್ ಗುಪ್ತ, ಕೆ.ಜಿ. ಶ್ರೀನಾಥ್, ಬಿ.ವಿಜಯಲಕ್ಷ್ಮೀ ಮುರಳೀಧರ್, ಜಿಎಸ್‌ಎಸ್‌ಎಸ್‌ನ ಗೌರವ ಕಾರ್ಯದರ್ಶಿ ವನಜಾ ಪಂಡಿತ್ ಇನ್ನಿತರರು ಉಪಸ್ಥಿತರಿದ್ದರು.

ಕೆ.ಆರ್.ಆಸ್ಪತ್ರೆಯಲ್ಲಿ ಗಾಂಧಿ ಜಯಂತಿ



ಮೈಸೂರು, ಅ.2(ಆರ್‌ಕೆ)–ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಇಂದು ರಾಷ್ಟ್ರಪಿತ ಮಹಾತ್ಮಗಾಂಧಿ ಜಯಂತಿಯನ್ನು ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು.

ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಡೀನ್ ಅಂಡ್ ಡೈರೆಕ್ಟರ್ ಡಾ.ಕೆ.ಆರ್.ದಾಕ್ಷಾಯಿಣಿ, ಮಹಾತ್ಮ ಗಾಂಧಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ನಂತರ ಮಾತನಾಡಿದ ಅವರು, ಅಹಿಂಸೆ ಮೂಲಕ ಹೋರಾಡಿ ಭಾರತಕ್ಕೆ ಸ್ವಾತಂತ್ರ್ಯ ತಂದು ಕೊಟ್ಟು ರಾಷ್ಟ್ರಪಿತರೆನಿಸಿಕೊಂಡರು. ಅವರ ತತ್ವ, ಅಹಿಂಸಾ ಮಾರ್ಗವನ್ನು ಅಳವಡಿಸಿಕೊಂಡಲ್ಲಿ ಮಾತ್ರ ನಾವು ಅವರಿಗೆ ಗೌರವ ಸಲ್ಲಿಸಿದಂತಾಗುತ್ತದೆ ಎಂದರು.

ಭಾರತದ ಮಾಜಿ ಪ್ರಧಾನಿಗಳಾದ ಲಾಲ್‌ಬಹದ್ದೂರ್ ಶಾಸ್ತ್ರಿ ಅವರು 'ಜೈ ಜವಾನ್–ಜೈ ಕಿಸಾನ್' ಘೋಷಿಸುವ ಮೂಲಕ ದೇಶವನ್ನು ಅತ್ಯುನ್ನತ ಮಟ್ಟಕ್ಕೆ ಕೊಂಡೊಯ್ದರು. ಈ ಇಬ್ಬರು ಮಹನೀಯರೊಂದಿಗೆ ಹಲವರು ಸ್ವಾತಂತ್ರ್ಯಕ್ಕಾಗಿ ಹೋರಾಡಿದರು. ಅವರ ತತ್ವ, ಆದರ್ಶ, ದೇಶಪ್ರೇಮವನ್ನು ಪ್ರತಿಯೊಬ್ಬರೂ ಅನುಸರಿಸುವಂತೆಯೂ ಕರೆ ನೀಡಿದರು.

ಕೆ.ಆರ್.ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಎನ್.ನಂಜುಂಡಸ್ವಾಮಿ, ಸ್ಥಾನಿಕ ವೈದ್ಯಾಧಿಕಾರಿ ಡಾ.ರಾಜೇಶ್, ಪ್ರಾಧ್ಯಾಪಕರಾದ ಡಾ.ಶಶಿಕುಮಾರ್, ಡಾ.ಬ್ರಹ್ಮೇಂದ್ರ, ಡಾ. ಪ್ರಸಾದ್, ಡಾ.ಚೇತನ್, ನರ್ಸಿಂಗ್ ಸೂಪರಿಂಟೆಂಡೆಂಟ್‌ಗಳಾದ ಗಂಗಮ್ಮ, ಕೋಮಲ, ಕಣ್ಣಮ್ಮ, ಹೌಸ್ ಕೀಪಿಂಗ್ ಮತ್ತು ಭದ್ರತಾ ವಿಭಾಗದ ಮಹದೇವು, ಮಹದೇವಸ್ವಾಮಿ, ಜಗದೀಶ್, ಕುಮಾರ್, ಮಂಗಳಗೌರಿ, ಆದಿಶೇಷ, ಆಸ್ಪತ್ರೆ ಸಿಬ್ಬಂದಿ ಪಾಲ್ಗೊಂಡಿದ್ದರು.

ಇಂದು ದುರ್ಗಾ ಹೋಮ

ಮೈಸೂರು, ಅ.2–ಮೈಸೂರಿನ ರಾಜರಾಜೇಶ್ವರಿ ನಗರದಲ್ಲಿರುವ ಶ್ರೀ ರಾಜರಾಜೇಶ್ವರಿ ದೇವಸ್ಥಾನದಲ್ಲಿ ಶರನ್ನವರಾತ್ರಿ ಮಹೋತ್ಸವವನ್ನು ಆಚರಿಸಲಾಗುತ್ತಿದ್ದು, ದುರ್ಗಾಷ್ಟಮಿ ಪ್ರಯುಕ್ತ ಅ.3ರಂದು ದುರ್ಗಾ ಹೋಮವನ್ನು ಏರ್ಪಡಿಸಲಾಗಿದೆ. ಅಂದು ಬೆಳಗ್ಗೆ 9 ಗಂಟೆಗೆ ಹೋಮ ಆರಂಭವಾಗಲಿದ್ದು, ಮಧ್ಯಾಹ್ನ 12.15ಕ್ಕೆ ಪೂರ್ಣಾಹುತಿ ನಡೆಯಲಿದೆ. ಅಂದು ತಾಯಿ ರಾಜರಾಜೇಶ್ವರಿ ದೇವಿಗೆ ದುರ್ಗಾ ಅಲಂಕಾರ ಮಾಡಲಾಗುವುದು. ಸಂಜೆ ವಿದುಷಿ ಶುಭಾ ರಾಘವೇಂದ್ರ ಶಿಷ್ಯ ವೃಂದದಿಂದ ದೇವರನಾಮ ಮತ್ತು ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ನಡೆಯಲಿದೆ. ಜೊತೆಗೆ ಶ್ರೀ ರಾಜರಾಜೇಶ್ವರಿ ಭಜನಾ ಮಂಡಳಿಯವರಿಂದ ಲಲಿತಾ ಸಹಸ್ರನಾಮ ಕಾರ್ಯಕ್ರಮ ಏರ್ಪಡಿಸಲಾಗಿದೆ.

'ಭಾರತ್ ಜೋಡೋ' ಯಾತ್ರೆಯಿಂದ ಬಿಜೆಪಿಗೆ ಭಯ, ಮುಜುಗರ ಇಲ್ಲ

ಒಡೆದ ಕಾಂಗ್ರೆಸ್ ಗುಂಪುಗಳ ಜೋಡಿಸುವ ಯಾತ್ರೆ ಅದು: ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ವ್ಯಂಗ್ಯ



ಮೈಸೂರು, ಅ.2(ಆರ್‌ಕೆಬಿ)– ಕಾಂಗ್ರೆಸ್‌ನ ರಾಹುಲ್ ಗಾಂಧಿ ಕೈಗೊಂಡಿರುವ 'ಭಾರತ್ ಜೋಡೋ' ಪಾದಯಾತ್ರೆಯಿಂದ ಬಿಜೆಪಿಗೆ ಯಾವುದೇ ಭಯವಾಗಲೀ, ಮಜುಗರವಾಗಲೀ ಇಲ್ಲ. ಯಾತ್ರೆ ಕೇವಲ ವೈಯಕ್ತಿಕ ಪ್ರಚಾರಕ್ಕಾಗಿ ಹಾಗೂ ಒಡೆದು ಹೋಗಿರುವ ಕಾಂಗ್ರೆಸ್ ಜೋಡೋ ಪಾದಯಾತ್ರೆ ಅದು ಎಂದು ಸಹಕಾರ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಇಂದಿಲ್ಲಿ ಗೇಲಿ ಮಾಡಿದರು.

ಮೈಸೂರು ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತ್ ಜೋಡೋ ಪಾದಯಾತ್ರೆ ಮಾಡಿಕೊಳ್ಳಲಿ. ನಮ್ಮದೇನೂ ಅಭ್ಯಂತರವಿಲ್ಲ. ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅವರು ರಾಹುಲ್ ಗಾಂಧಿ ಅವರ ಬಾಯಿಂದ ಬಿಜೆಪಿ ಬಗ್ಗೆ ಇಲ್ಲಸಲ್ಲದ ಸುಳ್ಳು ಹೇಳಿಕೆಗಳನ್ನು ಹೇಳಿಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪಿಎಫ್‌ಐ ನಿಷೇಧ ಕುರಿತಂತೆ ಕೇಂದ್ರ ಗೃಹ ಇಲಾಖೆ ಮಾಹಿತಿಗಳನ್ನು ಕಲೆ ಹಾಕಿ ಪಿಎಫ್‌ಐ ನಿಷೇಧಿಸುವ ಐತಿಹಾಸಿಕ ತೀರ್ಮಾನ ಕೈಗೊಂಡಿದೆ. ಅದನ್ನು ನಾವು ಸ್ವಾಗತಿಸಿದ್ದೇವೆ. ಇದು ಸಾರ್ವಜನಿಕರ ಬೇಡಿಕೆಯೂ ಆಗಿತ್ತು. ಪಿಎಫ್‌ನ ದುಷ್ಕೃತ್ಯಗಳನ್ನು ಮಟ್ಟ ಹಾಕಲು ಈ ಕ್ರಮ ಕೈಗೊಳ್ಳಲಾಗಿದೆ. ಹಲವು ಸಮಾಜ ವಿರೋಧಿ ಘಟನೆಗಳಲ್ಲಿದ್ದವರನ್ನು ಪೊಲೀಸರು ಬಂಧಿಸಿದ್ದಾರೆ. ಹಿರಿಯ ಐಪಿಎಸ್ ಅಧಿಕಾರಿಗಳು ಈ ಕಾರ್ಯವನ್ನು ಯಶಸ್ವಿಯಾಗಿ ಮಾಡಿದ್ದಾರೆ. ಆದರೆ ಇವೆಲ್ಲವೂ ರಾಹುಲ್ ಗಾಂಧಿಗೆ ತಿಳಿದಿಲ್ಲ. 2013ರಿಂದ 2018 ರವರೆಗೆ ಏನಾಯಿತು ಎಂಬುದು ರಾಹುಲ್ ಗಾಂಧಿಗೆ ಗೊತ್ತಿಲ್ಲ. ರಾಹುಲ್‌ಗಾಂಧಿ ಹೇಳಿಕೆ ನೀಡುವ ಮುನ್ನ ಇದೆಲ್ಲವನ್ನು ತಿಳಿದುಕೊಳ್ಳಬೇಕು ಎಂದು ಹೇಳಿದರು.

ರಾಹುಲ್ ಪಾದಯಾತ್ರೆಯ ಯಾವುದೇ ಬ್ಯಾನರ್‌ಗಳನ್ನು ಕೀಳುವ ಹೀನ ಮನಸ್ಥಿತಿ ನಮ್ಮ ಕಾರ್ಯಕರ್ತರಿಗಿಲ್ಲ. ಅಂತಹ ಕೆಲಸಕ್ಕೆ ಬಿಜೆಪಿಯವರು ಕೈ ಹಾಕುವುದಿಲ್ಲ. ಅವರೇ ಕಿತ್ತು ಹಾಕಿ, ಪುಕ್ಕಟೆ ಪ್ರಚಾರ ಪಡೆಯಲು ಇಂತಹ ಕೆಲಸಕ್ಕೆ ಕಾಂಗ್ರೆಸ್ ಕೈಹಾಕಿದೆ. ಪಾದಯಾತ್ರೆಗೆ ನಮ್ಮ ಅಭ್ಯಂತರವಿಲ್ಲ. ನಮಗೂ ಹೋರಾಟ ಮಾಡುವ ಶಕ್ತಿ ಇದೆ. ಕಾಂಗ್ರೆಸ್‌ಗೆ ಪ್ರತಿಯಾಗಿ ಬ್ಯಾನರ್, ಪಾದಯಾತ್ರೆ ಮಾಡುವ ಶಕ್ತಿ ನಮ್ಮಲ್ಲೂ ಇದೆ ಎಂದು ಲೇವಡಿ ಮಾಡಿದರು.

ಕಾಂಗ್ರೆಸ್‌ನಲ್ಲಿರುವ ಗುಂಪುಗಳ ಒಂದು ಮಾಡಲು ಈ ಪಾದಯಾತ್ರೆ ಮಾಡಿಕೊಂಡಿದ್ದಾರೆಯೇ ಹೊರತು ಅದರಿಂದ ಬಿಜೆಪಿಗೆ ಯಾವುದೇ ಭಯ, ಮುಜುಗರ ಇಲ್ಲ ಎಂದು ಸೋಮಶೇಖರ್ ಪುನರುಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಸಿದ್ದರಾಜು, ರಾಜ್ಯ ವಕ್ತಾರ ಎಂ.ಜಿ. ಮಹೇಶ್, ಜಿಲ್ಲಾ ಗ್ರಾಮಾಂತರ ಅಧ್ಯಕ್ಷೆ ಮಂಗಳಾ ಸೋಮಶೇಖರ್, ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೂರನೇ ಪುಟದಿಂದ

ಮಂಗ್ಲಿ ಗಾಯನ ಮೋಡಿ









ಯುವ ಸಮೂಹಕ್ಕೆ ಸಂಗೀತದ ಝಲಕ್ ನೀಡಿದರು.

ಪುಳಕ ನೀಡಿದ ಸ್ಟಾರ್ ನೈಟ್: ಖ್ಯಾತ ನಟಿ ಹರ್ಷಿಕಾ ಪೂಣಚ್ಚ ನೇತೃತ್ವದಲ್ಲಿ ನಡೆದ 'ಸ್ಟಾರ್ ನೈಟ್' ಕಾರ್ಯಕ್ರಮದಲ್ಲಿ ಹಾಡು ನೃತ್ಯ ಹಾಗೂ ಹಾಸ್ಯದ ಹೊನಲು ನೋಡುಗರಿಗೆ ಹೊಸ ಪುಳಕ ನೀಡಿತು. ಹಾಸ್ಯನಟರಾದ ತಬಲ ನಾಣಿ ಹಾಗೂ ಮಿತ್ರಾ ಹ್ಯಾಸದ ಹೊನಲು ಹರಿಸಿ, ಎಲ್ಲೆರನ್ನು ನಕ್ಕು ನಗಿಸಿದರು. ನಟಿಯರಾದ ರಾಧಿಕಾ ನಾರಾಯಣ್, ನಟಿ ಪಾಯಲ್ ಹಾಗೂ ನಟ ಪೃಥ್ವಿ ಅಂಬರ್ ಅಮೋಘ ನೃತ್ಯ ಪ್ರದರ್ಶನ ನೀಡಿದರೆ, ಗಾಯಕಿ ಇಂಚರ ಹಾಗೂ ಗಾಯಕ ಶಶಾಂಕ್ ಸುಮಧುರ ಹಾಡುಗಳ ಮೂಲಕ ಶಿಳ್ಳೆ-ಚಪ್ಪಾಳೆ ಗಿಟ್ಟಿಸಿದರು. ಬಿಗ್‌ಬಾಸ್ ಖ್ಯಾತಿಯ ನಟ ಪ್ರಥಮ್ ಪಂಚಿಂಗ್ ಡೈಲಾಗ್ ಮೂಲಕ ಗಮನ ಸೆಳೆದರಲ್ಲದೆ ತಮ್ಮ 'ನಟ ಭಯಂಕರ' ಸಿನಿಮಾ ಗೆಲ್ಲಿಸುವಂತೆ ಮನವಿ ಮಾಡಿದರು.



ಪಡ್ಡೆ ಹುಡುಗ-ಹುಡುಗಿಯರ ಹೃದಯ ಗೆದ್ದ ಫ್ಯಾಷನ್ ಶೋ: ಇದಕ್ಕೂ ಮುನ್ನ ಯುವ ಸಂಭ್ರಮ ವೇದಿಕೆಯಲ್ಲಿ ವಿಜೇತರಾದ ಕಾಲೇಜು ತಂಡಗಳು ನೃತ್ಯ ಪ್ರದರ್ಶನ ನೀಡಿದರೆ, ಹಾರ್ಟ್‌ಬೀಟ್ಸ್ ಡ್ಯಾನ್ಸ್ ಅಕಾಡೆಮಿ ರೂಪದರ್ಶಿಗಳ ಕ್ಯಾಟ್ ವಾಕ್ ಪಡ್ಡೆ ಹುಡುಗ-ಹುಡಿಗಿಯರ ಹೃದಯದ ಗೆದ್ದಿತು. ಸೀರೆಯುಟ್ಟು ಕಂಗೊಳಿಸುತ್ತಿದ್ದ ಬೆಡಗಿಯರ ಯುವ ದಸರಾ ವೇದಿಕೆಯನ್ನು ಇನ್ನಷ್ಟು ವರ್ಣಮಯವಾಗಿಸಿದರು.

ಇಡಿ ಹೊಸ ಸಮನ್ಸ್

ಕುರಿತು ಅಧಿಕಾರಿಗಳು ಮಾಹಿತಿ ಕೇಳಿದ್ದರು. ಚಾರಿಟಬಲ್ ಸಂಸ್ಥೆಯಾದ ಕಾರಣ ಕಂಪನಿಗೆ ಚೆಕ್ ಮೂಲಕ ನಾನು ಮತ್ತು ಸಹೋದರ ದೇಣಿಗೆ ನೀಡಿರುವುದಾಗಿ ಅಧಿಕಾರಿಗಳಿಗೆ ತಿಳಿಸಿದ್ದೇನೆ ಎಂದು ಶಿವಕುಮಾರ್ ಹೇಳಿದ್ದರು. ಕಂಪನಿಗೆ ನೀಡಿರುವ ದೇಣಿಗೆ ಕುರಿತ ವಿವರಗಳನ್ನು ತನಿಖಾ ಸಂಸ್ಥೆಗೆ ಶೀಘ್ರ ಸಲ್ಲಿಸುವುದಾಗಿ ಬಳಿಕ ಮಾಧ್ಯಮದವರಿಗೆ ಡಿಕೆಶಿ ಹೇಳಿದ್ದರು. ಯಂಗ್ ಇಂಡಿಯನ್ ಪ್ರೈವೇಟ್ ಲಿಮಿಟೆಡ್, ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಪ್ರಮುಖ ಪಾಲುದಾರರಾಗಿರುವ ಸ್ವಯಂ ಸೇವಾ ಸಂಸ್ಥೆ. ಇದನ್ನು ನ್ಯಾಷನಲ್ ಹೆರಾಲ್ಡ್ ಪತ್ರಿಕೆ ನಡೆಸುತ್ತದೆ.

ಪಡತಾರೆ ದಸರಾ ಕಂಠೀರವ

ತಮ್ಮದಾಗಿಸಿಕೊಂಡರು. ಪ್ರಶಸ್ತಿ ಪಂದ್ಯದಲ್ಲಿ ಸೋಲು ಅನುಭವಿಸಿದ ಪೈ.ಗಾಯತ್ರಿ ರಮೇಶ್ ದ್ವಿತೀಯ ಸ್ಥಾನ ಪಡೆದರೆ, ಗದಗ ಪೈ.ರಾಧಿಕಾ ವಿಶ್ವನಾಥ್ ಹಾಗೂ ಉತ್ತರ ಕನ್ನಡ ಪೈ.ರಕ್ಷಿತಾ ನಾರಾಯಣ್ ತೃತೀಯ ಬಹುಮಾನ ಪಡೆದುಕೊಂಡರು.

ದಸರಾ ಕಿಶೋರ್: ತೀವ್ರ ಪೈಪೋಟಿಯಿಂದ ಕೂಡಿದ್ದ 'ದಸರಾ ಕಿಶೋರ್' ಪ್ರಶಸ್ತಿ ಪಂದ್ಯದಲ್ಲಿ ಅಂತಿಮ ಕ್ಷಣಗಳಲ್ಲಿ ಬೆಳಗಾವಿಯ ಪೈ.ರೋಹನ್ ನಾರಾಯಣ್ ವಿಜಯ ಸಾಧಿಸಿದರು. ಆರಂಭದಲ್ಲೇ ಅಂಕಗಳಿಸಿ ಗೆಲುವಿನ ಫೇವರಿಟ್ ಆಗಿದ್ದ ಬಾಗಲಕೋಟೆ ಪೈ.ಸಚಿನ್ ಯಲ್ಲಪ್ಪ ಕೊನೆಯ ಕ್ಷಣಗಳಲ್ಲಿ ಸೋಲು ಅನುಭವಿಸಿದರು. ಬಾಗಲಕೋಟೆ ಪೈ.ಜೋತಿಬಾ ಜಂಬರೆ ಹಾಗೂ ಮಲ್ಲಿಕಾರ್ಜುನ್ ಮೂರನೆ ಸ್ಥಾನವನ್ನು ಹಂಚಿಕೊಂಡರು.

ದಸರಾ ಕೇಸರಿ: ಬಾಗಲಕೋಟೆ ಪೈಲ್ವಾನರಾದ ಬಾಪು ಸಾಹೇಬ್ ಶಿಂದೆ ಹಾಗೂ ಪೈ.ಹೊಳಬಾಸ್ವಿ ಕುಶಾಲ್ ನಡುವೆ ನಡೆದ 'ದಸರಾ ಕೇಸರಿ' ಪ್ರಶಸ್ತಿ ಪಂದ್ಯದಲ್ಲಿ ಪೈ.ಬಾಪು ಸಾಹೇಬ್ ಶಿಂದೆ ಜಯಗಳಿಸಿದರು. ಸೋತ ಪೈ.ಹೊಳಬಾಸ್ವಿ ಕುಶಾಲ್ ದ್ವಿತೀಯ ಸ್ಥಾನಕ್ಕೆ ತೃಪ್ತಿಪಟ್ಟರೆ, ಬಾಗಲಕೋಟೆ ಪೈ.ತಿಮ್ಮಂಗೋವ್ಡ ಆರ್.ಪಾಟೀಲ್ ಹಾಗೂ ಬೆಳಗಾವಿ ಪೈ.ಮಹೇಶ್ ಕುಮಾರ್ ಮುರಾರಿ ತೃತೀಯ ಬಹುಮಾನ ಪಡೆದರು.

ದಸರಾ ಕಂಠೀರವ: ದಸರಾ ಕುಮಾರ್ ಪ್ರಶಸ್ತಿ ಗೆದ್ದು ದಸರಾ ಕಂಠೀರವ ಪ್ರಶಸ್ತಿಯನ್ನು ಮುಡಿಗೇರಿಸಿಕೊಳ್ಳುವ ತವಕದಲ್ಲಿದ್ದ ಮೈಸೂರಿನ ಪೈ.ಆರ್.ಯಶವಂತ್, ಮುದೋಳ್‌ನ ಪೈ.ಸುನೀಲ್ ಪಡೆತಾರೆ ವಿರುದ್ಧ ಅಂತಿಮ ಕ್ಷಣದವರೆಗೂ ಜಿದ್ದಾಜಿದ್ದಿನ ಪೈಪೋಟಿ ನಡೆಸಿ ಸೋಲು ಅನುಭವಿಸುವ ಮೂಲಕ ನಿರಾಸೆ ಉಂಟುಮಾಡಿದರು. ಅನುಭವಿ ಪೈ.ಸುನೀಲ್ ಪಡತಾರೆ 'ದಸರಾ ಕಂಠೀರವ' ಪ್ರಶಸ್ತಿ ತಮ್ಮದಾಗಿಸಿಕೊಂಡರೆ, ಪೈ.ಆರ್.ಯಶವಂತ್ ದ್ವಿತೀಯ ಸ್ಥಾನಕ್ಕೆ ತೃಪ್ತಿಪಟ್ಟರು. ದಾವಣಗೆರೆ ಪೈ.ಮದುಸೂಧನ್ ಹಾಗೂ ಬೆಳಗಾವಿ ಪೈ.ಪ್ರಕಾಶ್ ಪಾಟೀಲ್ ತೃತೀಯ ಸ್ಥಾನ ಹಂಚಿಕೊಂಡರು.

ನಾಡಕುಸ್ತಿ ಮಿಂಚು: ಪ್ರಶಸ್ತಿ ಪಂದ್ಯಗಳ ನಡುವೆ ನಡೆದ ನಾಡಕುಸ್ತಿ ಪಂದ್ಯಗಳು ಕುಸ್ತಿ ಅಭಿಮಾನಿಗಳ ಕಾತುರ ಹೆಚ್ಚಿಸಿತು. ಕಡೆಯ ದಿನ 15ಕ್ಕೂ ಜೋಡಿಗಳ ವಿರುದ್ಧ ನಡೆದ ನಾಡಕುಸ್ತಿಯಲ್ಲಿ ಸೆಣಸಾಡಿದ ಪೈಲ್ವಾನರು ಮಟ್ಟಿಯಲ್ಲಿ ಮಿಂದೆದ್ದರು. ಪಂದ್ಯಾವಳಿಯ ಕಡೆಯಲ್ಲಿ ಕುಸ್ತಿ ಆಖಾಡಕ್ಕೆ ಆಗಮಿಸಿದ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ವಿಜೇತರಿಗೆ ಪ್ರಶಸ್ತಿ ಹಾಗೂ ಬಹುಮಾನ ವಿತರಣೆ ಮಾಡಿ ಪ್ರೋತ್ಸಾಹಿಸಿದರು. ಮೇಯರ್ ಶಿವಕುಮಾರ್, ದಸರಾ ಉಪ ಸಮಿತಿ ಅಧ್ಯಕ್ಷ ದೇವರಾಜ್, ಕಾರ್ಯಾಧ್ಯಕ್ಷ ಗೋವಿಂದರಾಜು, ಉಪಾಧ್ಯಕ್ಷರಾದ ಹೆಚ್.ಎಸ್.ವೇದರಾಜ್, ಮಹೇಶ್‌ರಾಜ್ ಅರಸ್, ಎಂ.ಎಂ.ರಾಜೇಗೌಡ, ಕಾರ್ಯದರ್ಶಿ ಎಸ್.ಜಿ.ಹರ್ಷವರ್ಧನ್ ಮತ್ತಿತರರಿದ್ದರು.

ಯುವ ವಕೀಲರು ಸದಾ ಅಧ್ಯಯನಶೀಲರಾಗಬೇಕು

● ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಎ.ಎಸ್.ಬೋಪಣ್ಣ ಕಿವಿಮಾತು ● ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ಕಾನೂನು ಪದವಿ ಪ್ರಮಾಣ ಪತ್ರ ವಿತರಣೆ



ಮೈಸೂರು, ಅ.2(ಎಸ್‌ಪಿಎನ್)- ಬದಲಾಗುತ್ತಿರುವ ಜಗತ್ತಿನಲ್ಲಿ ಯುವ ವಕೀಲರು ಸಾಕಷ್ಟು ಅಧ್ಯಯನ ಶೀಲರಾಗಬೇಕು. ಸಾರ್ವಜನಿಕ ವಲಯದಲ್ಲಿ ಶಿಸ್ತು, ಸಂಯಮ, ವೃತ್ತಿ ಗೌರವ, ಪ್ರಾಮಾಣಿಕತೆಯೊಂದಿಗೆ ಕಕ್ಷಿದಾರರಿಗೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಗಮನಹರಿಸಬೇಕು ಎಂದು ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಎ.ಎಸ್.ಬೋಪಣ್ಣ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಮೈಸೂರು ಜೆಎಸ್‌ಎಸ್ ಕಾನೂನು ಕಾಲೇಜು ಆವರಣದಲ್ಲಿ ನಡೆದ 14ನೇ ಪದವೀಧರ ದಿನಾಚರಣೆ ಕಾರ್ಯಕ್ರಮದಲ್ಲಿ ಕಾನೂನು ಪದವಿ ಪೂರೈಸಿದ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರ ವಿತರಿಸಿ ಮಾತನಾಡಿದ ಅವರು, ಸ್ಪರ್ಧಾತ್ಮಕ ಜಗತ್ತಿನಲ್ಲಿ ಕಾನೂನು ಅಧ್ಯಯನ ನಡೆಸುತ್ತಿರುವ ವಿದ್ಯಾರ್ಥಿಗಳು ಅಧ್ಯಯನಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಇದಕ್ಕೆ ಹೊಂದಿಕೊಂಡಂತೆ ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್‌ಗಳ ಐತಿಹಾಸಿಕ ತೀರ್ಪುಗಳ ಬಗ್ಗೆ ತಿಳಿದುಕೊಳ್ಳುವ ಕುತೂಹಲ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸುತ್ತೂರು ಮಠದ ವತಿಯಿಂದ ಸ್ಥಾಪಿತವಾಗಿರುವ ಈ ಕಾನೂನು ಕಾಲೇಜು ಮತ್ತು ಇತರೆ ಶಿಕ್ಷಣ ಸಂಸ್ಥೆಗಳಲ್ಲೂ ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ ನೀಡುತ್ತಿರುವ ಅಂಶ ಈ ಸಮಾರಂಭದಿಂದ ತಿಳಿದು ಬರುತ್ತಿದೆ. ಅಲ್ಲದೆ, ಪ್ರಸ್ತುತ ಸನ್ನಿವೇಶಕ್ಕೆ ತಕ್ಕಂತೆ ಶೈಕ್ಷಣಿಕ ಚಟುವಟಿಕೆಗಳನ್ನು ಅಳವಡಿಸಿಕೊಂಡು ಜಗತ್ತಿನ ಬಹುರಾಷ್ಟ್ರೀಯ ಕಂಪನಿಗಳ ಕಾನೂನು ಮತ್ತು ಅಂತರರಾಷ್ಟ್ರೀಯ ಕಾನೂನುಗಳ ಬಗ್ಗೆ ಅರಿವು ಹೊಂದಿರಬೇಕು ಎಂದು ವಿದ್ಯಾರ್ಥಿಗಳಿಗೆ ತಿಳಿ ಹೇಳಿದರು.

ವಕೀಲಿ ವೃತ್ತಿ ಆರಂಭಿಸುವ ಕಾನೂನು ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರ ಎಂಬುದು ವೃತ್ತಿಯ ಮೊದಲ ಹಂತ. ಆದರೆ, ಹಿರಿಯ ವಕೀಲರೊಂದಿಗೆ ಬೆರೆತು ನಮ್ಮ ದೇಶದ ಕಾನೂನು ವ್ಯವಸ್ಥೆ, ಕಾನೂನು ಅಂಶಗಳ ಬಗ್ಗೆ ತಿಳಿದುಕೊಳ್ಳುವ ಕುತೂಹಲ ಹೊಂದಿರಬೇಕು ಎಂದು ಹೇಳಿದರು.

ನಂತರ ಹೈಕೋರ್ಟ್ ನ್ಯಾಯಮೂರ್ತಿ ಪಿ.ಎಸ್.ದಿನೇಶ್‌ಕುಮಾರ್ ವಿದ್ಯಾರ್ಥಿಗಳನ್ನು ಕುರಿತು ಮಾತನಾಡಿದರು. ಇದಕ್ಕೂ ಮುನ್ನ ಬಿ.ಎ., ಎಲ್‌ಎಲ್.ಬಿ 41 ವಿದ್ಯಾರ್ಥಿಗಳು, ಬಿಬಿಎ ಎಲ್‌ಎಲ್.ಬಿ 44 ವಿದ್ಯಾರ್ಥಿಗಳು, ಮೂರು ವರ್ಷದ ಎಲ್‌ಎಲ್‌ಬಿ 46 ವಿದ್ಯಾರ್ಥಿಗಳು ಹಾಗೂ ಎಲ್‌ಎಲ್ ಎಂನಿಂದ 7 ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರ ವಿತರಿಸಲಾಯಿತು. ಉನ್ನತ ದರ್ಜೆಯಲ್ಲಿ ತೇರ್ಗಡೆ ಹೊಂದಿದ, ಬಿಎ., ಎಲ್‌ಎಲ್‌ಎಂನ ವಿಧುಳ ದೇಶಿಕ್, ಕಾರ್ತಿಕ ಪಿತಾಂಬರನ್, ಎಲ್.ವಿನುತಾ, ಗೋಪಿಕರಾಜ್, ಯುಕ್ತ ಪಿ.ಹೆಗಡೆ ಅವರಿಗೆ ಪದವಿ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು.

ಬಿಬಿಎ, ಎಲ್‌ಎಲ್‌ಬಿಯಿಂದ ಡಿ.ಪ್ರಮೀಳಾ ಜೈನ್, ಹರ್ಷಿಕಾ ಸುರೇಶ್, ಚಿರಾಗ್ ಶೇಖಾವತ್, ವಿ.ಕೆ.ಮಾಳವಿಕಾ, ಎಲ್.ನಿಶಾ, ಕಾವೇರಿ ಜಿ.ಕುರುವಟ್ಟಿ ಅವರಿಗೆ ಪದವಿ ಪ್ರಮಾಣ ಪತ್ರ ವಿತರಿಸಲಾಯಿತು. ಮೂರು ವರ್ಷದ ಎಲ್‌ಎಲ್‌ಬಿಯಿಂದ ಮೈದ್ರಿ ಗೋಪಿನಾಥ್, ಎನ್.ನಿವೇದಿತಾ, ನಿತ್ಯಾ ಎನ್.ಗುಜ್ಜರ್, ವಿ.ಶ್ರೀದೇವಿ, ಮುದಲಗಿ ರಶ್ಮಿ ವೀರಭದ್ರ ಅವರಿಗೆ ಪದವಿ ಪ್ರಮಾಣ ಪತ್ರ ವಿತರಿಸಲಾಯಿತು. ಎರಡು ವರ್ಷದ ಎಲ್‌ಎಲ್‌ಎಂನಿಂದ ಡಿ.ನಿರುಪಮಾ ಸೇರಿದಂತೆ ಪ್ರಮಾಣ ವಿತರಿಸಲಾಯಿತು. ವೇದಿಕೆಯಲ್ಲಿ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟ್ಸೂರ್ ಮಠ್, ಕಾನೂನು ಕಾಲೇಜಿನ ಡಾ.ಸುರೇಶ್ ಸೇರಿದಂತೆ ಇತರರಿದ್ದರು.



ಆಲ್ ಇಂಡಿಯಾ ಜೆಮ್ ಅಂಡ್ ಜ್ಯುವೆಲ್ಲರಿ ಡೊಮೆಸ್ಟಿಕ್ ಕೌನ್ಸಿಲ್ (ಜಿಜೆಸಿ), ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಅನ್ನು ವಿಶ್ವದ 6ನೇ ಅತಿ ದೊಡ್ಡ ಆಭರಣ ಸಮೂಹವಾಗಿ ಆಯ್ಕೆ ಮಾಡಿ, ಭಾರತೀಯ ಬ್ರಾಂಡ್ ಆಗಿ ಗೌರವಿಸಿತು. ಮುಂಬೈನಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಿಜೆಸಿ ಅಧ್ಯಕ್ಷ ಆಶಿಶ್ ಪೇಟೆ ಅವರಿಂದ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಸಮೂಹದ ಎಂ.ಪಿ.ಅಹಮದ್, ಎ.ಕೆ.ನಿಶಾದ್ ಪ್ರಶಸ್ತಿ ಸ್ವೀಕರಿಸಿದರು. ಈ ವೇಳೆ ಜಿಜೆಸಿಯ ಉಪಾಧ್ಯಕ್ಷ ಸಾಯಂ ಮೆಹ್ರಾ, ನಿರ್ದೇಶಕರಾದ ನಿಲೇಶ್ ಸೊಭಾವತ್, ಸುನಿಲ್ ಪೊದಾರ್ ಇದ್ದರು.



ಬಿಸಿಲು, ಮಳೆ ಲೆಕ್ಕಿಸದೆ ದಸರಾ ಕಾರ್ಯಕ್ರಮಗಳಿಗೆ ಜನ ಸಾಗರ

● ಆಹಾರ ಮೇಳ ಹೌಸ್‌ಫುಲ್, ಯುವ ದಸರಾದಲ್ಲಿ ಜನವೋಜನ ● ಜಂಬೂ ಪಡೆ, ದೀಪಾಲಂಕಾರಕ್ಕೆ ಫಿದಾ, ವ್ಯೂ ಪಾಯಿಂಟ್‌ನಲ್ಲೂ ಜನ



ಮೈಸೂರು, ಅ.2(ಎಸ್‌ಪಿಎನ್)– ಮಧ್ಯಾಹ್ನ ಬಿಸಿಲು... ಸಂಜೆ ಮಳೆ.... ಆದರೂ ದಸರಾದ ವಿವಿಧ ವೇದಿಕೆಗಳಲ್ಲಿ ನಡೆದ ಕಾರ್ಯಕ್ರಮಗಳಿಗೆ ಜನ ಸಾಗರವೇ ಹರಿದು ಬಂದಿತ್ತು.

ಶಾಲಾ–ಕಾಲೇಜುಗಳಿಗೆ ದಸರಾ ರಜೆ ಇರುವ ಹಿನ್ನೆಲೆಯಲ್ಲಿ ಮೈಸೂರು ಮೃಗಾಲಯ, ಜಯ ಚಾಮರಾಜೇಂದ್ರ ಆರ್ಟ್ ಗ್ಯಾಲರಿ, ಮೈಸೂರು ಪ್ರಾದೇಶಿಕ ವಸ್ತು ಸಂಗ್ರಹಾಲಯ ಸೇರಿದಂತೆ ಇತರೆ ಪ್ರವಾಸಿ ತಾಣಗಳ ವೀಕ್ಷಣೆಗೆ ಪ್ರವಾಸಿಗರು ಮುಗಿಬಿದ್ದಿದ್ದರು. ಅಲ್ಲದೆ ಭಾನುವಾರ ಮಧ್ಯಾಹ್ನದ ವೇಳೆಗೆ ಆಹಾರ ಮೇಳ, ಕ್ರೀಡಾ ಮೇಳ, ಅರಮನೆ ಆವರಣದ ಫಲಪುಷ್ಪ ಪ್ರದರ್ಶನ, ಕುಪ್ಪಣ್ಣ ಪಾರ್ಕ್ ಫಲಪುಷ್ಪ ಪ್ರದರ್ಶನ, ಯುವ ದಸರಾ ಕಾರ್ಯಕ್ರಮಕ್ಕೆ ಸಹಸ್ರ, ಸಹಸ್ರ ಸಂಖ್ಯೆಯಲ್ಲಿ ಜನರು ಬಂದು ವೀಕ್ಷಿಸಿದರು.

ಆಹಾರ ಮೇಳ ಹೌಸ್‌ಫುಲ್: ಭಾರತ್ ಸ್ಕೌಟ್ ಮತ್ತು ಗೈಡ್ಸ್ ಮೈದಾನದ ದಸರಾ ಆಹಾರ ಮೇಳಕ್ಕೆ ಬೆಳಗಿನಿಂದ ಸಂಜೆವರೆಗೂ ಸಾಗರೋಪಾದಿಯಾಗಿ ಆಗಮಿಸಿದ ಜನರು, ಬಂಬೂ ಬಿರಿಯಾನಿ, ಮಡಕೆ ಬಿರಿಯಾನಿ, ಕಾಲ್ ಸೂಪ್, ಉತ್ತರ ಕರ್ನಾಟಕದ ಪ್ರಸಿದ್ಧ ಜೋಳದ ರೊಟ್ಟಿ–ಎಣ್ಣೆಗಾಯಿ, ಚಟ್ನಿ ಪುಡಿ, ಗಿರ್ಮಿಟ್, ಮಿರ್ಚಿ ಬಜ್ಜಿ, ಬೆಳಗಾವಿ ಕುಂದಾ, ದಾವಣಗೆರೆ ಬೆಣ್ಣೆದೋಸೆ, ಐಸ್‌ಕ್ರೀಂ, ಚುರ್‌ಮುರಿ ಸೇರಿದಂತೆ ಭಾರತದ ವಿವಿಧ ಶೈಲಿಯ ಆಹಾರ ಪದಾರ್ಥಗಳನ್ನು ಸವಿದು ಸಂತಸ ಪಟ್ಟರು.

ದೀಪಾಲಂಕಾರಕ್ಕೆ ಮನಸೋತರು: ಕುಕ್ಕರಹಳ್ಳಿ ಕೆರೆ ಮುಂಭಾಗ ರಸ್ತೆ, ಮೈಸೂರು –ಮಡಿಕೇರಿ ರಸ್ತೆಯ ಕಲಾಮಂದಿರ ಮುಂಭಾಗ, ಕೃಷ್ಣರಾಜ ಬುಲೇವಾರ್ಡ್ ರಸ್ತೆ, ಅರಮನೆ ಸುತ್ತಮುತ್ತ, ಬನ್ನಿಮಂಟಪದ ಎಲ್‌ಐಸಿ ವೃತ್ತದಿಂದ ಸಯ್ಯಾಜಿರಾವ್ ರಸ್ತೆ, ಮೈಸೂರು ಅರಮನೆಯ ಸುತ್ತಮುತ್ತ ರಸ್ತೆಗಳ ದೀಪಾಲಂಕಾರವನ್ನು, ಬೇರೆ–ಬೇರೆ ಊರುಗಳಿಂದ ಬಂದಿದ್ದ ಪ್ರವಾಸಿಗರು, ತಮ್ಮ ಕಾರಿನ ರೂಫ್ ತೆರೆದು ವೀಕ್ಷಿಸಿದರು. ಇನ್ನು ಕೆಲವರು ಅಂಬಾರಿ ಡಬ್ಬಲ್ ಡಕ್ಕರ್ ಬಸ್‌ನಲ್ಲಿ ಪ್ರಯಾಣಿಸಿ ದೀಪಾಲಂಕಾರದ ಅಂದಕ್ಕೆ ಮನಸೋತು ತಮ್ಮ ಮೊಬೈಲ್‌ನಲ್ಲಿ ಕೆಲವರು ಭಾವಚಿತ್ರ ತೆಗೆದುಕೊಂಡರೆ ಇನ್ನು ಕೆಲವರು ಸೆಲ್ಫಿಗೆ ಮೊರೆ ಹೋದರು.

ಜಂಬೂ ಪಡೆಗೆ ಫಿದಾ: ಪ್ರವಾಸಿಗರು, ದೀಪಾಲಂಕಾರ ನಡುವೆಯೂ ಜಂಜೂಪಡೆ ತಾಲೀಮು ಆರಂಭಿಸಿದ್ದರಿಂದ ಬಲರಾಮ ಪ್ರವೇಶ ದ್ವಾರ, ಕೆ.ಆರ್.ಆಸ್ಪತ್ರೆ ಮುಂಭಾಗ, ಬನ್ನಿಮಂಟಪದ ಬಳಿ ವಿದ್ಯಾರ್ಥಿಗಳು, ಯುವತಿಯರು ನಿಂತು ಗಜಪಡೆ ಗಜ ಗಾಂಭೀರ್ಯವನ್ನು ವೀಕ್ಷಿಸಿದರಲ್ಲದೆ, ಅಂಬಾರಿ ಹೊರುವ ಆನೆಗೆ ದೂರದಿಂದಲೇ ಕೈ ಮುಗಿದು ನಮಸ್ಕರಿಸುತ್ತಿದ್ದ ದೃಶ್ಯ ಕಂಡು ಬಂತು.

ವ್ಯೂ ಪಾಯಿಂಟ್ ಬಳಿ ಜನವೂ ಜನ: ಚಾಮುಂಡಿ ಬೆಟ್ಟದ ಮೇಲಿನ ವ್ಯೂ ಪಾಯಿಂಟ್ ಬಳಿ ಮೈಸೂರು ನಗರದ ದೀಪಾಲಂಕಾರ ಅಂದ ಸವಿಯಲು ನೂರಾರು ಸಂಖ್ಯೆಯ ಪ್ರವಾಸಿಗರು ಬೆಟ್ಟದ ಮೇಲೆ ಜಮಾಯಿಸಿದ್ದರು.





ಅಂದದ ಅಂಬಾರಿಗೆ ಬೇಕಿಲ್ಲದ ತಡೆ

ಡಬ್ಬಲ್ ಡೆಕ್ಕರ್ ಬಸ್‌ನಲ್ಲಿ ಕೊಂಚ ಸುರಕ್ಷತೆ, ಸುಧಾರಣೆ ಅವಶ್ಯ





ಮೈಸೂರು, ಅ.2(ಎಸ್‌ಬಿಡಿ)– ದಸರಾ ಹಿನ್ನೆಲೆಯಲ್ಲಿ 'ಅಂಬಾರಿ' ಡಬ್ಬಲ್ ಡೆಕ್ಕರ್ ಬಸ್ ಸಂಚಾರಕ್ಕೆ ಭಾರೀ ಬೇಡಿಕೆ ಸೃಷ್ಟಿಯಾಗಿದೆ. ಆದರೆ ವಿಶೇಷವಾಗಿ ಬಸ್ ರೂಪಿಸುವಾಗ ಆಗಿರುವ ಸಣ್ಣ ವ್ಯತ್ಯಾಸದಿಂದ ಪ್ರವಾಸಿಗರಿಗೆ ಭಾರೀ ತೊಂದರೆ ಉಂಟಾಗಿದೆ.

'ಅಂಬಾರಿ' ಬಸ್ ಮುಂಭಾಗವನ್ನು ಆನೆ ಮಾದರಿಯಲ್ಲಿ ಎತ್ತರಿಸಲಾಗಿದೆ. ಪರಿಣಾಮ ಬಸ್‌ನ ಎರಡನೇ ಹಂತ(ರೂಫ್ ಟಾಪ್)ದಲ್ಲಿ ಪ್ರಯಾಣಿಸುವವರಿಗೆ ತೊಂದರೆಯಾಗಿದೆ. ಆಸನದಲ್ಲಿ ಕುಳಿತುಕೊಂಡರೆ ಬಸ್‌ನ ಎತ್ತರಿಸಿರುವ ಭಾಗ ಅಡ್ಡವಾಗಿ ದಸರಾ ದೀಪಾಲಂಕಾರ ಕಣ್ತುಂಬಿಕೊಳ್ಳಲು ಸಾಧ್ಯವಾಗುವುದಿಲ್ಲ. ಇದರಿಂದ ಮುಂಭಾಗದಲ್ಲಿ ಕುಳಿತುಕೊಳ್ಳುವವರು ದೀಪಾಲಂಕಾರ ನೋಡಲು ಎದ್ದು ನಿಲ್ಲುತ್ತಾರೆ. ಪರಿಣಾಮ ಹಿಂದಿನ ಆಸನದಲ್ಲಿ ಕುಳಿತವರೂ ಅನಿವಾರ್ಯವಾಗಿ ಎದ್ದು ನಿಲ್ಲುವಂತಾಗುತ್ತದೆ.

ಸುರಕ್ಷಿತವಲ್ಲ: ಪ್ರಯಾಣಿಕರು ಬಸ್‌ನಲ್ಲಿ ನಿಂತು ನಗರ ಪ್ರದಕ್ಷಿಣೆ ಮಾಡುವುದರಿಂದ ಆಗುವ ತೊಂದರೆಯಾದರೂ ಏನು? ಎಂದು ನಿರ್ಲಕ್ಷಿಸಿದರೆ ಆಗಬಹುದಾದ ಅವಘಡಕ್ಕೆ 'ಅಂಬಾರಿ' ಬಸ್‌ಗಳ ನಿರ್ವಹಣೆ ಮಾಡುತ್ತಿರುವ ಕರ್ನಾಟಕ ಪ್ರವಾಸೋದ್ಯಮ ಇಲಾಖೆಯೇ ಹೊಣೆಯಾಗಬೇಕಾಗುತ್ತದೆ. ಬಸ್‌ನ ಎರಡನೇ ಹಂತ ಮೇಲ್ಚಾವಣಿ ರಹಿತವಾಗಿದೆ. ತೆರೆದ ಛಾವಣಿ ಸುತ್ತಲೂ ಅಳವಡಿಸಿರುವ ಬ್ಯಾರಿಕೇಡ್ ಅಷ್ಟೇನು ಎತ್ತರವಾಗಿಲ್ಲ. ಹಾಗಾಗಿ ಸಂಚರಿಸುವ ಸಂದರ್ಭದಲ್ಲಿ ಪ್ರಯಾಣಿಕರು ಎದ್ದು ನಿಲ್ಲುವುದು ಸುರಕ್ಷಿತವಲ್ಲ. ವಾಹನ ದಟ್ಟಣೆ ನಡುವೆ ಬಸ್ ಚಾಲಕ ತುರ್ತು ಬ್ರೇಕ್ ಹಾಕಿದರೆ ನಿಂತಿರುವವರು ಮುಗ್ಗರಿಸಿ ಬೀಳಬಹುದು. ಅದರಲ್ಲೂ ವೃದ್ಧರು ಹಾಗೂ ಮಕ್ಕಳಿಗೆ ಹೆಚ್ಚಿನ ಅಪಾಯವಾಗಬಹುದು. ಬ್ಯಾರಿಕೇಡ್ ಒರಗಿ ನಿಂತು ಮೊಬೈಲ್‌ನಲ್ಲಿ ದೀಪಾಲಂಕಾರ ಸೆರೆ ಹಿಡಿಯುವವರು ಆಯತಪ್ಪಿ ಕೆಳಗೆ ಬೀಳಬಹುದಾದ ಸಾಧ್ಯತೆಯನ್ನೂ ತಳ್ಳಿ ಹಾಕುವಂತಿಲ್ಲ.

ವಿದ್ಯುತ್ ಶಾಕ್: ಜಂಬೂಸವಾರಿ ಸಾಗುವ ಮಾರ್ಗದಲ್ಲಿ ಮಾತ್ರ ಎತ್ತರಕ್ಕೆ ದೀಪಾಲಂಕಾರ ಮಾಡಲಾಗಿದೆ. ಆದರೆ ಹಲವು ರಸ್ತೆಗಳಲ್ಲಿ ಅಷ್ಟೇನು ಎತ್ತರವಾಗಿಲ್ಲ. ಅಲ್ಲದೆ ಜೋತಾಡುವ ವಿದ್ಯುತ್ ದೀಪಗಳನ್ನು ಹಾಕಲಾಗಿದೆ. ಇದರಿಂದ ಅಂಬಾರಿ ಬಸ್‌ನ ತೆರೆದ ಛಾವಣಿ ಹಂತದಲ್ಲಿ ನಿಂತು ಪ್ರಯಾಣಿಸುವವರಿಗೆ ಅಪಾಯದ ಸಾಧ್ಯತೆ ಹೆಚ್ಚು. ಜೋತು ಬಿಟ್ಟಿರುವ ವಿದ್ಯುತ್ ದೀಪಗಳು ಎದ್ದು ನಿಂತವರಿಗೆ ತಾಕಬಹುದು. ಇಲ್ಲವೇ ಆಕಸ್ಮಿಕವಾಗಿ ಕೈ ಮೇಲೆತ್ತಿದರೆ ಬಲ್ಬ್ ಅಥವಾ ವೈರ್ ತಗುಲಿ ವಿದ್ಯುತ್ ಪ್ರವಹಿಸಬಹುದು. ಇಂತಹ ಅವಘಡದಿಂದ ಪ್ರಾಣಾಪಾಯವೂ ಸಂಭವಿಸಬಹುದು. ಸಣ್ಣ ಎಡವಟ್ಟಿನಿಂದ ಅಮೂಲ್ಯ ಜೀವಗಳಿಗೆ ತೊಡಕಾಗುವುದು ಎಷ್ಟು ಸರಿ? ಎಂದು ಪ್ರಜ್ಞಾವಂತ ನಾಗರಿಕರು ಪ್ರಶ್ನಿಸಿದ್ದಾರೆ.

ಜಗಳವೂ ಆಗಬಹುದು: ಅಂಬಾರಿ ಬಸ್‌ನ ತೆರೆದ ಛಾವಣಿಯಲ್ಲಿ ಕುಳಿತು ದೀಪಾಲಂಕಾರ ಕಣ್ತುಂಬಿಕೊಳ್ಳಲು ಜನ ಮುಗಿ ಬೀಳುತ್ತಿದ್ದಾರೆ. ಪರಿಣಾಮ ನಿರ್ವಹಣಾ ದೃಷ್ಟಿಯಿಂದ ಟಿಕೆಟ್ ದರವನ್ನೂ ಹೆಚ್ಚಿಸಲಾಗಿದೆ. ಆದರೂ ಬೇಡಿಕೆ ಇನ್ನೂ ಹೆಚ್ಚಾಗಿದೆ. ತೆರೆದ ಛಾವಣಿ ಹಂತದ ಮುಂಭಾಗದಲ್ಲಿ ಕುಳಿತವರು ದೀಪಾಲಂಕಾರ ನೋಡಲು ಎದ್ದು ನಿಂತಾಗ ಹಿಂಭಾಗದಲ್ಲಿದ್ದವರು ಕುಳಿತುಕೊಳ್ಳುವಂತೆ ತಾಕೀತು ಮಾಡುತ್ತಾರೆ. ಆ ವೇಳೆ ಮಾತಿಗೆ ಮಾತು ಬೆಳೆದು ಜಗಳವಾಗಿರುವ ಉದಾಹರಣೆಯೂ ಇವೆ ಎಂದು ಬಸ್‌ನಲ್ಲಿ ಪ್ರಯಾಣಿಸಿದ್ದವರು ಹೇಳಿದ್ದಾರೆ.

ಸರಿಪಡಿಸಬಹುದು: ಬಸ್ ಮುಂಭಾಗದಲ್ಲಿ 'ಅಂಬಾರಿ' ಎಂದು ದಪ್ಪ ಅಕ್ಷರಗಳಲ್ಲಿ ಬರೆಯಲಾಗಿದೆ. ಅದರ ಮೇಲೆ ಎತ್ತರಿಸಿರುವ ಭಾಗದಲ್ಲಿ 'ಕರ್ನಾಟಕ ಒಂದು ರಾಜ್ಯ ಹಲವು ಜಗತ್ತು' ಎಂದು ಇಂಗ್ಲಿಷ್ ಅವತರಿಣಿಕೆಯಲ್ಲಿದೆ. ಈ ಭಾಗವೇ ತೆರೆದ ಛಾವಣಿಯಲ್ಲಿ ಕುಳಿತವರಿಗೆ ಅಡ್ಡಲಾಗಿರುವುದು. ಅದನ್ನು ತೆರವು ಮಾಡಿದರೂ ಬಸ್‌ನ ಆಕರ್ಷಣೆ ಕುಂದುವುದಿಲ್ಲ. ಇಲ್ಲವೇ ಲೋಹದ ಬದಲಾಗಿ ಗಾಜನ್ನು ಅಳವಡಿಸಿದರೆ ಪ್ರಯಾಣಿಕರು ಎದ್ದು ನಿಲ್ಲುವ ಪ್ರಮೇಯವೇ ಇರುವುದಿಲ್ಲ. ಈ ಬಗ್ಗೆ ಅಧಿಕಾರಿಗಳು ಚಿಂತನೆ ನಡೆಸಿ ತಕ್ಷಣ ಕ್ರಮವಹಿಸಿದರೆ ಸಂಭವಿಸಬಹುದಾದ ಅವಘಡಗಳು ತಪ್ಪುವುದರ ಜೊತೆಗೆ 'ಅಂಬಾರಿ' ಬಸ್ ಸವಾರಿ ಬೇಡಿಕೆ ಮತ್ತಷ್ಟು ಹೆಚ್ಚುತ್ತದೆ.

ಹೊರಡುವ ಸ್ಥಳವೂ ಸೂಕ್ತವಲ್ಲ: ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ವೃತ್ತ(ಮೆಟ್ರೊಪೋಲ್) ಹಾಗೂ ದಾಸಪ್ಪ ವೃತ್ತ ನಡುವೆ ಜೆಎಲ್‌ಬಿ ರಸ್ತೆಯಲ್ಲಿರುವ ಪ್ರವಾಸೋದ್ಯಮ ಇಲಾಖೆ ಕಚೇರಿ ಬಳಿಯಿಂದ 'ಅಂಬಾರಿ' ಬಸ್ ಕಾರ್ಯಾಚರಣೆ ಪ್ರಾರಂಭಿಸುತ್ತವೆ. ಸಂಚಾರ ಆರಂಭಿಸುವ ಮುನ್ನವೇ ರಸ್ತೆ ಬದಿಯಲ್ಲಿ ಬಸ್ ನಿಲ್ಲಿಸಲಾಗುತ್ತದೆ. ಪರಿಣಾಮ ಸದಾ ವಾಹನ ದಟ್ಟಣೆ ಈ ರಸ್ತೆ ಸಂಚಾರಕ್ಕೂ ತೀವ್ರ ಅಡ್ಡಿಯುಂಟಾಗುತ್ತದೆ. ಬಸ್ ಹತ್ತುವ ಪ್ರಯಾಣಿಕರಿಗೂ ತೊಂದರೆಯಾಗುತ್ತದೆ. ಹಾಗಾಗಿ ಸೂಕ್ತ ಹಾಗೂ ಸುರಕ್ಷಿತ ಸ್ಥಳದಿಂದ 'ಅಂಬಾರಿ' ಬಸ್ ಸಂಚಾರಕ್ಕೆ ವ್ಯವಸ್ಥೆ ಮಾಡುವುದು ಒಳ್ಳೆಯದು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ದಸರಾ ಕ್ರೀಡಾಕೂಟದಲ್ಲಿ ಮೈಸೂರು ವಿಭಾಗಕ್ಕೆ ಸಮಗ್ರ ಪ್ರಶಸ್ತಿ

ಬೆಂಗಳೂರಿಗೆ ದ್ವಿತೀಯ, ಬೆಳಗಾವಿಗೆ ತೃತೀಯ ಸ್ಥಾನ





ಸದಸ್ಯರ ಆಕ್ರೋಶ

ದಸರಾ ಕ್ರೀಡಾಕೂಟದ ಸಮಾರೋಪದಲ್ಲಿ ಕ್ರೀಡಾ ಉಪ ಸಮಿತಿಯ ಸದಸ್ಯರು ತಮ್ಮನ್ನು ಸರಿಯಾಗಿ ನಡೆಸಿಕೊಂಡಿಲ್ಲ. ಕ್ರೀಡಾಕೂಟಕ್ಕೆ ಸಂಬಂಧಿಸಿದಂತೆ ಯಾವುದೇ ಜವಾಬ್ದಾರಿ ನೀಡಿಲ್ಲ. ಎಲ್ಲಾ ಮುಗಿದ ನಂತರ ಈಗ ಸನ್ಮಾನ ಮಾಡಲು ಅಧಿಕಾರಿಗಳು ಮುಂದಾಗಿದ್ದಾರೆ. ನಾವು ಕೇವಲ ಸನ್ಮಾನಕ್ಕೆ ಸೀಮಿತವಾಗಿರಲು ಕಮಿಟಿಗೆ ಸೇರಿಲ್ಲ ಎಂದು ಆಕ್ರೋಶ ವ್ಯಕ್ತ ಪಡಿಸಿದರು.

ಮೈಸೂರು, ಅ.2(ಜಿಎ)–ದಸರಾ ಮಹೋತ್ಸವದ ಅಂಗವಾಗಿ ನಗರದ ಚಾಮುಂಡಿ ವಿಹಾರ್ ಕ್ರೀಡಾಂಗಣದಲ್ಲಿ ನಡೆದ 5 ದಿನಗಳ ದಸರಾ ಕ್ರೀಡಾಕೂಟದಲ್ಲಿ 157 ಅಂಕ ಪಡೆಯುವ ಮೂಲಕ ಮೈಸೂರು ವಿಭಾಗ ಸಮಗ್ರ ಪ್ರಶಸ್ತಿ ಮುಡಿಗೇರಿಸಿಕೊಂಡಿತು.

ಚಾಮುಂಡಿ ವಿಹಾರ ಕ್ರೀಡಾಂಗಣ ಸೇರಿದಂತೆ ನಗರದ ಹಲವೆಡೆ ನಡೆದ 27 ಕ್ಕೂ ಹೆಚ್ಚು ಕ್ರೀಡೆಗಳಲ್ಲಿ ಪಾರಮ್ಯ ಮೆರೆದ ಮೈಸೂರು ವಿಭಾಗದ ಕ್ರೀಡಾಪಟುಗಳು 157 ಅಂಕದೊಂದಿಗೆ ಸಮಗ್ರ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು.

135 ಅಂಕ ಪಡೆದ ಬೆಂಗಳೂರು ನಗರ ವಿಭಾಗ ದ್ವಿತೀಯ ಸ್ಥಾನ, 77 ಅಂಕ ಪಡೆದ ಬೆಳಗಾವಿ ವಿಭಾಗ ತೃತೀಯ ಸ್ಥಾನ, 59 ಅಂಕ ಪಡೆದ ಬೆಂಗಳೂರು ಗ್ರಾಮಾಂತರ ವಿಭಾಗ ನಾಲ್ಕನೇ ಸ್ಥಾನ ಮತ್ತು 17 ಅಂಕ ಪಡೆದ ಕಲಬುರ್ಗಿ 5ನೇ ಸ್ಥಾನಕ್ಕೆ ತೃಪ್ತಿ ಪಟ್ಟಿಕೊಂಡಿತ್ತು.

ನೂತನ 7 ದಾಖಲೆ : ದಸರಾ ಮಹೋತ್ಸವದ ಸಿಎಂ ಕಪ್ ಕ್ರೀಡಾಕೂಟದಲ್ಲಿ 7 ಹೊಸ ದಾಖಲೆಗಳನ್ನು ಮಾಡುವ ಮೂಲಕ ಕ್ರೀಡಾಪಟುಗಳು ಹಳೆಯ ದಾಖಲೆಗಳನ್ನು ಮುರಿದಿದ್ದಾರೆ. ಮಹಿಳೆಯರ ವಿಭಾಗದಿಂದ 4, ಪುರುಷರ ವಿಭಾಗದಿಂದ 3 ದಾಖಲೆಗಳು ನಿರ್ಮಾಣಗೊಂಡಿದೆ. ಡಿಸ್ಕಸ್ ಥ್ರೋನಲ್ಲಿ ಕಲಾವತಿ ಬಸಪ್ಪ 41.7 ಮೀಟರ್ ದೂರ ಎಸೆಯುವ ಮೂಲಕ 2014ರ ದಾಖಲೆ ಮುರಿದಿದ್ದಾರೆ.

ಚೈತ್ರ ದೇವಾಡಿಗ 3 ಸಾವಿರ ಮತ್ತು 1500 ಮೀಟರ್ ಓಟದ ಮೂಲಕ 2013ರ ದಾಖಲೆ ಮುರಿದು ನೂತನ ದಾಖಲೆಯನ್ನು ನಿರ್ಮಿಸಿದ್ದಾರೆ. ಮೈಸೂರಿನ ಜೆ.ಪವಿತ್ರ ಟ್ರಿಪಲ್ ರೇಸ್‌ನಲ್ಲಿ ದಾಖಲೆ ನಿರ್ಮಿಸಿದ್ದಾರೆ. ಪುರುಷ ವಿಭಾಗದಲ್ಲಿ ಶಾಟ್‌ಪುಟ್‌ನಲ್ಲಿ ಬಿ.ಮನುಷ್ 2013ರ ದಾಖಲೆಯನ್ನು ಮುರಿದಿದ್ದು, ಬೆಂಗಳೂರಿನ ಹರ್ಷಿತ್ ಹೈ ಜಂಪ್‌ನಲ್ಲಿ 2013ರ ದಾಖಲೆ ಮುರಿದು ಟ್ರಿಪಲ್ ಜಂಪ್‌ನಲ್ಲಿ ಮಹಾಂತ್ 2006ರ ದಾಖಲೆಯನ್ನು ಮುರಿದು ನೂತನ ದಾಖಲೆ ನಿರ್ಮಿಸಿದ್ದಾರೆ.


ವಿಶೇಷ ಸನ್ಮಾನ : ದಸರಾ ಕ್ರೀಡಾಕೂಟ ಸಮಾರೋಪ ಸಮಾರಂಭದಲ್ಲಿ ವಿಶ್ವ ಮಟ್ಟದ ಚೆಸ್ ಮತ್ತು ವುಶ್ ಕ್ರೀಡೆಯಲ್ಲಿ ವಿಶೇಷ ಸಾಧನೆ ಮಾಡಿದ ಎಂಟು ವರ್ಷದ ಚಾರ್ವಿ ಮತ್ತು ಪ್ರಣೀತಾಳನ್ನು ಅಭಿನಂದಿಸಲಾಯಿತು. ಇದೇ ವೇಳೆ ಕಳೆದ 30 ವರ್ಷದ ದಸರಾ ಕ್ರೀಡಾಕೂಟ ಸೇರಿದಂತೆ ವಿವಿಧ ಕ್ರೀಡಾಕೂಟಗಳಲ್ಲಿ ಮಾರ್ಕರ್‌ಗಳಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಬೆಂಗಳೂರಿನ ಶಂಕರಪ್ಪ ಮತ್ತು ರಾಯಚೂರಿನ ತಿಮ್ಮಪ್ಪ ಅವರನ್ನು ಸನ್ಮಾನಿಸಲಾಯಿತು.

ಸಮಾರೋಪ ಕಾರ್ಯಕ್ರಮದಲ್ಲಿ ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಆಯುಕ್ತ ಎಚ್.ಎನ್. ಗೋಪಾಲಕೃಷ್ಣ, ನಾಮ ನಿರ್ದೇಶಿತ ಪಾಲಿಕೆ ಸದಸ್ಯ ಜಗದೀಶ್, ಕ್ರೀಡಾ ದಸರಾ ಉಪಸಮಿತಿಯ ಅಧ್ಯಕ್ಷ ಕೆ. ಶಿವಾನಂದ್, ಸಹಾಯಕ ನಿರ್ದೇಶಕ ರೋಹಿತ್ ಗಂಗಾಧರ್, ಉಪಾಧ್ಯಕ್ಷರಾದ ರಮೇಶ್, ಪೈಲ್ವಾನ್ ರವಿ, ಸಾಹಸ ಕ್ರೀಡೆ ಸಮಿತಿ ಅಧ್ಯಕ್ಷ ಸುಬ್ಬಣ್ಣ ಮತ್ತು ಸದಸ್ಯರು ಉಪಸ್ಥಿತರಿದ್ದರು.

ಅರಮನೆ ಅಂಗಳದಲ್ಲಿ ದಿನವಿಡೀ ಮೇಳೈಸಿದ ಸಾಂಸ್ಕೃತಿಕ ವೈಭವ

ಬಾಲ ಕಲಾವಿದರ ಪ್ರತಿಭೆ ಅನಾವರಣ, ಸಂಗೀತ, ನೃತ್ಯರೂಪಕ ಮೋಡಿ







ಹೆಜ್ಜೆ ಹಾಕಿದ ಸಚಿವರು ವೀರಭದ್ರ ಕುಣಿತ ಕಣ್ತುಂಬಿಕೊಂಡ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ವೇದಿಕೆಗೆ ತೆರಳಿ ಕಲಾವಿದರನ್ನು ಅಭಿನಂದಿಸುವ ವೇಳೆ ತಾವೂ ಖಡ್ಗ ಹಿಡಿದು ವೀರಗಾಸೆ ಕಲಾವಿದರೊಂದಿಗೆ ಹೆಜ್ಜೆ ಹಾಕಿ ಸಂಭ್ರಮಿಸಿದ್ದು ವಿಶೇಷವಾಗಿತ್ತು. ಈ ವೇಳೆ ವಿಧಾನಪರಿಷತ್ ಸದಸ್ಯ ಸಿದ್ದರಾಜು, ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ ಇನ್ನಿತರ ಗಣ್ಯರಿದ್ದರು.

ಮೈಸೂರು, ಅ.2(ಎಸ್‌ಬಿಡಿ)– ವಿಶ್ವವಿಖ್ಯಾತ ಅಂಬಾವಿಲಾಸ ಅರಮನೆ ಅಂಗಳದಲ್ಲಿ ಭಾನುವಾರ ದಿನವಿಡೀ ಸಾಂಸ್ಕೃತಿಕ ವೈಭವ ಮೇಳೈಸಿತ್ತು.

ಮೈಸೂರು ದಸರಾ ವಿಶೇಷವಾಗಿ ಇಂದು ಅರಮನೆ ಎದುರಿನ ಪ್ರಧಾನ ವೇದಿಕೆಯಲ್ಲಿ 'ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ(ಬೆಳಗ್ಗೆ 6ರಿಂದ ಸಂಜೆ 6)' ವಿಶೇಷ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿತ್ತು. ನಂತರ ನವರಾತ್ರಿ ನಿಗದಿತ ಸಾಂಸ್ಕೃತಿಕ ಕಾರ್ಯಕ್ರಮ ನೆರವೇರಿತು. ವಿಭಿನ್ನ ಹಾಗೂ ವೈಶಿಷ್ಟ್ಯ ಕಾರ್ಯಕ್ರಮಗಳ ಹೂರಣ ಸವಿದ ಕಲಾಪ್ರೇಮಿಗಳ ಸಂತಸಕ್ಕೆ ಪಾರವೇ ಇರಲಿಲ್ಲ.

ಬಾಲ ಕಲಾವಿದರ ಪ್ರತಿಭೆ ಅನಾವರಣದ ಮೂಲಕ ಬೆಳಗ್ಗೆ ಆರಂಭಗೊಂಡ ಕಾರ್ಯಕ್ರಮದಲ್ಲಿ ನಿರಂತರ ಸಂಗೀತ ಝರಿ ಹರಿಯಿತು. ವಿದ್ವಾನ್ ರಂಗಸ್ವಾಮಿ ನೇತೃತ್ವದಲ್ಲಿ ನಾದಸ್ವರ, ವಿದ್ವಾನ್ ಸಂಪತ್ ಕುಮಾರ್ ಮತ್ತು ತಂಡದಿಂದ ದಾಸ ವೈಭವ, ಅರ್ಚನಾ ಮತ್ತು ಅನುಷಾ ತಂಡದಿಂದ ಸ್ಯಾಕ್ಸೊಫೋನ್ ವಾದನ, ವಿದುಷಿ ಎಸ್.ಸಂಗೀತ ಮತ್ತು ತಂಡದ ಕಲಾವಿದರಿಂದ 'ಭಾವ ಸಂಗಮ' ಗಾಯನ, ವಿದ್ವಾನ್ ರಾಜಪ್ಪ ಹಾಗೂ ತಂಡದಿಂದ ರಂಗಗೀತೆ ಗಾಯನ, ವಿದುಷಿ ಶಿಯ ನರೇಂದ್ರ ಭರತನಾಟ್ಯ ಪ್ರಸ್ತುತಪಡಿಸಿದರು.

ವಿದುಷಿ ಪಿ.ಎಸ್.ರಂಜನಿ ವೆಂಕಟೇಶ್ ಮತ್ತು ತಂಡದ ಕಲಾವಿದರು ಜಯಚಾಮರಾಜೇಂದ್ರ ಒಡೆಯರ್ ಅವರ ಹಲವು ಕೃತಿಗಳನ್ನು ಭಾವಪೂರ್ಣವಾಗಿ ಹಾಡಿದರು. ವಿದುಷಿ ಪೃಥ್ವಿ ಭಾಸ್ಕರ್ ಹಾಗೂ ಸಹಕಲಾವಿದರು ವಯೋಲಿನ್ ವೈಭವ ಸೃಷ್ಟಿಸಿದರು. ಅಂಬಳೆ ಶಿವಣ್ಣ ಮತ್ತು ತಂಡದವರು ವೀರಭದ್ರ ಕುಣಿತವನ್ನು ಮನೋಜ್ಞವಾಗಿ ಪ್ರಸ್ತುತಪಡಿಸಿ ನೆರೆದಿದ್ದವರಲ್ಲಿ ಭಕ್ತಿಭಾವ ಜಾಗೃತಗೊಳಿಸಿದರು. ಇದೇ ವೇಳೆ ಚಾಮುಂಡೇಶ್ವರಿ ಮಲೆನಾಡು ಡೊಳ್ಳು ಕಲಾವೃಂದದಿಂದ ಪ್ರಸ್ತುತಗೊಂಡ ಡೊಳ್ಳು ಕುಣಿತ ಗಮನ ಸೆಳೆಯಿತು. ಗಾನ ಲಹರಿ, ನಾದ ಲಹರಿ, ವಚನ ಗಾಯನ, ಲಲಿತ ಭಾರತೀ ನೃತ್ಯೋಲ್ಲಾಸ, ಹೀಗೆ ನೆರೆದಿದ್ದ ಕಲಾಪ್ರೇಮಿಗಳು ಸಂಜೆ 6 ಗಂಟೆವರೆಗೂ ಅರಮನೆ ವೇದಿಕೆಯಲ್ಲಿ ಕಲಾ ವೈಭವವನ್ನು ಸವಿದರು.

ನವಶಕ್ತಿ ವೈಭವ: ಸಂಜೆ 6ರ ನಂತರ ಆರಂಭವಾದ ನಿಗದಿತ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಬೆಂಗಳೂರಿನ ಕುಮಾರಿ ರೂಪಿಕಾ ಹಾಗೂ ವಂದನಾ ಕಾಸರವಳ್ಳಿ ಸಾರಥ್ಯದಲ್ಲಿ ಕಿರುತೆರೆ ಕಲಾವಿದರು ಪ್ರಸ್ತುತಪಡಿಸಿದ 'ನವಶಕ್ತಿ ವೈಭವ' ನೃತ್ಯರೂಪಕ ಅತ್ಯಮೋಘವಾಗಿತ್ತು. ಸಾಂಪ್ರದಾಯಿಕ ವಿವಿಧ ಕಲಾ ಪ್ರಕಾರಗಳ ಸಮ್ಮಿಳಿತ ನೆರೆದಿದ್ದವರ ಮನಸೂರೆಗೊಂಡಿತು.

ಕಿರುತೆರೆ ಸಂಗೀತ ರಿಯಾಲಿಟಿ ಶೋ ಮೂಲಕ ಪ್ರಸಿದ್ಧರಾದ ಕಂಬದ ರಂಗಯ್ಯ ಹಾಗೂ ತಂಡದ ಗಾಯಕಿಯರು 'ಬೆಳ್ಳಿ ಮೂಡಿತೋ ಕೋಳಿ ಕೂಗಿತೋ..', 'ತಂದ್ನಾ ತಾನಾನಾ...' ಸೇರಿದಂತೆ ಹಲವು ಜಾನಪದ ಗೀತೆಗಳನ್ನು ಪ್ರಸ್ತುತಪಡಿಸಿದರು. ಇದೇ ವೇಳೆ ಪುನೀತ್ ರಾಜ್‌ಕುಮಾರ್ ಹಾಡಿರುವ 'ಕಾಣದಂತೆ ಮಾಯವಾದನು ನಮ್ಮ ಶಿವ...' ಗೀತೆಯನ್ನು ಹಾಡಿ ರಂಜಿಸಿದರು. ಕೊನೆಯಲ್ಲಿ ಬೆಂಗಳೂರಿನ ಮನೋಜ್ ವಶಿಷ್ಠ ಮತ್ತು ಅರುಂಧತಿ ವಶಿಷ್ಠ ಸಾರಥ್ಯದಲ್ಲಿ ಜಾನಪದ, ಸೂಫಿ, ಆಕ್ಯಾಪೆಲ್ಲಾ ಸಮ್ಮಿಳಿತದ ವಿಶೇಷ ಸಂಗೀತ ವೈವಿಧ್ಯ ಕಾರ್ಯಕ್ರಮ ಪ್ರಸ್ತುತಗೊಂಡಿತು. ಮಳೆಯಿಂದ ಕೆಲಕಾಲ ಅಡ್ಡಿಯಾಯಿತಾದರೂ ಪ್ರೇಕ್ಷಕರು ಸಂಪೂರ್ಣ ಕಾರ್ಯಕ್ರಮವನ್ನು ಆಸ್ವಾದಿಸಿದರು. ಈ ಮೂಲಕ ದಸರಾ ಸಾಂಸ್ಕೃತಿಕ ವೇದಿಕೆಗಳ 7ನೇ ದಿನದ ಕಾರ್ಯಕ್ರಮ ಸಂಪನ್ನಗೊಂಡಿತು. ನಾಳೆ(ಅ.3) ಅರಮನೆ ವೇದಿಕೆ ಕಾರ್ಯಕ್ರಮಕ್ಕೆ ತೆರೆ ಬೀಳಲಿದೆ.

ಟಿ.ಎಸ್.ಛಾಯಾಪತಿಯವರಿಗೆ ಕೆ.ಬಿ.ಗಣಪತಿಯವರ ನಮನ



2018ರ ಫೆಬ್ರವರಿಯಲ್ಲಿ ನಡೆದ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆ 40ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕ ಕೆ.ಬಿ.ಗಣಪತಿ ಮತ್ತು ಆಗ ಕೇಂದ್ರ ಸಚಿವರಾಗಿದ್ದ ಹೆಚ್.ಎನ್.ಅನಂತಕುಮಾರ್ (ಈಗ ದಿವಂಗತರಾಗಿದ್ದಾರೆ) ಅವರು ಪ್ರಕಾಶಕ ಟಿ.ಎಸ್.ಛಾಯಾಪತಿಯವರನ್ನು ಸನ್ಮಾನಿಸಿದ್ದರು.

ಮೈಸೂರು,ಅ.2–ಕರ್ನಾಟಕದ ಪ್ರಸಿದ್ಧ ಕನ್ನಡ ಪುಸ್ತಕಗಳ ಪ್ರಕಾಶಕ ಟಿ.ಎಸ್. ಛಾಯಾಪತಿಯವರ ನಿಧನದೊಂದಿಗೆ ನಾವು ಒಬ್ಬ ಉನ್ನತ ವ್ಯಕ್ತಿಯನ್ನು ಕಳೆದು ಕೊಂಡಂತಾಗಿದೆ ಛಾಯಾಪತಿಯವರು ಹೃದಯವಂತರಾಗಿದ್ದರು ಹಾಗೂ ಬರಹ ಗಾರರ ಸ್ನೇಹಿತರಾಗಿದ್ದರು ಎಂದು 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕ ಕೆ.ಬಿ.ಗಣಪತಿ ತಿಳಿಸಿದ್ದಾರೆ.

ಕನ್ನಡ, ಕಲೆ, ಸಂಸ್ಕೃತಿ ಮತ್ತು ಸಾಹಿತ್ಯದಲ್ಲಿ ಅವರಿಗಿದ್ದ ಆಸಕ್ತಿಯನ್ನು ಅವರು ಪ್ರಕಾಶಿಸಿರುವ ಕನ್ನಡ ಪುಸ್ತಕಗಳ ಸಂಖ್ಯೆಯಿಂದ ತಿಳಿದುಕೊಳ್ಳಬಹುದು. ನನಗೆ ಬೇಸರವೆಂದರೆ, ಇಷ್ಟೆಲ್ಲಾ ಸಾಧನೆಗಳ ನಡುವೆಯೂ ಛಾಯಾಪತಿಯವರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ದೊರಕದೇ ಇದ್ದದ್ದು. ಅದಾಗಿಯೂ ಛಾಯಾಪತಿಯವರನ್ನು ಅವರು ಪ್ರಕಾಶಿಸಿದ ಅಪಾರ ಸಂಖ್ಯೆಯ ಪ್ರಸಿದ್ಧ ಬರಹಗಾರರ ಪುಸ್ತಕಗಳಿಂದ ನೆನಪಿಸಿಕೊಳ್ಳಬಹುದು.

ನಾನೂ ಸಹ ಕೆಲವು ಪುಸ್ತಕಗಳನ್ನು ಬರೆದಿದ್ದು, ಅವನ್ನು ಛಾಯಾಪತಿಯವರು ನನಗೆ ಯಾವುದೇ ಅಡಚಣೆ ಹಾಗೂ ಹೊರೆಯಾಗದಂತೆ ಹೊರ ತಂದಿದ್ದಾರೆ. ಇದಕ್ಕಾಗಿ ನಾನು ಅವರಿಗೆ ಆಭಾರಿಯಾಗಿದ್ದೇನೆ. ಛಾಯಾಪತಿಯವರಿಗೆ ಕನ್ನಡ ಪ್ರೇಮ ಮತ್ತು ಕನ್ನಡ ಪುಸ್ತಕಗಳ ಮೇಲಿದ್ದ ಅಭಿಮಾನ ಮತ್ತು ಪ್ರೀತಿ ಅಗಾಧವಾಗಿದ್ದು, ಪುಸ್ತಕ ಪ್ರಕಾಶನವನ್ನು ಅವರು ಹಣಕ್ಕಿಂತಲೂ ಮಿಗಿಲಾಗಿ ಕಾಣುತ್ತಿದ್ದರು. ಹಾಗಾಗಿ ಅವರು ಬಹಳ ಅಪರೂಪದ ಪ್ರಕಾಶಕರಾಗಿದ್ದರು. ನನ್ನ ಇನ್ನೊಂದು ದೊಡ್ಡ ಖೇದವೆಂದರೆ, ನಾಡಿನ ಪ್ರಖ್ಯಾತ ಕವಿ ನಿಸಾರ್ ಅಹಮದ್ ಅವರು ಛಾಯಾಪತಿಯವರ ಮೂಲಕ ನನ್ನನ್ನು ಭೇಟಿಯಾಗಲು ಪ್ರಯತ್ನಿಸಿದ್ದರು. ಆದರೆ, ಆ ಬಹಳ ಗೌರವಾನ್ವಿತ ಭೇಟಿಯು ಸಾಧ್ಯವಾಗಲೇ ಇಲ್ಲ. ಏಕೆಂದರೆ ನಾನು ಆಗ ಆಸ್ಪತ್ರೆಯಲ್ಲಿದ್ದೆ.

ಇನ್ನು ನನ್ನ ಹಾಗೂ ಛಾಯಾಪತಿಯವರ ಒಡನಾಟದ ಬಗ್ಗೆ ಹೇಳಬೇಕೆಂದರೆ ನನ್ನ ಹಾಗೂ ಅವರ ಒಡನಾಟ 30 ವರ್ಷಗಳಷ್ಟು ದೀರ್ಘವಾದದ್ದು. ನನ್ನ ಕನ್ನಡ ಗ್ರಂಥ 'ಆದರ್ಶವಾದಿ'ಯನ್ನು 1992ರಲ್ಲಿ ಅವರು ಹೊರತರುವ ಮೂಲಕ ಆರಂಭಗೊಂಡಿತು. ಈ 'ಆದರ್ಶವಾದಿ' ಪುಸ್ತಕವನ್ನು ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಉಪ ಕುಲಪತಿ ಡಾ.ಡಿ.ಜವರೇಗೌಡರು (ದೇಜಗೌ) ಬಿಡುಗಡೆ ಮಾಡಿದ್ದರು.

ನನ್ನನ್ನು ಒಬ್ಬ ಬರಹಗಾರರನ್ನಾಗಿ ಮಾಡಿ ನನ್ನ ಪುಸ್ತಕವನ್ನು ಹೊರ ತಂದ ಛಾಯಾಪತಿಯವರಿಗೆ ನಾನು ಚಿರ ಋಣಿಯಾಗಿದ್ದೇನೆ. ಛಾಯಾಪತಿಯವರ ಕುಟುಂಬದ ಸದಸ್ಯರಿಗೆ ನನ್ನ ಸಂತಾಪ ಗಳು. ಅವರ ಆತ್ಮ ಸದಾ ಶಾಂತಿಯಿಂದಿರಲಿ ಎಂದು ಹಾಗೂ ಅವರ ಕುಟುಂಬದವರಿಗೆ ದುಃಖ ಭರಿಸುವ ಶಕ್ತಿಯನ್ನು ನೀಡಲಿ ಎಂದು ಭಗವಂತನಲ್ಲಿ ನಾನು ಪ್ರಾರ್ಥಿಸುತ್ತೇನೆ ಎಂದಿದ್ದಾರೆ.

ಬದುಕಿನಲ್ಲಿ ಗಾಂಧಿ, ಲಾಲ್‌ಬಹದ್ದೂರ್ ಶಾಸ್ತ್ರಿಯವರ ತತ್ವಾದರ್ಶ ಅಳವಡಿಸಿಕೊಳ್ಳಿ

ಗಾಂಧಿ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್

ಮೈಸೂರು,ಅ.2(ಪಿಎಂ)– ಜಗತ್ತಿಗೆ ಶಾಂತಿಯ ಸಂದೇಶ ಸಾರಿದ ಮಹಾತ್ಮ ಗಾಂಧೀಜಿಯವರ ತತ್ವಾದರ್ಶಗಳನ್ನು ನಾವೆಲ್ಲರೂ ಮೈಗೂಡಿಸಿಕೊಳ್ಳಬೇಕು. ಅವರ ಸರಳತೆ, ಸಮರ್ಥ ನಾಯಕತ್ವವನ್ನು ಇಡೀ ಜಗತ್ತೇ ಒಪ್ಪಿಕೊಂಡಿದೆ ಎಂದು ಸಹಕಾರ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಹೇಳಿದರು.

ಮೈಸೂರು ಜಿಲ್ಲಾಡಳಿತ, ಮೈಸೂರು ಮಹಾನಗರ ಪಾಲಿಕೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಂಯುಕ್ತಾಶ್ರಯದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಗಾಂಧಿ ಜಯಂತಿ ಕಾರ್ಯಕ್ರಮದ ಅಂಗವಾಗಿ ಮೈಸೂರಿನ ಗಾಂಧಿ ಚೌಕದಲ್ಲಿ ಗಾಂಧಿಯವರ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು.



ಮೈಸೂರಿನ ಗಾಂಧಿಚೌಕದಲ್ಲಿ ಭಾನುವಾರ ಗಾಂಧಿ ಜಯಂತಿ ಅಂಗವಾಗಿ ಗಾಂಧಿ ಪ್ರತಿಮೆಗೆ ಸಚಿವ ಎಸ್.ಟಿ.ಸೋಮಶೇಖರ್ ಪುಷ್ಪ ನಮನ ಸಲ್ಲಿಸಿದರು.

ಗಾಂಧೀಜಿಯವರಲ್ಲಿದ್ದ ಅಹಿಂಸಾ ತತ್ವ, ಆಧ್ಯಾತ್ಮಿಕತೆ, ಪ್ರಾಮಾಣಿಕತೆ, ಶಿಸ್ತು ಮೊದಲಾದ ಗುಣಗಳು ಎಲ್ಲರನ್ನೂ ಪ್ರೇರೇಪಿಸುತ್ತಿದೆ. ಮಹಾತ್ಮ ಗಾಂಧೀಜಿಯವರ ವಿಚಾರಗಳು ಕೇವಲ ಭಾರತಕ್ಕೆ ಮಾತ್ರವಲ್ಲದೇ ಇಡೀ ವಿಶ್ವಕ್ಕೆ ಅವಶ್ಯಕವಾಗಿವೆ. ಅವರ ಸತ್ಯ, ಅಹಿಂಸೆಯ ಮಾರ್ಗವನ್ನೇ ಸ್ವಾತಂತ್ರ್ಯ ಚಳುವಳಿಗೆ ಅನುಸರಿಸಿದರು. ಅತ್ಯಂತ ಸರಳತೆಯ ಜೀವನ ನಡೆಸಿದರು. ಗಾಂಧಿಯವರ ವಿಚಾರಗಳು ಎಂದೆಂದಿಗೂ ಅಮರವಾಗಿರಲಿದೆ ಎಂದು ಹೇಳಿದರು.

ಲಾಲ್ ಬಹದ್ದೂರ್‌ಶಾಸ್ತ್ರಿ ಈ ದೇಶ ಕಂಡ ಸರಳ ಸಜ್ಜನಿಕೆಯ ಪ್ರಧಾನಿ. ರೈತ ಹಾಗೂ ಸೈನಿಕರಿಗಾಗಿ 'ಜೈ ಜವಾನ್, ಜೈ ಕಿಸಾನ್' ಎಂಬ ಘೋಷಣೆ ನೀಡಿದ ದಕ್ಷ ಆಡಳಿತಗಾರರು. ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿಯವರ ತತ್ವವನ್ನು ನಿತ್ಯದ ಬದುಕಿನಲ್ಲಿ ಅಳವಡಿಕೊಳ್ಳುವುದು ಇಂದಿನ ಅಗತ್ಯ ಎಂದು ಹೇಳಿದರು.

ಸರ್ವಧರ್ಮ ಪ್ರಾರ್ಥನೆ: ಬಳಿಕ ಪುರಭವನದಲ್ಲಿ ಗಾಂಧಿ ಜಯಂತಿ ಅಂಗವಾಗಿ ಹಮ್ಮಿಕೊಂಡಿದ್ದ ಸರ್ವಧರ್ಮ ಪ್ರಾರ್ಥನಾ ಸಭೆಯಲ್ಲಿ ಸಚಿವರು ಭಾಗವಹಿಸಿದ್ದರು. ಈ ಪ್ರಾರ್ಥನಾ ಸಭೆಯಲ್ಲಿ ವಿವಿಧ ಧರ್ಮದ ಧರ್ಮಗುರುಗಳು ಪಾಲ್ಗೊಂಡಿದ್ದರು. ಇದೇ ವೇಳೆ ದಸರಾ, ಗಾಂಧಿ ಜಯಂತಿ ಪ್ರಯುಕ್ತ ಪಾಲಿಕೆ ಹಾಗೂ ದಸರಾ ಸ್ವಚ್ಛತೆ ಮತ್ತು ವ್ಯವಸ್ಥೆ ಉಪಸಮಿತಿ ವತಿಯಿಂದ ಶುಕ್ರವಾರ ಹಮ್ಮಿಕೊಂಡಿದ್ದ ನಗರದ ಅನೈರ್ಮಲ್ಯದ ಸ್ಥಳಗಳನ್ನು ಸ್ವಚ್ಛಗೊಳಿಸಿ ರಂಗೋಲಿ ಬಿಡಿಸುವಲ್ಲಿನ ಉತ್ತಮ ಕಾರ್ಯ ನಿರ್ವಹಿಸಿದ ಪೌರಕಾರ್ಮಿಕರು, ಅಧಿಕಾರಿ ಹಾಗೂ ಸಿಬ್ಬಂದಿ ಒಳಗೊಂಡ ತಂಡಗಳಿಗೆ ಪ್ರಶಂಸಾ ಪತ್ರಗಳನ್ನು ಸಚಿವ ಸೋಮಶೇಖರ್ ವಿತರಣೆ ಮಾಡಿದರು.

ಇದಕ್ಕೂ ಮುನ್ನ ಪಾಲಿಕೆ ಹೆಚ್ಚುವರಿ ಉಪ ಆಯುಕ್ತೆ ರೂಪ ಸ್ವಚ್ಛತಾ ಪ್ರತಿಜ್ಞಾವಿಧಿ ಬೋಧಿಸಿದರು. ಶಾಸಕ ತನ್ವೀರ್ ಸೇಠ್, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಜಿಪಂ ಸಿಇಓ ಪೂರ್ಣಿಮಾ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್, ಜಂಗಲ್ಸ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಮಾಜಿ ಅಧ್ಯಕ್ಷ ಅಪ್ಪಣ್ಣ, ಪಾಲಿಕೆ ಉಪ ಆಯುಕ್ತರಾದ (ಆಡಳಿತ) ಎಂ.ಕೆ.ಸವಿತಾ, ಅಧೀಕ್ಷಕ ಅಭಿಯಂತರ ಮಹೇಶ್ ಮತ್ತಿತರರು ಹಾಜರಿದ್ದರು.

ನೈಋತ್ಯ ರೈಲ್ವೆಯ ಮೈಸೂರು ವಿಭಾಗದಲ್ಲಿ ಗಾಂಧಿ ಜಯಂತಿ

ಮೈಸೂರು, ಅ.2(ಪಿಎಂ)– ನೈಋತ್ಯ ರೈಲ್ವೆಯ ಮೈಸೂರು ವಿಭಾಗದ ವತಿಯಿಂದ ಮೈಸೂರಿನ ರೈಲ್ವೆ ಕ್ರೀಡಾ ಮೈದಾನ ಸಮೀಪದ ಗಾಂಧಿವನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಮಹಾತ್ಮ ಗಾಂಧಿ ಜಯಂತಿಯಲ್ಲಿ ಗಾಂಧಿ ಪುತ್ಥಳಿಗೆ ನೈಋತ್ಯ ರೈಲ್ವೆ ಮೈಸೂರು ವಿಭಾಗದ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ರಾಹುಲ್ ಅಗರ್ವಾಲ್ ಪುಷ್ಪ ನಮನ ಸಲ್ಲಿಸಿದರು.

ಬಳಿಕ ಮಾತನಾಡಿದ ಅವರು, ನೈಋತ್ಯ ರೈಲ್ವೆಯ ಮೈಸೂರು ವಿಭಾಗವು 'ಸ್ವಚ್ಛ ರೈಲು, ಸ್ವಚ್ಛ ಭಾರತ' ಅಡಿಯಲ್ಲಿ ಸೆ.16 ರಿಂದ ಅ.2ರವರೆಗೆ ವಿಭಾಗದಾದ್ಯಂತ 15 ದಿನಗಳ ಕಾಲದ ಸ್ವಚ್ಛತಾ ಅಭಿಯಾನ ಪಾಕ್ಷಿಕ ಕಾರ್ಯಕ್ರಮ ಆಚರಿಸಿತು.



ಮೈಸೂರಿನ ರೈಲ್ವೆ ಕ್ರೀಡಾ ಮೈದಾನ ಸಮೀಪದ ಗಾಂಧಿ ವನದಲ್ಲಿ ಭಾನುವಾರ ಗಾಂಧಿ ಜಯಂತಿ ಅಂಗವಾಗಿ ಇಲ್ಲಿನ ಗಾಂಧಿ ಪುತ್ಥಳಿಗೆ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ರಾಹುಲ್ ಅಗರ್ವಾಲ್ ಪುಷ್ಪ ನಮನ ಸಲ್ಲಿಸಿದರು.

ಸ್ವಚ್ಛತಾ ಪಾಕ್ಷಿಕದಲ್ಲಿ ಪ್ರತಿ ದಿನ ಸ್ವಚ್ಛ ಹಳಿಗಳು, ಸ್ವಚ್ಛ ಜಲಮೂಲಗಳು, ಸ್ವಚ್ಛತೆಯಲ್ಲಿ ಸಮುದಾಯ ತೊಡಗಿಸಿಕೊಳ್ಳುವಿಕೆ, ಸ್ವಚ್ಛ ವಸತಿ ಸಮೂಹ, ನಿಲ್ದಾಣಗಳು ಮತ್ತು ಸ್ವಚ್ಛ ರೈಲುಗಳಂತಹ ಒಂದೊಂದು ಸ್ವಚ್ಛತಾ ವಿಷಯದ ಬಗ್ಗೆ ವಿಶೇಷ ಗಮನ ನೀಡಲಾಯಿತು ಎಂದು ತಿಳಿಸಿದರು.

'ಸ್ವಚ್ಛತೆಯ ಅರಿವು' ಬಗೆಗಿನ ವಿಷಯದೊಂದಿಗೆ ಪ್ರಾರಂಭವಾದ ಈ ಅಭಿಯಾನದಲ್ಲಿ ರೈಲ್ವೆ ಸಿಬ್ಬಂದಿ, ಸ್ವಚ್ಛತೆ ರೂಡಿಸಿಕೊಳ್ಳುವ ಮತ್ತು ಸ್ವಚ್ಛತೆಯನ್ನು ಕಾಪಾಡುವ ಪ್ರತಿಜ್ಞೆ ಮಾಡಿದರು. ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡಿಸುವ ಈ ಕಾರ್ಯಕ್ರಮದಲ್ಲಿ ಸಿಬ್ಬಂದಿ, ಸಾರ್ವಜನಿಕರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ಸರ್ಕಾರೇತರ ಸಂಸ್ಥೆಗಳ ಭಾಗವಹಿಸುವಿಕೆಯೊಂದಿಗೆ ವಿಭಿನ್ನ ಚಟುವಟಿಕೆಗಳನ್ನು ವಿಭಾಗದಾದ್ಯಂತ ನಡೆಸಲಾಯಿತು ಎಂದು ಹೇಳಿದರು.

ಇದೇ ವೇಳೆ ಸ್ವಚ್ಛತಾ ಪಾಕ್ಷಿಕದ ಅಂಗವಾಗಿ ನಡೆದಿದ್ದ ಪ್ರಬಂಧ ಸ್ಪರ್ಧೆ ಹಾಗೂ ಚಿತ್ರಕಲಾ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಅಲ್ಲದೆ, ಹಲವು ಸ್ವಚ್ಛತಾ ಸಿಬ್ಬಂದಿಯನ್ನು ಸನ್ಮಾನಿಸಲಾಯಿತು.

ಮೈಸೂರು ನಗರದ ವಿವಿಧೆಡೆ ಭಾನುವಾರ ಗಾಂಧಿ ಜಯಂತಿ ಆಚರಿಸಲಾಯಿತು. ವಿವಿಧ ಸಂಘ–ಸಂಸ್ಥೆ, ಶಿಕ್ಷಣ ಸಂಸ್ಥೆಗಳಲ್ಲಿ ಗಾಂಧಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಗಾಂಧಿಯವರ ಸ್ಮರಣೆ ಮಾಡಲಾಯಿತು.

ಇದಕ್ಕೂ ಮುನ್ನ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ರಾಹುಲ್ ಅಗರ್ವಾಲ್ ಸ್ವಚ್ಛತಾ ಪ್ರತಿಜ್ಞಾವಿಧಿ ಬೋಧಿಸಿದರು.

ಅಲ್ಲದೆ, ಗಾಂಧಿವನ ಸಮೀಪದ ಲಿನೆನ್ ಕೇರ್ ಸೆಂಟರ್ ಆವರಣದಲ್ಲಿ ರೈಲ್ವೆ ಅಧಿಕಾರಿ ಮತ್ತು ಸಿಬ್ಬಂದಿಯಿಂದ ಸ್ವಚ್ಛತಾ ಶ್ರಮದಾನ ನಡೆಯಿತು.

ಜೊತೆಗೆ ಏಕ ಬಳಕೆಯ ಪ್ಲಾಸ್ಟಿಕ್ ನಿಷೇಧದ ಕುರಿತು ಅರಿವು ಮೂಡಿಸಲು ಮೈಸೂರು ರೈಲ್ವೆ ನಿಲ್ದಾಣದಲ್ಲಿ ರೈಲು ಪ್ರಯಾಣಿಕರಿಗೆ 500ಕ್ಕೂ ಹೆಚ್ಚು ಬಟ್ಟೆಯ ಬ್ಯಾಗ್‌ಗಳನ್ನು ವಿತರಣೆ ಮಾಡಲಾಯಿತು. ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕರಾದ ವಿನಾಯಕ್ ಆರ್. ನಾಯಕ್, ಇ.ವಿಜಯ ಸೇರಿದಂತೆ ಹಿರಿಯ ಅಧಿಕಾರಿಗಳು ಮತ್ತು ಸಿಬ್ಬಂದಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಗಾಂಧೀಜಿ ಕನಸಿನ ರಾಮರಾಜ್ಯ ನಿರ್ಮಾಣಕ್ಕೆ ಶಿಕ್ಷಣ ಅನಿವಾರ್ಯ

ಜೈಲು ಕೈದಿಗಳಿಗೆ ಜಿಲ್ಲಾ ಸತ್ರ ನ್ಯಾಯಾಧೀಶ ಎಂ.ಎಲ್.ರಘುನಾಥ್ ಸಲಹೆ



ಮೈಸೂರು, ಅ.2(ಆರ್‌ಕೆ)–ಮಹಾತ್ಮ ಗಾಂಧೀಜಿ ಅವರ ಕನಸಿನ ರಾಮರಾಜ್ಯ ನಿರ್ಮಾಣಕ್ಕೆ ಪ್ರತಿಯೊಬ್ಬರೂ ಶಿಕ್ಷಣ ಪಡೆಯುವುದು ಅನಿವಾರ್ಯ ಎಂದು ಮೈಸೂರು ಜಿಲ್ಲಾ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ಎಂ.ಎಲ್.ರಘುನಾಥ ಅವರು ಅಭಿಪ್ರಾಯಪಟ್ಟಿದ್ದಾರೆ.

ಲೋಕ ಶಿಕ್ಷಣ ನಿರ್ದೇಶನಾಲಯ, ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆ, ಜಿಲ್ಲಾಡಳಿತ ಹಾಗೂ ಲೋಕ ಶಿಕ್ಷಣ ಸಮಿತಿ ಸಂಯುಕ್ತಾಶ್ರಯದಲ್ಲಿ ಮೈಸೂರಿನ ಕೇಂದ್ರ ಕಾರಾಗೃಹದಲ್ಲಿ ಇಂದು ಏರ್ಪಡಿಸಿದ್ದ 'ಕಲಿಕೆಯಿಂದ ಬದಲಾವಣೆ' ಎಂಬ ಸಾಕ್ಷರತಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಶಿಕ್ಷಣದ ಜೊತೆಗೆ ವೃತ್ತಿ ಮತ್ತು ದೈಹಿಕ ಶಿಕ್ಷಣವು ಮನುಷ್ಯನ ಬದುಕಿಗೆ ಮಾರ್ಗದರ್ಶನ ನೀಡುತ್ತದೆ ಎಂದರು.

ಜೈಲು ಕೈದಿಗಳಿಗೆ ಅಕ್ಷರ ಜ್ಞಾನ, ವೃತ್ತಿ ತರಬೇತಿ ನೀಡಿ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮ ಮಾಡುತ್ತಿರುವುದರಿಂದ ಅವರ ವ್ಯಕ್ತಿತ್ವ ವಿಕಸನಗೊಂಡು ಜೀವನ ರೂಪಿಸಿಕೊಳ್ಳಲು ಸಹಕಾರಿಯಾಗಲಿದೆ ಎಂದು ನ್ಯಾಯಾಧೀಶರು ನುಡಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ ಮಾತನಾಡಿ, ಕಲಿಕೆಯಿಂದ ಆತ್ಮವಿಶ್ವಾಸ ವೃದ್ಧಿಗೊಳ್ಳುವುದರ ಜೊತೆಗೆ ಉತ್ತಮ ಭವಿಷ್ಯ ರೂಪುಗೊಳ್ಳುತ್ತದೆ ಎಂದರು. ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರರಾಜೇಅರಸ್, ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿ ಕೆ.ಹೆಚ್. ಚಂದ್ರಶೇಖರ್, 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಸರಸ್ವತಿ ಕೋಸಂದರ್, 2ನೇ ಹೆಚ್ಚುವರಿ ನ್ಯಾಯಾಧೀಶರಾದ ಪುಂಡಲೀಕ ಹೊಸಮನಿ, ನ್ಯಾಯಾಧೀಶರಾದ ಮಲ್ಲಿಕಾರ್ಜುನ, ದಯಾನಂದ ಮೂರ್ತಿ, ಜೈಲು ಮುಖ್ಯ ಅಧೀಕ್ಷಕಿ ಕೆ.ಸಿ.ದಿವ್ಯಶ್ರೀ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.



ಇತ್ತೀಚೆಗೆ ಅಪಘಾತದಲ್ಲಿ ಗಾಯಗೊಂಡ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಸಹಕಾರ್ಯದರ್ಶಿ ಚಿನ್ನರಾಜು ಅವರಿಗೆ ಸಂಘದ ರಾಜ್ಯಾಧ್ಯಕ್ಷ ಶಂಭುಲಿಂಗ ಅವರು ಮೈಸೂರು ಜಿಲ್ಲಾಧ್ಯಕ್ಷ ಹೋಮದೇವ, ಪದಾಧಿಕಾರಿಗಳಾದ ಎಂಎನ್‌ಆರ್, ಸಿ.ಶಿವಣ್ಣ, ಟಿ.ಕೆ.ಸತೀಶ, ಈಶ್ವರ ಪ್ರಸಾದ್, ಸಿ.ಆರ್. ದತ್ತಾತ್ರೇಯ ಸಮ್ಮುಖದಲ್ಲಿ ಧನ ಸಹಾಯ ಮಾಡಿದರು.

ಮೈಸೂರು ಜಿಲ್ಲೆಯಲ್ಲಿ ಸರ್ಕಾರಿ ಆಸ್ಪತ್ರೆಗಳ ಚಿಕಿತ್ಸೆ ಪಡೆದವರೇ ಹೆಚ್ಚು

ಕಳೆದ ವರ್ಷ 47 ಲಕ್ಷ ಜನರಿಗೆ ಆರೋಗ್ಯ ಸೇವೆ: ಡಿಹೆಚ್‌ಓ ಡಾ.ಕೆ.ಹೆಚ್.ಪ್ರಸಾದ್



ಮೈಸೂರು,ಅ.2(ಎಂಟಿವೈ)–ಜಿಲ್ಲೆಯಲ್ಲಿ ಖಾಸಗಿ ಆಸ್ಪತ್ರೆಗಳಿಗಿಂತ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದವರ ಸಂಖ್ಯೆಯೇ ಹೆಚ್ಚಾಗಿದೆ ಎಂದು ಜಿಲ್ಲಾ ಆರೋಗ್ಯ ಅಧಿಕಾರಿ ಡಾ.ಕೆ.ಹೆಚ್.ಪ್ರಸಾದ್ ತಿಳಿಸಿದ್ದಾರೆ.

ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಜಿಲ್ಲಾ ಆಸ್ಪತ್ರೆ ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲಚೇತನರ ಹಾಗೂ ಹಿರಿಯನಾಗರಿಕರ ಸಬಲೀಕರಣ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದೊಂದಿಗೆ ನಡೆದ 'ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಮತ್ತು ಹಿರಿಯ ನಾಗರಿಕರ ಆರೋಗ್ಯ ತಪಾಸಣಾ ಶಿಬಿರ'ದಲ್ಲಿ ಮಾತನಾಡಿದ ಅವರು, ಸರ್ಕಾರಿ ಆಸ್ಪತ್ರೆಗಳೆಂದರೆ ಮೂಗು ಮುರಿಯುವವರೇ ಹೆಚ್ಚು. ಆದರೆ, ಮೈಸೂರು ಜಿಲ್ಲೆಯಲ್ಲಿ ಸರ್ಕಾರಿ ಆಸ್ಪತ್ರೆಗಳು ರೋಗಿಗಳಿಗೆ ಅತ್ಯುತ್ತಮವಾದ ಆರೋಗ್ಯ ಸೇವೆ ಒದಗಿಸುತ್ತಿವೆ. ರೋಗಿಗಳ ಆರೋಗ್ಯ ಕಾಪಾಡುವಲ್ಲಿ ಸರ್ಕಾರಿ ಆಸ್ಪತ್ರೆಗಳು ಯಶಸ್ವಿಯಾಗಿವೆ. ಮೈಸೂರು ಜಿಲ್ಲೆಯಲ್ಲಿ ಕಳೆದೊಂದು ವರ್ಷದಲ್ಲಿ 47 ಲಕ್ಷ ಜನ ಸರ್ಕಾರಿ ಆಸ್ಪತ್ರೆಗಳಲ್ಲಿ ಆರೋಗ್ಯ ತಪಾಸಣೆ ಮಾಡಿಸಿಕೊಂಡು ಚಿಕಿತ್ಸೆ ಪಡೆದಿದ್ದಾರೆ. ಜಿಲ್ಲೆಯಲ್ಲಿ ಖಾಸಗಿ ಆಸ್ಪತ್ರೆಗಳಿಗಿಂತ ಸರ್ಕಾರಿ ಆಸ್ಪತ್ರೆಗಳಲ್ಲಿ ತಪಾಸಣೆ ಮಾಡಿಸಿಕೊಂಡಿರುವವರ ಸಂಖ್ಯೆ ಹೆಚ್ಚಾಗಿರುವುದರಿಂದ ಸರ್ಕಾರಿ ಆಸ್ಪತ್ರೆಯಲ್ಲಿ ಗುಣಮಟ್ಟದ ಚಿಕಿತ್ಸೆ ದೊರೆಯುತ್ತಿರುವುದು ದೃಢಪಟ್ಟಿದೆ ಎಂದರು.

ವಿದೇಶಗಳಲ್ಲಿ ಹಿರಿಯ ನಾಗರಿಕರಲ್ಲಿ ಶೇ.30ರಷ್ಟು ಮಂದಿ 60 ವರ್ಷಕ್ಕಿಂತ ಹೆಚ್ಚಿನ ಅವಧಿ ಜೀವಿಸುತ್ತಾರೆ. ಆದರೆ, ಭಾರತದಲ್ಲಿ 60ವರ್ಷ ದಾಟಿದವರಲ್ಲಿ ಮರಣ ಪ್ರಮಾಣ ಹೆಚ್ಚಾಗುತ್ತಿದೆ. ವಯಸ್ಸಾದ ಮೇಲೆ ಕಾಯಿಲೆಗಳು ಬರುತ್ತವೆ. ಕಳೆದ ವರ್ಷ ಸರ್ಕಾರಿ ಆಸ್ಪತ್ರೆಗಳಲ್ಲಿ 47 ಲಕ್ಷ ಜನರಿಗೆ ಚಿಕಿತ್ಸೆ ನೀಡಲಾಗಿದೆ. ಅವರಲ್ಲಿ ಹತ್ತು ಸಾವಿರ ಮಂದಿಗೆ ಮೇಜರ್ ಸರ್ಜರಿ ಮಾಡಲಾಗಿದೆ. 30 ಸಾವಿರ ಜನರಿಗೆ ಇತರ ಕಾಯಿಲೆಗಳ ಶಸ್ತ್ರಚಿಕಿತ್ಸೆ ಮಾಡಲಾಗಿದೆ ಎಂದು ವಿವರಿಸಿದರು.

ಸಮಾರಂಭವನ್ನು ಶಾಸಕ ಎಲ್.ನಾಗೇಂದ್ರ ಉದ್ಘಾಟಿಸಿದರು. ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಅಮರನಾಥ್, ಜಿಲ್ಲಾ ಸ್ಥಾನಿಕ ವೈದ್ಯಾಧಿಕಾರಿ ಡಾ.ನಯಾಜ್ ಪಾಷ, ಅಂಗವಿಕಲರ ಮತ್ತು ವಿಕಲಚೇತನರ ಹಿರಿಯ ನಾಗರಿಕರ ಕಲ್ಯಾಣ ಇಲಾಖೆ ಉಪ ನಿರ್ದೇಶಕಿ ಮಾಲಿನಿ, ಜೆಎಸ್‌ಎಸ್ ಆಸ್ಪತ್ರೆ ಹೆಚ್‌ಓಡಿ ಡಾ.ಪ್ರತಿಭಾ ಪೆರಾರ ಹಾಜರಿದ್ದರು.

ಜಿಲ್ಲಾ ಆಸ್ಪತ್ರೆಯಲ್ಲಿ ವಯೋವೃದ್ಧರ ಆರೈಕೆ ಕೇಂದ್ರವನ್ನು ಶಾಸಕ ಎಲ್.ನಾಗೇಂದ್ರ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ಹಿರಿಯ ನಾಗರಿಕರ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಹಲವು ಕ್ರಮ ಕೈಗೊಳ್ಳಲಾಗಿದೆ. ಮೈಸೂರಲ್ಲಿ ಹಲವು ಹೊಸ ಆಸ್ಪತ್ರೆಗಳು ಚಾಮರಾಜ ಕ್ಷೇತ್ರ ವ್ಯಾಪ್ತಿಯಲ್ಲೇ ಬರುತ್ತವೆ. ಎಲ್ಲಾ ಸರ್ಕಾರಿ ಆಸ್ಪತ್ರೆಗಳಿಗೆ ಉತ್ತಮ ಸೌಲಭ್ಯ ಒದಗಿಸಲಾಗಿದೆ. ಇದರಿಂದ ಗುಣಮಟ್ಟದ ಆರೋಗ್ಯ ಸೇವೆ ದೊರೆಯುತ್ತಿದೆ ಎಂದರು. ಈ ಆರೈಕೆ ಕೇಂದ್ರದಲ್ಲಿ 30 ಮಂದಿಗೆ ಚಿಕಿತ್ಸೆ ನೀಡಲಾಗುತ್ತದೆ. ವಯೋವೃದ್ಧರ ಉಪಶಮನ ಆರೈಕೆ ಮತ್ತು ಒಳರೋಗಿಗಳ ವಿಭಾಗವಿದೆ. ಪ್ರತ್ಯೇಕವಾಗಿ ಇರಿಸಿ ಚಿಕಿತ್ಸೆ ಕೊಡುವ ಜತೆಗೆ ಹಲವು ಸೌಲಭ್ಯಗಳನ್ನು ನೀಡಲಾಗಿದೆ. ಇದಲ್ಲದೆ, ಚಿಕಿತ್ಸೆ ಪಡೆದು ಆಸ್ಪತ್ರೆಯಿಂದ ಬಿಡುಗಡೆಯಾದ ಮೇಲೆ ಮತ್ತೆ ಅವರನ್ನು ವಾಹನದಲ್ಲಿ ಕರೆದುಕೊಂಡು ಬಂದು, ಚಿಕಿತ್ಸೆ ನೀಡಿ ಆರೈಕೆ ಮಾಡುವ ವ್ಯವಸ್ಥೆ ಇದೆ ಎಂದರು.

ಪ್ರೊ. ಸಿ.ಬಸವರಾಜು ಅವರಿಗೆ ಸನ್ಮಾನ



ಪ್ರೊ. ಸಿ.ಬಸವರಾಜು ವಿದ್ಯಾರ್ಥಿ–ಹಿತೈಷಿಗಳ ವೇದಿಕೆ, ಮೈಸೂರು ವತಿಯಿಂದ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಹುಬ್ಬಳ್ಳಿಯ ಕರ್ನಾಟಕ ರಾಜ್ಯ ಕಾನೂನು ಮಹಾವಿದ್ಯಾಲಯದ ಕುಲಪತಿ ಪ್ರೊ.ಸಿ. ಬಸವರಾಜು ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ನ್ಯಾಯಮೂರ್ತಿ ಎಂ.ಮಹದೇವಮ್ಮ, ಎನ್.ಆರ್.ಲೋಕೇಶ್, ಕೆ.ಜೆ.ಕೃಷ್ಣಪ್ಪ, ಡಾ.ಗೋವಿಂದ ಶೆಟ್ಟಿ, ಡಾ.ಎಂ.ಎಸ್. ಬೆಂಜಮಿನ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಸೋಮವಾರ 3 ಅಕ್ಟೋಬರ್ 2022

ಮೂಲ ಜ್ಞಾನದ ಅರಿವು ಮೂಡಿಸಿಕೊಳ್ಳುವುದೇ ಜಾನಪದ!

ಜಾನಪದ ದಸರಾ ಉತ್ಸವದಲ್ಲಿ ಪ್ರೊ.ಹಿ.ಶಿ. ರಾಮಚಂದ್ರೇಗೌಡರು ಅಭಿಪ್ರಾಯ



ಮಡಿಕೇರಿ,ಅ.2– ಈ ನೆಲದ ಮೂಲ ಸಂಸ್ಕೃತಿಯ ತಾಯಿ ಬೇರು ಆಗಿರುವ 'ಜಾನಪದ'ವನ್ನು ಹುಡುಕುವುದೆಂದರೆ ಅದು ನಮ್ಮ ಮೂಲ ಜ್ಞಾನದ ಅರಿವನ್ನು ಮೂಡಿಸಿಕೊಳ್ಳುವುದೇ ಆಗಿದೆ ಎಂದು ಕರ್ನಾಟಕ ಜಾನಪದ ಪರಿಷತ್ ಅಧ್ಯಕ್ಷರು ಹಾಗೂ ಜಾನಪದ ವಿದ್ವಾಂಸ ಪ್ರೊ.ಹಿ.ಶಿ. ರಾಮಚಂದ್ರೇಗೌಡರು ಅಭಿಪ್ರಾಯ ಪಟ್ಟಿದ್ದಾರೆ.

ಕೊಡಗು ಜಾನಪದ ಪರಿಷತ್ ಮತ್ತು ಮಡಿಕೇರಿ ದಸರಾ ಸಮಿತಿಯಿಂದ ನಗರದ ಗಾಂಧಿ ಮೈದಾನದ ಭವ್ಯ ವೇದಿಕೆಯಲ್ಲಿ ಜಾನಪದ ಪರಿಕರ "ಪರೆ"ಯಿಂದ ಭತ್ತವನ್ನು ಅಳೆಯುವ ಮೂಲಕ 'ಜಾನಪದ ದಸರಾ' ಉತ್ಸವಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಜಾನಪದವೆಂದರೆ ಹಳೆಯದೆನ್ನುವ ಮಾತು ಸರಿಯಲ್ಲ. ಜಾನಪದ ಸಂಸ್ಕೃತಿ, ಹಾಡು, ಕಲೆಗಳನ್ನು ಉಳಿಸುವ ಮೂಲಕ ಜನ ಸಮುದಾಯಕ್ಕೆ ಒಳ್ಳೆಯ ವಿಚಾರಗಳನ್ನು ನೀಡುವುದು ಅತ್ಯವಶ್ಯವಾಗಿದೆ ಎಂದು ಹೇಳಿದರು. ಭೂಮಿ ತಾಯಿಯನ್ನು, ಅಮ್ಮನನ್ನು ಗುರುತಿಸಿದ್ದು ಗ್ರಾಮೀಣ ಸಂಸ್ಕೃತಿಯೇ ಆಗಿದೆ. ಈ ನೆಲೆಗಟ್ಟಿನಡಿ ಜಾನಪದ ಸಂಸ್ಕೃತಿಯನ್ನು ಉಳಿಸಿ ಪುನರುಜ್ಜೀವನಗೊಳಿಸುವ ಕಾರ್ಯ ನಡೆಯಬೇಕೆಂದು ರಾಮಚಂದ್ರಗೌಡ ಅವರು ಅನಿಸಿಕೆ ವ್ಯಕ್ತಪಡಿಸಿದರು. ಜಾನಪದ ಸಾಹಿತ್ಯ, ಅದರಲ್ಲಿನ ಕಲೆ, ಹಾಡುಗಳು, ಬದುಕಿನ ರೀತಿ ನೀತಿಗಳನ್ನು ನಮ್ಮಲ್ಲೂ ಅಳವಡಿಸಿಕೊಳ್ಳುವ ಮೂಲಕ ಪ್ರತಿಯೊಬ್ಬರು ಸ್ವಕೀಯರಾಗಬೇಕೆಂದು ರಾಮಚಂದ್ರಗೌಡ ಕರೆ ನೀಡಿದರು.

ಮಡಿಕೇರಿ ಕ್ಷೇತ್ರದ ಶಾಸಕ ಅಪ್ಪಚ್ಚು ರಂಜನ್ ಮಾತನಾಡಿ, ಪಾಶ್ಚಿಮಾತ್ಯ ಸಂಸ್ಕೃತಿಗೆ ಮಾರು ಹೋಗುವ ಮೂಲಕ ನಮ್ಮ ಜಾನಪದ ಸಂಸ್ಕೃತಿ ನಶಿಸುತ್ತಿದೆ. ಇದನ್ನು ಮನಶ್ಚೇತನಗೊಳಿಸುವ ನಿಟ್ಟಿನಲ್ಲಿ, ನಮ್ಮಲ್ಲಿನ ಶ್ರೀಮಂತ ಜಾನಪದ ಸಾಹಿತ್ಯ, ಸಂಸ್ಕೃತಿ, ಕಲೆಗಳ ಬಗ್ಗೆ ಯುವ ಸಮೂಹಕ್ಕೆ ಅರಿವು ಮೂಡಿಸುವ ಕೆಲಸ ನಡೆಯಬೇಕಾಗಿದೆ ಎಂದು ಹೇಳಿದರು.

ಕೊಡಗು ಜಿಲ್ಲಾ ಜಾನಪದ ಪರಿಷತ್ ಅಧ್ಯಕ್ಷರಾದ ಬಿ.ಜಿ. ಅನಂತಶಯನ ಮಾತನಾಡಿ, ಜಾನಪದ ಎನ್ನುವುದು ಹೃದಯದಿಂದ ಹರಿದು ಬರುವ, ಜೀವನ ಕ್ರಮದಲ್ಲಿ ಮೂಡಿ ಬರುವ ವಿಚಾರವೇ ಆಗಿದೆ ಎಂದು ತಿಳಿಸಿದರು. ರಾಮನಗರದ ಜಾನಪದ ಲೋಕದ ಸ್ಥಾಪಕ ತಿಮ್ಮೇಗೌಡ ಅವರ ಆಸಕ್ತಿಯಿಂದ 2016ರಲ್ಲಿ ಕೊಡಗಿನಲ್ಲಿ ಜಾನಪದ ಪರಿಷತ್ ಆರಂಭಗೊಂಡಿತು. ಪ್ರಸ್ತುತ ಜಿಲ್ಲೆಯ 5 ತಾಲೂಕುಗಳಲ್ಲಿ, 2 ಹೋಬಳಿಗಳಲ್ಲಿ ಜಾನಪದ ಪರಿಷತ್ ಕಾರ್ಯಕ್ರಮಗಳನ್ನು ಆಯೋಜಿಸಿಕೊಂಡು ಬರುತ್ತಿದೆ ಎಂದು ಅನಂತಶಯನ ಮಾಹಿತಿ ನೀಡಿದರಲ್ಲದೇ, ಜಾನಪದದ ಉಳಿವಿಗೆ ಪ್ರತಿಯೊಬ್ಬರ ಪ್ರಯತ್ನ ಅತ್ಯವಶ್ಯ ಎಂದು ನುಡಿದರು.

ಮಡಿಕೇರಿ ದಸರಾ ಸಮಿತಿ ಅಧ್ಯಕ್ಷರು ಹಾಗೂ ನಗರಸಭಾ ಅಧ್ಯಕ್ಷರಾದ ಅನಿತಾ ಪೂವಯ್ಯ ಮಾತನಾಡಿ, ಜಾನಪದ ಸಂಸ್ಕೃತಿಯನ್ನು ಉಳಿಸುವಲ್ಲಿ ತಾಯಿಯ ಜವಾಬ್ದಾರಿ ಅತ್ಯಂತ ಪ್ರಮುಖವಾಗಿದೆ ಎಂದು ಅಭಿಪ್ರಾಯಪಟ್ಟರು.

ಮಡಿಕೇರಿ ದಸರಾ ಸಮಿತಿ ಕಾರ್ಯಾಧ್ಯಕ್ಷ ಕೆ.ಎಸ್. ರಮೇಶ್ ಮಾತನಾಡಿ, ಡಿಜಿಟಲ್ ಯುಗದಲ್ಲಿ ಅದರಲ್ಲೂ ನಗರ ಪ್ರದೇಶದ ಮಂದಿಗೆ ಜಾನಪದ ಕಲೆ, ಪರಿಕರಗಳ ಅರಿವೇ ಇಲ್ಲದ ಸ್ಥಿತಿ ನಿರ್ಮಾಣವಾಗಿದೆ. ಯುವ ಪೀಳಿಗೆಗೆ ಜಾನಪದದ ಮಹತ್ವದ ಅರಿವನ್ನು ಮೂಡಿಸುವಂತಾಗಬೇಕೆಂದರು.

ಇದೇ ಸಂದರ್ಭ ರಾಜ್ಯ ಜಾನಪದ ಪರಿಷತ್ ಅಧ್ಯಕ್ಷ ಪ್ರೊ.ಹಿ.ಶಿ. ರಾಮಚಂದ್ರೇಗೌಡ ಮತ್ತು ಅವರ ಧರ್ಮಪತ್ನಿ ನಾಗಚಂದ್ರ ಕುಮಾರಿ ಅವರನ್ನು ಕೊಡಗು ಜಾನಪದ ಪರಿಷತ್ ವತಿಯಿಂದ ಸನ್ಮಾನಿಸಿ ಅಭಿನಂದಿಸಲಾಯಿತು.

ವೇದಿಕೆಯಲ್ಲಿ ಮಡಿಕೇರಿ ದಸರಾ ಸಮತಿ ಉಪಾಧ್ಯಕ್ಷೆ ಸವಿತಾ ರಾಕೇಶ್, ಕುಂದುರು ಮೊಟ್ಟೆ ಮಂಟಪ ಸಮಿತಿ ಅಧ್ಯಕ್ಷ ನಂದಾ ಉತ್ತಪ್ಪ, ಕೋದಂಡರಾಮ ಮಂಟಪ ಸಮಿತಿ ಅಧ್ಯಕ್ಷ ತಿಮ್ಮಯ್ಯ, ಕೋಟೆ ಮಹಾಗಣಪತಿ ಮಂಟಪ ಸಮಿತಿ ಅಧ್ಯಕ್ಷ ಚಂದ್ರ, ದಂಡಿನ ಮಾರಿಯಮ್ಮ ಕರಗ ಸಮಿತಿ ಅಧ್ಯಕ್ಷ ಜಿ.ಸಿ. ಉಮೇಶ್, ಜಿಲ್ಲಾ ಜಾನಪದ ಪರಿಷತ್ ಕಾರ್ಯದರ್ಶಿ ಉಜ್ವಲ್ ರಂಜಿತ್, ವಿರಾಜಪೇಟೆ ಜಾನಪದ ಪರಿಷತ್ ಅಧ್ಯಕ್ಷ ಟೋನಿ ಥೋಮಸ್, ಪೊನ್ನಂಪೇಟೆ ಘಟಕದ ಅಧ್ಯಕ್ಷ ದಿಲನ್, ಶನಿವಾರಸಂತೆ ಘಟಕದ ಅಧ್ಯಕ್ಷೆ ಸುಜಲಾ ದೇವಿ, ಸೋಮವಾರಪೇಟೆ ಘಟಕದ ಅಧ್ಯಕ್ಷ ಪ್ರಕಾಶ್, ಕುಶಾಲನಗರ ಘಟಕದ ಅಧ್ಯಕ್ಷ ಚಂದ್ರಮೋಹನ್, ಜಾನಪದ ಪರಿಷತ್ ಯುವ ಘಟಕದ ಗಾಯಿತ್ರಿ ಚೆರಿಯಮನೆ, ಜಿಲ್ಲಾ ಜಾನಪದ ಪರಿಷತ್ ಪ್ರಧಾನ ಕಾರ್ಯದರ್ಶಿ ಎಸ್.ಐ. ಮುನೀರ್ ಅಹ್ಮದ್, ಮಡಿಕೇರಿ ತಾಲೂಕು ಜಾನಪದ ಪರಿಷತ್ ಅಧ್ಯಕ್ಷರಾದ ಅನಿಲ್ ಹೆಚ್.ಟಿ. ಸೇರಿದಂತೆ ಹಲ ಗಣ್ಯರು ಉಪಸ್ಥಿತರಿದ್ದರು.

ಸಭಾ ಕಾರ್ಯಕ್ರಮಕ್ಕೂ ಮುನ್ನ ಜಾನಪದ ಉತ್ಸವದ ಅಂಗವಾಗಿ ಆಯೋಜಿಸಲಾಗಿದ್ದ ಜಾನಪದ ಪರಿಕರಗಳ ವಸ್ತು ಪ್ರದರ್ಶನವನ್ನು ಅತಿಥಿ ಗಣ್ಯರು ಉದ್ಘಾಟಿಸಿದರು.

ವೇದಿಕೆ ಕಾರ್ಯಕ್ರಮಗಳ ಬಳಿಕ ವಿವಿಧ ಜಾನಪದ ನೃತ್ಯ ಪ್ರದರ್ಶನ, ಗ್ರಾಮೀಣ ಕ್ರೀಡಾಕೂಟಗಳು ಜರುಗಿದವು.

ವಿ.ಪೇಟೆ ತಾಲೂಕು ಕಚೇರಿಯಲ್ಲಿ ಗಾಂಧಿ ಜಯಂತಿ ಆಚರಣೆ



ವಿರಾಜಪೇಟೆ, ಅ.2– ವಿರಾಜಪೇಟೆಯ ಮಿನಿ ವಿಧಾನಸೌದಲ್ಲಿರುವ ತಾಲೂಕು ಕಚೇರಿ ಸಭಾಂಗಣದಲ್ಲಿ ತಹಸೀಲ್ದಾರ್ ಅರ್ಚನಾ ಬಟ್ ಅವರು ಗಾಂಧೀಜಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಗಾಂಧಿ ಜಯಂತಿ ಆಚರಿಸಿದರು. ಬಳಿಕ ಮಾತನಾಡಿದ ಅವರು, ಗಾಂಧೀಜಿ ಕನಸು ನನಸಾಗಲು ಒಂದು ದಿನ ಸ್ವಚ್ಛತಾ ಕಾರ್ಯಕ್ರಮ ನಡೆಸಿದರೆ ಸಾಲದು, ಪ್ರತಿದಿನವು ಪ್ರತಿಯೊಬ್ಬರು ತಮ್ಮ ತಮ್ಮ ಮನೆಯಿಂದ ಸ್ವಚ್ಚತಾ ಕಾರ್ಯವನ್ನು ಹಮ್ಮಿಕೊಳುವಂತಾಗಬೇಕು. ಪ್ರತಿಯೊಬ್ಬರು ಪ್ರಧಾನಿ ಅವರ ಸ್ವಚ್ಛ ಭಾರತ್ ಕಾರ್ಯಕ್ರಮಕ್ಕೆ ಕೈಜೋಡಿಸಬೇಕು ಆಗ ಮಾತ್ರ ಗ್ರಾಮ, ರಾಜ್ಯ, ದೇಶ ಅಭಿವೃದ್ಧಿ ಹೊಂದಲು ಸಾಧ್ಯ ಎಂದರು. ನಂತರ ತಾಲೂಕು ಕಚೇರಿ ಆವರಣದಲ್ಲಿ ತಹಸೀಲ್ದಾರ್ ಅರ್ಚನಾ ಭಟ್ ನೇತೃತ್ವದಲ್ಲಿ ಕಂದಾಯ ಇಲಾಖೆ, ಸರ್ವೆ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಸ್ವಚ್ಛತಾ ಕಾರ್ಯಕ್ರಮ ನಡೆಸಿದರು. ಈ ಸಂದರ್ಭ ಉಪ ತಹಸೀಲ್ದಾರ್ ಪ್ರದೀಪ್ ಕುಮಾರ್, ಹೆಚ್.ಎಸ್.ಪೊನ್ನು, ಕಂದಾಯ ಪರಿವೀಕ್ಷಕರಾದ ಹರೀಶ್ ಮತ್ತು ಅನೀಲ್ ಹಾಗೂ ತಾಲೂಕು ಕಚೇರಿಯ ಸಿಬ್ಬಂದಿ ಭಾಗವಹಿಸಿದ್ದರು.

ಅಮ್ಮಕೊಡವ ಕೌಟುಂಬಿಕ ವಾಲಿಬಾಲ್ ಟೂರ್ನಿಯಲ್ಲಿ ಮಂಡುವಂಡ ಚಾಂಪಿಯನ್



ಗೋಣಿಕೊಪ್ಪ, ಅ.2– ಮಾಯಮುಡಿ ಮಾನಿಲ್ ಅಯ್ಯಪ್ಪ ಮೈದಾನದಲ್ಲಿ ಮಾನಿಲ್ ಅಯ್ಯಪ್ಪ ಸೇವಾ ಸಮಿತಿ, ಯುವಕ ಸಂಘ, ಕೊಡವ ಕೂಟ ಮತ್ತು ಅಖಿಲ ಅಮ್ಮಕೊಡವ ಸಮಾಜದ ವತಿಯಿಂದ ಆಯೋಜಿಸಿರುವ ಕೊಡವ, ಅಮ್ಮಕೊಡವ ಕೌಟುಂಬಿಕ ವಾಲಿಬಾಲ್ ಟೂರ್ನಿಯಲ್ಲಿ ಮಂಡುವಂಡ ಚಾಂಪಿಯನ್ ಪಟ್ಟ ಅಲಂಕರಿಸಿದ್ದು, ಅಮ್ಮಂಡ ರನ್ನರ್ ಅಪ್ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು. ಮುಂಡಚಾಡೀರ ತಂಡಕ್ಕೆ 3 ನೇ ಸ್ಥಾನ, ಮಲ್ಲಮಾಡ ನಾಲ್ಕನೇ ತಂಡವಾಗಿ ಹೊರಹೊಮ್ಮಿತು.

ಭಾನುವಾರ ನಡೆದ 9 ನೇ ವರ್ಷದ ಫೈನಲ್ ಹಣಾಹಣಿಯಲ್ಲಿ ಮಂಡುವಂಡ 25–18, 25–23 ನೇರ ಸೆಟ್ ಮೂಲಕ ಮಣಿಸಿತು. ಮುಂಡಚಾಡೀರ ತಂಡವು ಮಲ್ಲಮಾಡವನ್ನು 21–15, 21–11 ನೇರ ಸೆಟ್‌ಗಳಿಂದ ಮಣಿಸಿತು.

ವಿನು ವಿಶ್ವನಾಥ್ ಪ್ರಥಮ; ತೆಂಗಿನಕಾಯಿಗೆ ಗುಂಡು ಹೊಡೆಯುವ ಸ್ಪರ್ಧೆಯಲ್ಲಿ ಸಣ್ಣುವಂಡ ವಿನು ವಿಶ್ವನಾಥ್ ಪ್ರಥಮ, ಚೆಯಕ್‌ಪೂವಂಡ ಚೇತನ್ ದ್ವಿತೀಯ, ಬಡುವಡ ಧನು ದೇವಯ್ಯ ತೃತೀಯ ಸ್ಥಾನ ಪಡೆದರು. ದ್ವಿತೀಯ ಪಿಯುಸಿಯಲ್ಲಿ ಜಿಲ್ಲೆಗೆ ಪ್ರಥಮ ರ‍್ಯಾಂಕ್, ರಾಜ್ಯಕ್ಕೆ 7 ನೇ ರ‍್ಯಾಂಕ್ ಪಡೆದ ಆಪಟ್ಟೀರ ಕವಿನಾ ಚಂಗಪ್ಪ ಅವರನ್ನು ಸನ್ಮಾನಿಸಲಾಯಿತು. ಸಾಮಾಜಿಕ ಕಾರ್ಯಕರ್ತ ತೇಲಪಂಡ ಶಿವಕುಮಾರ್ ನಾಣಯ್ಯ, ಕಂಗಳತ್‌ನಾಡ್ ಮಹಿಳಾ ಸಮಾಜ ಅಧ್ಯಕ್ಷೆ ಚೆಪ್ಪುಡೀರ ರಾಧಾ ಅಚ್ಚಯ್ಯ, ಉದ್ಯಮಿ ಸಣ್ಣುವಂಡ ಎಂ. ಸುರೇಶ್, ಸಣ್ಣುವಂಡ ದಿಲಿಪ್ ಸೋಮಣ್ಣ, ಕಾಫಿ ಬೆಳೆಗಾರ ಸಣ್ಣುವಂಡ ವಿನು ವಿಶ್ವನಾಥ್ ಬಹುಮಾನ ವಿತರಿಸಿದರು.

ನಾಳೆ ಕೊಡಗಿಗೆ ಸೋನಿಯಾ, ರಾಹುಲ್ ಗಾಂಧಿ?

ಮಡಿಕೇರಿ,ಅ.2– ಕಾಂಗ್ರೆಸ್ ಪಕ್ಷದ ವರಿಷ್ಠರಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರುಗಳು ಅ.4ರಂದು ಕೊಡಗು ಜಿಲ್ಲೆಗೆ ಖಾಸಗಿ ಭೇಟಿ ನೀಡುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ. ಅ.4ರಂದು ಮಡಿಕೇರಿಗೆ ಆಗಮಿಸಿ ಪ್ರತಿಷ್ಠಿತ ರೆಸಾರ್ಟ್ ಒಂದರಲ್ಲಿ ತಂಗಲಿದ್ದಾರೆ ಎನ್ನಲಾಗುತ್ತಿದ್ದು, ಬಳಿಕ ಅ.6ರಂದು ಮಂಡ್ಯದಲ್ಲಿ ನಡೆಯಲಿರುವ ಐಕ್ಯತಾ ರ‍್ಯಾಲಿಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಹೇಳಲಾಗುತ್ತಿದೆ. ಇವರೊಂದಿಗೆ ಕೆಪಿಸಿಸಿ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್, ವಿಪಕ್ಷ ನಾಯಕ ಸಿದ್ದರಾಮಯ್ಯ ಸೇರಿದಂತೆ ಪಕ್ಷ ಪ್ರಮುಖರು ಆಗಮಿಸಲಿದ್ದಾರೆ ಎನ್ನಲಾಗುತ್ತಿದೆ.

ಗಾಂಧಿ ಗ್ರಾಮವಾಗಿ ಮಲ್ಲಿಗೆರೆ ಪರಿವರ್ತನೆ



ಮಂಡ್ಯ,ಅ.2– ಹೆಚ್.ಮಲ್ಲಿಗೆರೆ ಕಾಲೋನಿ ಗ್ರಾಮವನ್ನು ಗಾಂಧಿ ಗ್ರಾಮವಾಗಿ ಪರಿವರ್ತನೆ ಮಾಡಲಾಗುವುದು ಎಂದು ವಿಧಾನಪರಿಷತ್ ಸದಸ್ಯ ಹಾಗೂ ಮಹಾತ್ಮ ಗಾಂಧಿ ಸ್ಮಾರಕ ಟ್ರಸ್ಟ್ ಅಧ್ಯಕ್ಷ ಮಧು ಜಿ. ಮಾದೇಗೌಡ ತಿಳಿಸಿದರು.

ಮಂಡ್ಯ ತಾಲೂಕಿನ ಹೆಚ್.ಮಲ್ಲಿಗೆರೆ ಕಾಲೋನಿ ಗ್ರಾಮದಲ್ಲಿ ಭಾರತಿ ಎಜುಕೇಶನ್ ಟ್ರಸ್ಟ್, ಡಾ.ಜಿ ಮಾದೇಗೌಡ ಪ್ರತಿಷ್ಠಾನ ಹಾಗೂ ಮಹಾತ್ಮ ಗಾಂಧಿ ಸ್ಮಾರಕ ಟ್ರಸ್ಟ್ ಸಂಯುಕ್ತ ಆಶ್ರಯದಲ್ಲಿ ಗಾಂಧಿ ಜಯಂತಿ ದಿನಾಚರಣೆ ಪ್ರಯುಕ್ತ ಬಿ.ಇ.ಟಿ ನೌಕರರಿಂದ ಏರ್ಪಡಿಸಿದ್ದ ಶ್ರಮದಾನದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಬಿಇಟಿ ಸಂಸ್ಥೆಯ ಅಧ್ಯಾಪಕರು ಹಾಗೂ ಅಧ್ಯಾಪಕೇತರ ವೃಂದ ಶ್ರಮದಾನದಲ್ಲಿ ಪಾಲ್ಗೊಂಡು ಗಾಂಧಿ ಗ್ರಾಮದ ನಿರ್ಮಾಣ ಕಾರ್ಯದಲ್ಲಿ ಕೈಜೋಡಿಸಿದ್ದಾರೆ ಎಂದರು.

ಗಾಂಧೀಜಿ ಜಯಂತಿಯ ದಿನ ಪ್ರತಿ ಭಾರತೀಯರು ಇವರನ್ನು ಸ್ಮರಿಸಿಕೊಂಡು ಅವರಿಗೆ ಗೌರವ ಸಲ್ಲಿಸುವುದು ಕರ್ತವ್ಯವೆಂದರು.

ಗಾಂಧೀಜಿ ಅವರು ಶಾಂತಿ, ಅಹಿಂಸೆಯಿಂದಲೇ ಹೋರಾಟ ಮಾಡಿ ಭಾರತ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟವರು. ಮಹಾತ್ಮ ಗಾಂಧೀಜಿ ಅವರು ದಂಡಿ ಸತ್ಯಾಗ್ರಹ ಉಪ್ಪಿನ ಸತ್ಯಾಗ್ರಹ, ಕ್ವಿಟ್ ಇಂಡಿಯಾ ಚಳವಳಿ ಸೇರಿದಂತೆ ಅನೇಕ ಹೋರಾಟಗಳ ಮೂಲಕ ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟವರು ಎಂದು ಹೇಳಿದರು.

ಈ ಸಂದರ್ಭದಲ್ಲಿ ಬಿಇಟಿ ಸಂಸ್ಥೆಯ ಡಾ.ಎಸ್.ಎಲ್.ಸುರೇಶ್, ಪಾಲಿಟೆಕ್ನಿಕ್ ಪ್ರಾಂಶುಪಾಲ ಪ್ರೊ.ಜಿ.ಕೃಷ್ಣ, ಡಾ.ತಮಿಷಮಣಿ, ಡಾ.ಸಿದ್ದರಾಜು, ಕೃಷ್ಣ, ನಾಗರಾಜು, ನಾಗವಾದಯ್ಯ, ಮಲ್ಲಿಕಾರ್ಜುನ್, ಡಾ.ಮ.ರಾಮಕೃಷ್ಣ, ಬಿ.ಬಸವರಾಜ್, ಲಿಂಗಣ್ಣ ಬಂಧುಕರ್ ಸೇರಿದಂತೆ ಇತರರು ಹಾಜರಿದ್ದರು.



ನಾಗಮಂಗಲದ ಉಪ್ಪಾರಹಳ್ಳಿ ಬಸವೇಶ್ವರನಗರದಲ್ಲಿ ವೈಯಕ್ತಿಕವಾಗಿ ಸ್ಥಾಪಿಸಿರುವ ಶುದ್ಧ ಕುಡಿಯುವ ನೀರಿನ ಘಟಕವನ್ನು ಸಮಾಜ ಸೇವಕ ಮಲ್ಲಿಕಾರ್ಜುನ (ಪೈಂಟರ್ ರವಿ) ಉದ್ಘಾಟಿಸಿದರು. ಈ ವೇಳೆ ಪುರಸಭೆ ಸದಸ್ಯೆ ವಸಂತಲಕ್ಷ್ಮೀ ಅಶೋಕ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಜಿ.ಕುಮಾರ್, ಗ್ರಾಮಸ್ಥರಾದ ರಾಜಮುಡಿ, ಜಯರಾಮ್, ಕೃಷ್ಣಪ್ಪ, ತಿರುಮಲಯ್ಯ, ಅಶೋಕ್, ಪ್ರಸಾದ್, ರಮೇಶ್, ಸಾಗರ್, ಗಿರೀಶ್ ಮುಖಂಡರಾದ ನರಸಿಂಹ, ಅರ್ಜುನ್, ಪವನ್ ಮತ್ತು ದರ್ಶನ್ ಸೇರಿದಂತೆ ಹಲವರು ಭಾಗಹಿವಸಿದ್ದರು.

ಇಂದು ಶ್ರೀರಂಗಪಟ್ಟಣಕ್ಕೆ ರಾಹುಲ್ ಗಾಂಧಿ

30 ಸಾವಿರ ಜನರಿಗೆ ಊಟದ ವ್ಯವಸ್ಥೆ

ಶ್ರೀರಂಗಪಟ್ಟಣ, ಅ.2– ನಾಳೆ (ಅ3) ಶ್ರೀರಂಗಪಟ್ಟಣಕ್ಕೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಆಗಮಿಸುತ್ತಿರುವ ಭಾರತ್ ಜೋಡೋ ಯಾತ್ರೆ ಆಗಮಿಸುತ್ತಿದ್ದು, ಸಕಲ ಸಿದ್ದತೆ ಮಾಡಿಕೊಳ್ಳಲಾಗಿದೆ. 30 ಸಾವಿರ ಜನರಿಗೆ ಊಟದ ವ್ಯವಸ್ಥೆ ಮಾಡುತ್ತಿರುವುದಾಗಿ ಮಾಜಿ ಶಾಸಕ ರಮೇಶ್ ಬಂಡಿಸಿದ್ದೇಗೌಡ ತಿಳಿಸಿದರು.

ಪಟ್ಟಣದ ಟಿಎಪಿಸಿಎಂಎಸ್ ಕಲ್ಯಾಣ ಮಂಟಪದಲ್ಲಿ ಸಕಲ ಸಿದ್ಧತೆ ಮಾಡಿಕೊಂಡಿದ್ದು, ಜಿಲ್ಲಾ ಮಾಧ್ಯಮ ಸಂಚಾಲಕ ಪುಟ್ಟೇಗೌಡ ಹಾಗೂ ಮುಖಂಡರುಗಳೊಂದಿಗೆ ತೆರಳಿ ಪೂರ್ವ ಸಿದ್ಧತೆಯನ್ನು ಪರಿಶೀಲಿಸಿ ಬಳಿಕ ಸುದ್ದಿಗಾರರ ಜೊತೆ ಅವರು ಮಾತನಾಡಿದರು. ಶ್ರೀರಂಗಪಟ್ಟಣದ ಗಡಿಭಾಗ ನಗುವನಹಳ್ಳಿ ಗೇಟ್–ಕಳಸ್ತವಾಡಿ ಮಧ್ಯವಿರುವ ವಿರಿಜಾ ನಾಲೆ ಬಳಿ ಇಂದು ಬೆಳಗ್ಗೆ 9 ಗಂಟೆಗೆ ಭಾರತ್ ಜೋಡೋ ಯಾತ್ರೆ ಆಗಮಿಸಲಿದ್ದು, ಸಾವಿರಾರು ಮಂದಿ ಕಾರ್ಯಕರ್ತರೊಂದಿಗೆ ಆತ್ಮೀಯವಾಗಿ ಸ್ವಾಗತಿಸುವುದಾಗಿ ರಮೇಶ್ ಬಂಡಿಸಿದ್ದೇಗೌಡ ತಿಳಿಸಿದರು.



ಶ್ರೀರಂಗಪಟ್ಟಣಕ್ಕೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭೇಟಿ ಹಿನ್ನೆಲೆಯಲ್ಲಿ ಸಿದ್ಧತೆಯನ್ನು ಶಾಸಕ ರಮೇಶ್ ಬಂಡಿಸಿದ್ದೇಗೌಡ ಪರಿಶೀಲಿಸಿದರು.

ಪ್ರತೀ ಗ್ರಾಮ ಪಂಚಾಯಿತಿಯಿಂದ ನೂರಾರು ಮಂದಿ ಕಾರ್ಯಕರ್ತರು ಆಗಮಿಸುತ್ತಿದ್ದು, ಪ್ರತಿಯೊಬ್ಬರಿಗೂ ತಿಂಡಿ ಹಾಗೂ ಊಟದ ವ್ಯವಸ್ಥೆ ಮಾಡಲಾಗಿದೆ. ಬೆಳಗ್ಗೆ 11 ಗಂಟೆಗೆ ರಾಹುಲ್‌ಗಾಂಧಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ, ಚಲುವರಾಯಸ್ವಾಮಿ ಸೇರಿದಂತೆ ಕಾಂಗ್ರೆಸ್‌ನ ಪ್ರಮುಖ ನಾಯಕರು ಪಟ್ಟಣದ ಟಿಎಪಿಸಿಎಂಎಸ್ ಕಲ್ಯಾಣಮಂಟಪದಲ್ಲಿ ಬೃಹತ್ ಸಭೆ ನಡೆಸುವುದಾಗಿ ಹೇಳಿದರು.

ಜಿಲ್ಲಾ ಮಾಧ್ಯಮ ಸಂಚಾಲಕ ಪುಟ್ಟೇಗೌಡ ಮಾತನಾಡಿ, 1999ರಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ರಚನೆಗೆ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ನೇತೃತ್ವದಲ್ಲಿ ನಡೆದಿದ್ದ ಪಾಂಚಜನ್ಯ ಯಾತ್ರೆ ಯಶಸ್ವಿಯಾಗಿತ್ತು. ರಾಷ್ಟ್ರೀಯ ನಾಯಕ ರಾಹುಲ್‌ಗಾಂಧಿ ಅವರ ನೇತೃತ್ವದಲ್ಲಿ 2023ಕ್ಕೆ ರಾಜ್ಯ ಹಾಗೂ 2024ರಲ್ಲಿ ದೇಶದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವಲ್ಲಿ ಯಾವುದೇ ಸಂಶಯವಿಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪ್ರಕಾಶ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಪಾಂಡವಪುರ: ಶ್ರೀಶಿವಶೈಲದಲ್ಲಿ ನವರಾತ್ರಿ ಕಾರ್ಯಕ್ರಮ

ಪಾಂಡವಪುರ,ಅ.2– ತಾಲೂಕಿನ ಪಟ್ಟಸೋಮನಹಳ್ಳಿ ಗ್ರಾಮದ ಹೊರವಲಯದಲ್ಲಿರುವ ಶ್ರೀಶಿವಶೈಲ ದೇವಾಲಯದ ಆವರಣದಲ್ಲಿ ಶರನ್ನವರಾತ್ರಿ ಕಾರ್ಯಕ್ರಮಗಳು ಆರಂಭಗೊಂಡಿದ್ದು, ಮೈಸೂರು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಕುಟುಂಬ ಸಮೇತರಾಗಿ ಪಾಲ್ಗೊಂಡು ಸುದರ್ಶನ ಹೋಮ ನಡೆಸಿದರು.

ಇಲ್ಲಿನ ಕಾಮಾಕ್ಷಿ ಚಂದ್ರಮೌಳೇಶ್ವರ ದೇವಾಲಯದಲ್ಲಿ ನವರಾತ್ರಿ ಮಹೋತ್ಸವದ ಅಂಗವಾಗಿ ಒಂಭತ್ತು ದಿನಗಳ ಕಾಲ ವಿವಿಧ ಹೋಮಗಳು ನಡೆಯುತ್ತಿದ್ದು, ಶನಿವಾರ ಸುದರ್ಶನ ಹೋಮದಲ್ಲಿ ಪಾಲ್ಗೊಂಡಿದ್ದರು. ಹಲವು ವರ್ಷಗಳಿಂದ ಇಲ್ಲಿ ನಡೆಯುವ ನವರಾತ್ರಿ ಮಹೋತ್ಸವದಲ್ಲಿ ಪಾಲ್ಗೊಳ್ಳುತ್ತಿದ್ದೇವೆ. ದೇವಿಯಲ್ಲಿ ಪ್ರಾರ್ಥಿಸಿ ಸುದರ್ಶನಹೋಮ ಸೇರಿದಂತೆ ಇತರೆ ವಿಶೇಷ ಪೂಜೆಗಳನ್ನು ಸಲ್ಲಿಸಲಾಗಿದ್ದು, ಸಂಕಷ್ಟ ನಿವಾರಣೆಯಾಗಬೇಕು ಹಾಗೂ ದೇಶ ಸುಭಿಕ್ಷೆಯಾಗಿರಬೇಕೆಂಬ ಆಶಯದಿಂದ ಪ್ರಾರ್ಥಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಶಿವಶೈಲ ದತ್ತಿ ಧಾರ್ಮಿಕ ಸಂಸ್ಥೆಯ ಮುಖ್ಯಸ್ಥರಾದ ನಿವೃತ್ತ ನ್ಯಾಯಾಧೀಶ ಶಿವಪ್ಪ, ಪುತ್ರ ಡಾ||ಸಿ.ಎಸ್.ರಾಜೇಶ್, ರಾಜ್ಯ ಪತ್ತಿನ ಸಹಕಾರ ಸಂಘಗಳ ಮಹಾಮಂಡಳಿ ಅಧ್ಯಕ್ಷೆ ಲಲಿತಾ ದೇವೇಗೌಡ, ಜಿಲ್ಲಾ ಸಹಕಾರ ಯುನಿಯನ್ ನಿರ್ದೇಶಕ ವಡ್ಡರಹಳ್ಳಿ ವಿ.ಎಸ್.ನಿಂಗೇಗೌಡ, ಬಿಜೆಪಿ ಮುಖಂಡ ರೈಸ್‌ಮಿಲ್ ತಮ್ಮಣ್ಣ, ಪುತ್ರಿ ಅನ್ನಪೂರ್ಣ ವಿಶ್ವೇಶ್ವರಯ್ಯ, ಸಹೋದರ ಯದುಕುಮಾರ್, ಯಶೋಧ, ವಕೀಲ ಪಾಲಾಕ್ಷ, ತಾಪಂ ಮಾಜಿ ಸದಸ್ಯೆ ರಾಣಿಸತೀಶ್, ಗ್ರಾಪಂ ಉಪಾಧ್ಯಕ್ಷೆ ವಿಜಯಲಕ್ಷ್ಮಿ, ತಾಪಂ ಸದಸ್ಯೆ ಭಾಗ್ಯ ರಮೇಶ್, ಬೆಳವಾಡಿ ಗ್ರಾಪಂ ಉಪಾಧ್ಯಕ್ಷ ಶಿವಕುಮಾರ್, ಅರ್ಚಕ ದತ್ತಾತ್ರೇಯ ಭಟ್, ಆಪ್ತಕಾರ್ಯದರ್ಶಿ ಹರೀಶ್, ವಿಷಕಂಠ ಹಾಗೂ ಮ್ಯಾನೇಜರ್ ನಂಜುಂಡೇಗೌಡ, ರುದ್ರೇಶ್ ಹಾಗೂ ಭಕ್ತರು ಪಾಲ್ಗೊಂಡಿದ್ದರು.



ಪಾಂಡವಪುರ ತಾಲೂಕು ಶ್ರೀಶಿವಶೈಲ ದೇವಸ್ಥಾನದಲ್ಲಿ ನವರಾತ್ರಿ ಪ್ರಯುಕ್ತ ಸುದರ್ಶನ ಹೋಮವನ್ನು ಶಾಸಕ ಜಿ.ಟಿ.ದೇವೇಗೌಡರು ಕುಟುಂಬ ಸಮೇತರಾಗಿ ನೆರವೇರಿಸಿದರು.

ಚಾ.ನಗರದಲ್ಲಿ ಗಾಂಧಿ ಜಯಂತಿ ಅರ್ಥಪೂರ್ಣ ಆಚರಣೆ

ಚಾಮರಾಜನಗರ,ಅ.2–ಜಿಲ್ಲಾಡಳಿತದಿಂದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರ ಜನ್ಮದಿನವನ್ನು ಜಿಲ್ಲೆಯೆಲ್ಲೆಡೆ ಅರ್ಥಪೂರ್ಣವಾಗಿ ಆಚರಿಸಲಾಯಿತು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ಸರ್ವ ಧರ್ಮಗುರುಗಳ ಸಮ್ಮುಖದಲ್ಲಿ ನಡೆದ ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರ 154ನೇ ಜಯಂತಿ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅವರು, ಮಹಾತ್ಮ ಗಾಂಧೀಜಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ, ಶುಭಾಶಯ ಹೇಳಿದರು.



ಈ ವೇಳೆ ಮಾತನಾಡಿದ ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಭಾರತವು ಸರ್ವಧರ್ಮ ಸಮನ್ವಯ ದೇಶವಾಗಿದೆ. ಎಲ್ಲರೂ ಎಲ್ಲಾ ಧರ್ಮಗಳನ್ನು ಪ್ರೀತಿಸಬೇಕು. ಶಾಂತಿ, ಸೌಹಾರ್ದತೆಯಿಂದ ಬದುಕಬೇಕು. ಅದೇ ನಾವು ಗಾಂಧೀಜಿಯವರಿಗೆ ಸಲ್ಲಿಸುವ ಗೌರವ ಎಂದರು.

ಎಎಸ್‌ಪಿ ಕೆ.ಎಸ್.ಸುಂದರರಾಜು ಮಾತನಾಡಿ, ಸತ್ಯದಿಂದ ನಡೆಯುವುದು ಹಾಗೂ ಅಹಿಂಸೆಯನ್ನು ಪಾಲಿಸುವುದೇ ಗಾಂಧೀಜಿ ಅವರ ಬದುಕಿನ ಸಂದೇಶ. ಯಾರೂ ಸಹ ಇನ್ನೊಬ್ಬರಿಗೆ ನೋವಾಗದಂತೆ ಪರಸ್ಪರ ಪ್ರೀತಿ, ವಿಶ್ವಾಸದಿಂದ ನಡೆದುಕೊಳ್ಳಬೇಕು ಎಂದರು.

ಸರ್ಪಭೂಷಣ ಸ್ವಾಮೀಜಿ ಮಾತನಾಡಿ, ಇಂದು ಗಾಂಧೀಜಿಯವರ ಜಯಂತಿ ಜೊತೆಗೆ ಲಾಲ್ ಬಹದ್ದೂರ್ ಶಾಸ್ತ್ರೀಯವರ ಜನ್ಮದಿನವನ್ನು ದೇಶದಲ್ಲಿ ಆಚರಿಸಲಾಗುತ್ತಿದೆ. ಮಹಾತ್ಮ ಗಾಂಧಿಯವರ ವಿಚಾರಧಾರೆಗಳನ್ನು ವರ್ಷದ 365 ದಿನವೂ ಸ್ಮರಿಸಬೇಕಾಗಿದೆ ಎಂದರು.

ಕ್ರಿಶ್ಚಿಯನ್ ಹಾಗೂ ಮುಸ್ಲಿಂ ಧರ್ಮಗುರುಗಳು ಮಾತನಾಡಿದರು. ಎಸ್‌ಪಿ ಟಿ.ಪಿ.ಶಿವಕುಮಾರ್, ಎಡಿಸಿ ಎಸ್.ಕಾತ್ಯಾಯಿನಿದೇವಿ. ಡಿವೈಎಸ್‌ಪಿ ಪ್ರಿಯದರ್ಶಿನಿ ಸಾಣೆಕೊಪ್ಪ, ತಹಶೀಲ್ದಾರ್ ಬಸವರಾಜು ಸೇರಿದಂತೆ ಜಿಲ್ಲಾಮಟ್ಟದ ಅಧಿಕಾರಿಗಳು ಇದೇ ವೇಳೆ ಹಾಜರಿದ್ದರು.

ಗಾಂಧೀಜಿ ಆದರ್ಶಗಳು ಇನ್ನೂ ಜೀವಂತ



ಯಳಂದೂರು, ಅ.2–ಮಹಾತ್ಮ ಗಾಂಧೀಜಿ ಅವರ ಅಹಿಂಸಾ ಹೋರಾಟದ ಹಾದಿ ಆದರ್ಶ, ತತ್ವ ಸಿದ್ಧಾಂತಗಳು ಇನ್ನೂ ಜೀವಂತವಾಗಿದ್ದು, ಇಂದಿನ ಯುವ ಪೀಳಿಗೆ ಅವುಗಳನ್ನು ಮೈಗೂಡಿಸಿಕೂಳ್ಳಬೇಕು ಎಂದು ಬಿಜೆಪಿ ಓಬಿಸಿ ತಾಲೂಕು ಘಟಕದ ಅಧ್ಯಕ್ಷ ವೈ.ಕೆ.ಮೋಳೆ ರಾಜು ತಿಳಿಸಿದರು.

ಪಟ್ಟಣದ ಶ್ರೀ ನಾಡಮೇಗಲಮ್ಮ ದೇವಾಲಯದ ಅವರಣದಲ್ಲಿ ಪೌರಕಾರ್ಮಿಕರು ಜೊತೆಗೊಡಿ ರಾಷ್ಟ್ರಪಿತನ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದ ಬಳಿಕ ಮಾತನಾಡಿದರು. ಗಾಂಧೀಜಿಯವರ ಕನಸು ಸ್ವಚ್ಛ ಭಾರತವಾಗಿತ್ತು. ಈ ನಿಟ್ಟಿನಲ್ಲಿ ದೇಶದ ಪ್ರಧಾನಿ ನರೇಂದ್ರ ಮೋದಿ ಅವರ ಮೊದಲು ಗಾಂಧಿ ಜಯಂತಿ ದಿನವೇ ಸ್ವಚ್ಛ ಭಾರತ ಅಭಿಯಾನಕ್ಕೆ ಚಾಲನೆ ನೀಡಿದರು. ಆ ಮೂಲಕ ದೇಶದ ಎಲ್ಲೆಡೆ ಸ್ವಚ್ಛತಾ ಅಭಿಯಾನ ದೇಶದೆಲ್ಲೆಡೆ ಕೈಗೂಳ್ಳುವಂತಾಯಿತು ಎಂದು ಹೇಳಿದರು.

ಬಿಜೆಪಿ ಮಂಡಲದಿಂದ ಸ್ವಚ್ಛತೆ : ಟೌನ್ ಬಿಜೆಪಿ ಮಂಡಲ ಘಟಕದಿಂದ ನಾಡಮೇಗಲಮ್ಮ ದೇವಾಲಯದಲ್ಲಿ ಸ್ವಚ್ಛತಾ ಕಾರ್ಯ ನಡೆಸಲಾಯಿತು. ಟೌನ್ ಮಂಡಲ ಬಿಜೆಪಿ ಘಟಕದ ಅಧ್ಯಕ್ಷ ಮಹೇಶ್, ಪ್ರಧಾನ ಕಾರ್ಯದರ್ಶಿ ಕೂಮಾರನಪುರ ಕೆ.ಎಸ್.ಚಂದ್ರಶೇಖರ್, ತಾಪಂ ಕೆಡಿಪಿ ಸದಸ್ಯ ಸೂರ್ಯನಾರಾಯಣ್, ಟೌನ್ ಪಂಚಾಯಿತಿ ನಾಮ ನಿರ್ದೇಶಿತ ಸದಸ್ಯ ಪುರಿಲಿಂಗಣ್ಣ, ಎಸ್‌ಟಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಜಯಣ್ಣ, ಮಹೇಶ್, ಉಪಾಧ್ಯಕ್ಷ ಅಂಬಳೆ ಮಾದನಾಯಕ, ಆಶ್ರಯ ಕಮಿಟಿ ಸದಸ್ಯ ಅನೀಲ್, ಬಿಜೆಪಿ ಜಿಲ್ಲಾ ಓಬಿಸಿ ಕಾರ್ಯದರ್ಶಿ ನಿಂಗರಾಜು, ತಾಲೂಕು ಘಟಕದ ಪ್ರಧಾನ ಕಾರ್ಯದರ್ಶಿ ಯರಿಯೂರು ದೊಡ್ಡರಾಜು, ಇರಸವಾಡಿ ಗ್ರಾಪಂ ಮಾಜಿ ಅಧ್ಯಕ್ಷ ಮಹೇಶ್, ನಾಗರಾಜು, ಅಮಾವಾಸೆ ಸೇರಿದಂತೆ ಪೌರ ಕಾರ್ಮಿಕರಿದ್ದರು.

ಆದರ್ಶಗಳಿಂದ ಮಹಾತ್ಮರಾದ ಗಾಂಧೀಜಿ



ಗುಂಡ್ಲುಪೇಟೆ, ಅ.2–ಗಾಂಧೀಜಿಯವರ ಆದರ್ಶಗಳೇ ಅವರನ್ನು ಮಹಾತ್ಮ ಹಾಗೂ ವಿಶ್ವ ನಾಯಕರನ್ನಾಗಿಸಿವೆ ಎಂದು ಶಾಸಕ ಸಿ.ಎಸ್. ನಿರಂಜನಕುಮಾರ್ ಅಭಿಪ್ರಾಯಪಟ್ಟರು.

ಪಟ್ಟಣದ ತಾಲೂಕು ಕಚೇರಿಯ ಸಭಾಂಗಣದಲ್ಲಿ ತಾಲೂಕು ಆಡಳಿತ ಆಯೋಜಿಸಿದ್ದ ಗಾಂಧಿ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಯಾವುದೇ ಸಂದರ್ಭದಲ್ಲಿಯೂ ತಮ್ಮ ನೇರ ನಡೆ–ನುಡಿಯನ್ನು ಬಿಡದ ಬಾಪೂಜಿ ಅಸಹಕಾರ ತತ್ವದ ಮೂಲಕ ಬ್ರಿಟಿಷ್ ಸರ್ಕಾರದ ನೀತಿಗಳನ್ನು ವಿರೋಧಿಸಿ ಹೋರಾಟಗಳನ್ನು ನಡೆಸಿದರು. ಸ್ವದೇಶಿ ಉತ್ಪನ್ನಗಳ ಬಳಕೆಗೆ ಪ್ರೋತ್ಸಾಹಿಸಿದರು. ಅಹಿಂಸಾ ತತ್ವದ ಮೂಲಕ ಸ್ವಾತಂತ್ರ್ಯ ದೊರಕಿಸಿದ ಪರಿ ಜಗತ್ತನ್ನೇ ಬೆರಗುಗೊಳಿಸಿ ಹಲವಾರು ವಿಶ್ವನಾಯಕರಿಗೆ ಪ್ರೇರಣೆ ನೀಡಿದೆ ಎಂದರು.

ಇದೇ ದಿನದಂದು ದೇಶದ ಅತ್ಯಂತ ಪ್ರಾಮಾಣಿಕ ಪ್ರಧಾನಿ ಎನ್ನಿಸಿಕೊಂಡ ಲಾಲ್ ಬಹಾದ್ದೂರ್ ಶಾಸ್ತ್ರಿ ಅವರ ಜನ್ಮ ದಿನ. ಇವರು ಅಪ್ರತಿಮ ನಾಯಕರಾಗಿದ್ದರು. ಇವರ ಆದರ್ಶಗಳನ್ನು ಎಲ್ಲರೂ ಪಾಲಿಸುವಂತಾಗಬೇಕು ಎಂದರು.

ಇದೇ ಸಂದರ್ಭದಲ್ಲಿ ಕೆ.ಎಸ್.ನಾಗರತ್ನಮ್ಮ ಪ್ರೌಢಶಾಲೆಯ ಶಿಕ್ಷಕಿ ಮಂಜುಳಾ ಅವರಿಂದ ರಘುಪತಿರಾಘವ ರಾಜಾರಾಂ, ವಿದ್ಯಾರ್ಥಿ ಇಂಪನಾ ಭಗವದ್ಗೀತೆ, ಸಫೀನಾ ಬಾನು ಖುರಾನ್, ಯಾಮಿಯಾ ಬೈಬಲ್ ಪಠಣ ಮಾಡಿದರು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ರವಿಶಂಕರ್, ಬಿಇಓ ಎಸ್.ಸಿ.ಶಿವಮೂರ್ತಿ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ನಂಜುಂಡೇಗೌಡ, ವಿವಿಧ ಸಂಘಟನೆಗಳ ಅಧ್ಯಕ್ಷರು ಮತ್ತು ಪದಾಧಿಕಾರಿಗಳಿದ್ದರು.

ಲಿಂಗೈಕ್ಯ ಮಹಾಂತಸ್ವಾಮಿಗಳ 85ನೇ ವರ್ಷದ ಜನ್ಮದಿನೋತ್ಸವ



ಮರಿಯಾಲ ಮಠದಲ್ಲಿ ಲಿಂಗೈಕ್ಯ ವಿದ್ವಾನ್ ಪಟ್ಟದ ಇಮ್ಮಡಿ ಮಹಾಂತ ಸ್ವಾಮಿಗಳವರ 85ನೇ ಜನ್ಮದಿನೋತ್ಸವ ಕಾರ್ಯಕ್ರಮ ಭಾನುವಾರ ನಡೆಯಿತು

ಬದನಗುಪ್ಪೆ,ಅ.2–ಚಾಮರಾಜನಗರ ತಾಲೂಕಿನ ಮರಿಯಾಲ ಗ್ರಾಮದ ಶ್ರೀ ಮುರುಘ ರಾಜೇಂದ್ರಸ್ವಾಮಿ ಮಹಾಸಂಸ್ಥಾನ ಶ್ರೀ ಮಠದಲ್ಲಿ ಶಿವಾನುಭವಭೂಷಣ ಲಿಂಗೈಕ್ಯ ವಿದ್ವಾನ್ ಶ್ರೀ ಮಹಾಂತಸ್ವಾಮಿಗಳ 85ನೇ ವರ್ಷದ ಜನ್ಮದಿನೋತ್ಸವ ನಡೆಯಿತು.

ಕಾರ್ಯಕ್ರಮದಲ್ಲಿ ಶ್ರೀ ಮಹಾಂತಸ್ವಾಮಿಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಶ್ರೀ ಮಠಾಧ್ಯಕ್ಷ ಶ್ರೀ ಇಮ್ಮಡಿ ಮುರುಘ ರಾಜೇಂದ್ರಸ್ವಾಮಿಗಳು ಮಾತನಾಡಿದರು.

ಈ ಭಾಗದಲ್ಲಿ ಬಡ ಮಕ್ಕಳಿಗೆ ಉಚಿತ ಶಿಕ್ಷಣ, ನೈತಿಕ ಶಿಕ್ಷಣ ನೀಡುವ ಅಪೇಕ್ಷೆಯನ್ನು ಹೊಂದಿದ ಪೂಜ್ಯ ಲಿಂಗೈಕ್ಯ ವಿದ್ವಾನ್ ಶ್ರೀ ಮಹಾಂತಸ್ವಾಮಿಗಳು 1993ರಲ್ಲಿ ಶ್ರೀ ಮುರುಘ ರಾಜೇಂದ್ರಸ್ವಾಮಿ ವಿದ್ಯಾಸಂಸ್ಥೆ ಸ್ಥಾಪಿಸಿ, ಸಾವಿರಾರು ವಿದ್ಯಾರ್ಥಿಗಳ ಬಾಳಿಗೆ ಜ್ಞಾನ ದೀವಿಗೆಯಾದವರು. ಬಸವ ತತ್ವ ಪರಿಪಾಲನೆ–ಬೋಧನೆ ಮಾಡುತ್ತಾ ಮೈಸೂರು–ಚಾಮರಾಜನಗರ ಭಾಗದಲ್ಲಿ ಭಕ್ತರ ಮನದಲ್ಲಿ ಬಸವತತ್ವ ಬಿತ್ತಿ ಬೆಳೆಸಿದರು ಎಂದು ಸ್ಮರಿಸಿದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಪ್ರಥಮ ದರ್ಜೆ ಗುತ್ತಿಗೆದಾರ ಕೆ.ನಾಗರಾಜು ಉಚಿತ ಸಮವಸ್ತ್ರ ನೀಡಿದರು. ಕಾರ್ಯಕ್ರಮದಲ್ಲಿ ಶ್ರೀ ಮುರುಘ ರಾಜೇಂದ್ರಸ್ವಾಮಿ ಮಹಾಸಂಸ್ಥಾನ ಶ್ರೀ ಮಠ ಮರಿಯಾಲ, ರೋಟರಿ ಸಿಲ್ಕ್ ಸಿಟಿ ಚಾಮರಾಜನಗರ ಹಾಗೂ ರೆಡ್ ಕ್ರಾಸ್ ಸಂಸ್ಥೆ, ವೈದ್ಯಕೀಯ ವಿಜ್ಞಾನ ಸಂಸ್ಥೆಯ ಬೋಧನಾ ಆಸ್ಪತ್ರೆ ಸಹಯೋಗದೊಂದಿಗೆ ಸ್ವಯಂ ರಕ್ತದಾನ ಶಿಬಿರ ಹಾಗೂ ಆರೋಗ್ಯ ತಪಾಸಣಾ ಶಿಬಿರ, ಕೋವಿಡ್ ಲಸಿಕಾ ಅಭಿಯಾನ ಏರ್ಪಡಿಸಲಾಗಿತ್ತು. ಈ ಶಿಬಿರದಲ್ಲಿ ಪ್ರಥಮ ಬಾರಿಗೆ ಶ್ರೀ ಇಮ್ಮಡಿ ಮುರುಘ ರಾಜೇಂದ್ರಸ್ವಾಮಿ ರಕ್ತದಾನದ ಮೂಲಕ ಚಾಲನೆ ನೀಡಿದರು 30ಕ್ಕೂ ಹೆಚ್ಚು ಜನರು ಸ್ವಯಂ ರಕ್ತದಾನ ಮಾಡಿದರು. ರೋಟರಿ ಸಿಲ್ಕ್ ಸಿಟಿ ಅಧ್ಯಕ್ಷ ಮುರುಗೇಂದ್ರ ಸ್ವಾಮಿಗಳು, ಮುಖಂಡರಾದ ಕಾಳನಹುಂಡಿ ಕುಮಾರಸ್ವಾಮಿ, ಅಜಯ್, ಕೆಲ್ಲಂಬಳ್ಳಿ ಬಸವಣ್ಣ, ಕುಮಾರ್ ಹಾಗೂ ಯುವಕರು, ಹಿರಿಯ ವಿದ್ಯಾರ್ಥಿಗಳು ಮರಿಯಾಲದ ಗ್ರಾಮಸ್ಥರು ಈ ವೇಳೆ ಹಾಜರಿದ್ದರು.

ಮೂರನೇ ಪುಟದಿಂದ

ಅರಮನೆ ಎದುರು ರಾಹುಲ್ ವಾಸ್ತವ್ಯ

ಹೆಚ್ಚು ಜನ ಹೆಜ್ಜೆ ಹಾಕಿದರು. ಕಡಕೊಳ ಸಮೀಪದ ಕೆ.ಎಂ.ಹುಂಡಿಯಲ್ಲಿ ನೆರೆದಿದ್ದ ಸಾರ್ವಜನಿಕರತ್ತ ಕೈ ಬೀಸಿದ ರಾಹುಲ್‌ಗಾಂಧಿ ಅವರು ಕೆಲವರೊಡನೆ ಮಾತನಾಡಿ



ದರು. ಈ ವೇಳೆ ಜನರ ತಳ್ಳಾಟದ ನಡುವೆ ಮಾಜಿ ಉಪಮೇಯರ್ ಪುಷ್ಪವಲ್ಲಿ ಕೆಳಗೆ ಬಿದ್ದರು. ಕೂಡಲೇ ಅವರನ್ನು ರಾಹುಲ್ ಗಾಂಧಿ ಮೇಲೆತ್ತಿ ಸಂತೈಸಿದರು. ಇದೇ ಸಂದರ್ಭದಲ್ಲಿ ನಂಜನಗೂಡು ಕಡೆಯಿಂದ ಮೈಸೂರು ಕಡೆಗೆ ಸಾಗುತ್ತಿದ್ದ ಆಂಬ್ಯುಲೆನ್ಸ್‌ಗೆ ದಾರಿ ಮಾಡಿಕೊಡಲು ರಾಹುಲ್ ಗಾಂಧಿ ಸೂಚಿಸಿದರು. ಮರಸೆ ಗೇಟ್, ಮಂಡಕಳ್ಳಿ ಗೇಟ್, ಗೆಜ್ಜಗಳ್ಳಿ ಗೇಟ್ ಹೀಗೆ ಮಾರ್ಗದುದ್ದಕ್ಕೂ ಇಕ್ಕೆಲಗಳಲ್ಲಿ ಜನ ಜಮಾಯಿಸಿದ್ದರು. ರಾಹುಲ್ ಗಾಂಧಿ ಜನರತ್ತ ಕೈಬೀಸಿ, ಅಭಿನಂದನೆ ತಿಳಿಸಿದರು. ಯಾತ್ರೆಯಲ್ಲಿ ಭಾಗಿಯಾಗಿದ್ದ ಪಕ್ಷದ ಮುಖಂಡರು ಹಾಗೂ ಸಾರ್ವಜನಿಕರಿಗೆ ಸಂಚಾರಿ ಶೌಚಾಲಯ ವ್ಯವಸ್ಥೆ ಮಾಡಲಾಗಿತ್ತು. ಮಾರ್ಗದುದ್ದಕ್ಕೂ 'ಭಾರತ ಐಕ್ಯತಾ ಯಾತ್ರೆಯ ಬ್ಯಾನರ್, ಕಟೌಟ್ ಅಳವಡಿಸಲಾಗಿತ್ತು.

ಗಮನ ಸೆಳೆದ ಟೀ ಸ್ಟಾಲ್: ಪಾದಯಾತ್ರೆ ಮಾರ್ಗದಲ್ಲಿ ಕಾಂಗ್ರೆಸ್ ಕಾರ್ಯಕರ್ತರೇ ತೆರೆದಿದ್ದ ಅವಿದ್ಯಾವಂತ ಟೀ ಮತ್ತು ಬೋಂಡಾ ಸ್ಟಾಲ್ ತೆರೆಯುವ ಮೂಲಕ ಬಿಜೆಪಿ ಸರ್ಕಾರದ ಆಡಳಿತವನ್ನು ಅಣಕಿಸಿದರು. ವಕೀಲರು, ವೈದ್ಯರು, ಇಂಜಿನಿಯರ್‌ಗೆ ಪದವೀಧರರಿಗೆ ಹೊಂದುವ ಸಮವಸ್ತ್ರ ಧರಿಸಿದ್ದವರು ಟೀ ಹಾಗೂ ಬೋಂಡಾ ಮಾರಾಟ ಮಾಡಿದರು. ರಾಹುಲ್‌ಗಾಂಧಿ ಸೇರಿದಂತೆ ಜೊತೆಯಲ್ಲಿದ್ದ ಮುಖಂಡರೂ ಅಲ್ಲಿ ಟೀ ಸವಿದರು. ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದ ಕಾರ್ಯಕರ್ತರಿಗೂ ಮಾರ್ಗಮಧ್ಯೆ ಸೇಬು, ಮೋಸಂಬಿ, ಲಸ್ಸಿ, ಮಜ್ಜಿಗೆ, ನೀರಿನ ವ್ಯವಸ್ಥೆ ಮಾಡಲಾಗಿತ್ತು. ಮೈಸೂರು ಜಿಲ್ಲೆಯವರ ಜೊತೆಗೆ ದಕ್ಷಿಣ ಕನ್ನಡ ಜಿಲ್ಲೆಯ ನೂರಾರು ಮಂದಿ ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

ನಾಯಕರ ಟಿ-ಶರ್ಟ್: ಐಕ್ಯತಾ ಯಾತ್ರೆಯಲ್ಲಿ ಭಾಗಿಯಾಗಿದ್ದ ವಿವಿಧ ವಿಧಾನಸಭಾ ಕ್ಷೇತ್ರಗಳ ಕಾರ್ಯಕರ್ತರು ಆಯಾ ಕ್ಷೇತ್ರದ ಮುಖಂಡರ ಭಾವಚಿತ್ರ ಹಾಗೂ ರಾಹುಲ್ ಗಾಂಧಿ ಭಾವಚಿತ್ರವುಳ್ಳ ಟಿ-ಶರ್ಟ್ ಧರಿಸಿ ಗಮನ ಸೆಳೆದರು. ತಿ. ನರಸೀಪುರ ಕಾರ್ಯಕರ್ತರು ಮಾಜಿ ಸಚಿವ ಡಾ.ಎಚ್.ಸಿ.ಮಹದೇವಪ್ಪ, ಕೆ.ಆರ್. ನಗರದವರು ಡಿ.ರವಿಶಂಕರ್, ಹೆಚ್.ಡಿ.ಕೋಟೆ ತಾಲೂಕಿನವರು ಶಾಸಕ ಅನಿಲ್ ಚಿಕ್ಕಮಾದು ಭಾವಚಿತ್ರವುಳ್ಳ ಟಿ-ಶರ್ಟ್ ಧರಿಸಿದ್ದು ಕಂಡುಬಂದಿತು. ಬಹುತೇಕ ಕಾರ್ಯಕರ್ತರು ಪಕ್ಷದ ಧ್ವಜ ಹಿಡಿದು, ಘೋಷಣೆಯೊಂದಿಗೆ ಹೆಜ್ಜೆ ಹಾಕಿದರು.

ವಿವಿಧ ಜಾನಪದ ಕಲಾತಂಡಗಳ ಕಲಾ ಪ್ರದರ್ಶನ ಐಕ್ಯತಾ ಯಾತ್ರೆಯ ಮೆರಗು ಹೆಚ್ಚಿಸಿದ್ದವು. ನಂದಿಧ್ವಜ, ಕಂಸಾಳೆ, ಡೊಳ್ಳು ಕುಣಿತ, ನಗಾರಿ, ವೀರಗಾಸೆ, ಬ್ಯಾಂಡ್‌ಸೆಟ್ ಕಲಾವಿದರು ತಮ್ಮ ಕಲಾಪ್ರದರ್ಶನದ ಮೂಲಕ ಕಾರ್ಯಕರ್ತರ ಉತ್ಸಾಹ ಹೆಚ್ಚಿಸಿದರು. ಮಾರ್ಗಮಧ್ಯೆ ವಾದ್ಯಗಳ ಸದ್ದಿಗೆ ಕಾರ್ಯಕರ್ತರು ಕುಣಿದು ಸಂಭ್ರಮಿಸಿದರು. ಐಜಿಪಿ ಪ್ರವೀಣ್ ಪವಾರ್ ನಿರ್ದೇಶನದಲ್ಲಿ ಜಿಲ್ಲಾ ಪೊಲೀಸ್ ಅಧೀಕ್ಷಕ ಆರ್.ಚೇತನ್ ಹಾಗೂ ಎಎಸ್ಪಿ ನಂದಿನಿ ಮೇಲುಸ್ತುವಾರಿಯಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ನಾಲ್ವರು ಡಿವೈಎಸ್ಪಿ, 20 ಮಂದಿ ಇನ್‌ಸ್ಪೆಕ್ಟರ್‌ಗಳು, 500ಕ್ಕೂ ಹೆಚ್ಚು ಸಿಬ್ಬಂದಿಯನ್ನು ಬಂದೋಬಸ್ತ್‌ಗೆ ನಿಯೋಜಿಸಲಾಗಿತ್ತು. ಯಾತ್ರೆ ಮೈಸೂರಿಗೆ ಆಗಮಿಸುವ ಸಂದರ್ಭದಲ್ಲಿ ಬಂಡಿಪಾಳ್ಯದ ಬಳಿ ರಿಂಗ್‌ರೋಡ್ ಜಂಕ್ಷನ್‌ನಲ್ಲಿ ವಾಹನ ತಡೆದಿದ್ದರಿಂದ ಕೆಲಕಾಲ ಸಂಚಾರ ಅಸ್ತವ್ಯಸ್ತವಾಗಿತ್ತು. ಜೋರು ಮಳೆಯಿಂದ ಪೊಲೀಸರು, ವಾಹನ ಸವಾರರು, ಯಾತ್ರೆಯಲ್ಲಿ ಭಾಗಿಯಾಗಿದ್ದ ಕಾರ್ಯಕರ್ತರು ಹೈರಾಣಾದರು.

ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ರಣದೀಪ್ ಸುರ್ಜೇವಾಲ, ಕೆ.ಸಿ.ವೇಣುಗೋಪಾಲ್, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಕೇಂದ್ರದ ಮಾಜಿ ಸಚಿವ ಕೆ.ಎಚ್. ಮುನಿಯಪ್ಪ, ಸತೀಶ್ ಜಾರಕಿಹೊಳಿ, ಎಂ.ಬಿ.ಪಾಟೀಲ್, ದಿನೇಶ್ ಗುಂಡೂರಾವ್, ಕೆ.ಜೆ.ಜಾರ್ಜ್, ರಾಮಲಿಂಗರೆಡ್ಡಿ, ಡಾ.ಎಚ್.ಸಿ.ಮಹದೇವಪ್ಪ, ಮೋಟಮ್ಮ, ಮಹಮ್ಮದ್ ನಲಪಾಡ್ ಹ್ಯಾರಿಸ್, ಯು.ಟಿ.ಖಾದರ್, ಐವಾನ್ ಡಿಸೋಜಾ, ರಿಜ್ವಾನ್ ಹರ್ಷದ್, ಯತೀಂದ್ರ ಸಿದ್ದರಾಮಯ್ಯ, ಅನಿಲ್ ಚಿಕ್ಕಮಾದು, ಡಾ.ಮಂಜುನಾಥ್, ಕಳಲೆ ಕೇಶವಮೂರ್ತಿ, ಕೆ.ಮರೀಗೌಡ, ಐಶ್ವರ್ಯ ಮಹದೇವ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಂ. ಲಕ್ಷ್ಮಣ್, ಕೂರ್ಗಳ್ಳಿ ಮಹದೇವ್, ಎಂ.ಪ್ರದೀಪ್‌ಕುಮಾರ್ ಸೇರಿದಂತೆ ಅನೇಕ ಮುಖಂಡರು ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

ಬದನವಾಳಲ್ಲಿ ಗಾಂಧಿ ಜಯಂತಿ

ಕೋಮು ಘರ್ಷಣೆಯ ಬಳಿಕ ಎರಡೂ ಕೋಮಿನವರ ಕಂದಕ ನಿರ್ಮಾಣವಾಗಿ ಸವರ್ಣೀಯರು ಮತ್ತು ದಲಿತರ ಬೀದಿಗೆ ಸಂಪರ್ಕ ಕಲ್ಪಿಸುವ ರಸ್ತೆ(ಓಣಿ)ಯನ್ನು ಮುಚ್ಚಲಾಗಿತ್ತು. ಎರಡೂ ಕೋಮಿನ ಮುಖಂಡರೊಡನೆ ಸಂವಾದ ನಡೆಸಿದ ರಾಹುಲ್ ಗಾಂಧಿ, ಅವರನ್ನು ಮನವೊಲಿಸಿ ಗಿಡಗಂಟಿಗಳನ್ನು ತೆರವುಗೊಳಿಸಿ, ರಸ್ತೆಗೆ ಕಲ್ಲು ಹಾಕುವ ಮೂಲಕ 120 ಮೀ. ರಸ್ತೆಯನ್ನು ನಿರ್ಮಿಸಿ ಭಾರತ ಐಕ್ಯತಾ ರಸ್ತೆ ಎಂದು ಹೆಸರಿಟ್ಟು ಸಂಚಾರ ಮುಕ್ತಗೊಳಿಸುವ ಮೂಲಕ ಎರಡೂ ಕೋಮಿನ ಜನರನ್ನು ಒಂದುಗೂಡಿಸಿ ಸೌಹಾರ್ದತೆ ಮೂಡಿಸುವ ಕೆಲಸ ಮಾಡಿದರು. ನಂತರ 1.15ರ ವೇಳೆಗೆ ಎರಡೂ ಕೋಮಿನ ಮುಖಂಡರೊಡನೆ ಸಹಪಂಕ್ತಿ ಭೋಜನ ಸ್ವೀಕರಿಸುವ ಮೂಲಕ ಭೇದ-ಭಾವವನ್ನು ಅಳಿಸುವ ಕೆಲಸಕ್ಕೆ ಮುನ್ನುಡಿ ಬರೆದರು.

ನಂತರ 3.30ರ ವೇಳೆಗೆ ಬದನವಾಳು ಖಾದಿ ಕೇಂದ್ರದಿಂದ ತೆರಳಿದ ರಾಹುಲ್ ಗಾಂಧಿ ಮಧ್ಯಾಹ್ನ 3.45ರ ವೇಳೆಗೆ ನಂಜನಗೂಡಿನ ಶ್ರೀಕಂಠೇಶ್ವರನ ದರ್ಶನ ಪಡೆದರು. ದೇವಾಲಯದ ವತಿಯಿಂದ ಅವರನ್ನು ಮಂಗಳವಾದ್ಯಗಳೊಡನೆ ಸ್ವಾಗತಿಸಲಾಯಿತು. ದೇವಾಲಯದಲ್ಲಿ ಟಿಪ್ಪು ಸುಲ್ತಾನ್ ಸ್ಥಾಪಿಸಿರುವ ಪಚ್ಚೆ ಲಿಂಗದ ಬಗ್ಗೆ ತಿಳಿದುಕೊಂಡರು. ಡಿ.ಕೆ.ಶಿವಕುಮಾರ್ ವಿವರ ನೀಡಿದರು. ರಾಹುಲ್‌ಗಾಂಧಿರವರಿಗೆ ದೇವಾಲಯದ ವತಿಯಿಂದ ಶೇಷವಸ್ತ್ರ ನೀಡಿ ಗೌರವಿಸಲಾಯಿತು. 4.15ರ ವೇಳೆಗೆ ದೇವಾಲಯದಿಂದ ಕಡಕೊಳಕ್ಕೆ ತೆರಳಿ ಪಾದಯಾತ್ರೆಯನ್ನು ಮುಂದುವರೆಸಿದರು.

ಇದೇ ವೇಳೆ ವಿಪಕ್ಷ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಕೆ.ಸಿ.ವೇಣುಗೋಪಾಲ್, ಸುರ್ಜೇವಾಲಾ, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಆರ್.ಧ್ರುವನಾರಾಯಣ್, ಸಲಿಂಅಹಮದ್, ಬಿ.ಕೆ.ಹರಿಪ್ರಸಾದ್, ಮಾಜಿ ಶಾಸಕರಾದ ಲಕ್ಷ್ಮಿ ಹೆಬ್ಬಾಳ್‌ಕರ್, ಎಚ್.ಸಿ.ಮಹದೇವಪ್ಪ, ಕೆ.ಎಚ್.ಮುನಿಯಪ್ಪ, ಶಾಸಕರಾದ ಅನಿಲ್‌ಚಿಕ್ಕಮಾದು, ಯತೀಂದ್ರ ಸಿದ್ದರಾಮಯ್ಯ, ರಿಜ್ವಾನ್ ಹರ್ಷದ್, ಮಾಜಿ ಶಾಸಕರಾದ ಕಳಲೆ ಕೇಶವಮೂರ್ತಿ, ಬಾಲರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಸಿ.ಎಂ.ಶಂಕರ್, ಕುರಹಟ್ಟಿ ಮಹೇಶ್, ಶ್ರೀಕಂಠನಾಯಕ, ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು ಸೇರಿದಂತೆ ರಾಜ್ಯ ಕಾಂಗ್ರೆಸ್ ನಾಯಕರು, ಕಾರ್ಯಕರ್ತರು ಇದ್ದರು.

ಮಳೆಯಲ್ಲೇ ರಾಹುಲ್ ಗಾಂಧಿ ಭಾಷಣ



ಹಾಕಿದರು. ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ಜನರ ಹಿತ ಮರೆತು ಲೂಟಿ ಹೊಡೆಯುವುದರಲ್ಲಿ ನಿರತವಾಗಿದೆ. 40 ಪರ್ಸೆಂಟ್ ಸರ್ಕಾರದಿಂದ ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳಾಗಿಲ್ಲ. ಪ್ರತಿಯೊಂದೂ ಕಮಿಷನ್ ವ್ಯವಹಾರವಾಗಿದೆ ಎಂದು ಜನರೇ ಹೇಳುತ್ತಿದ್ದಾರೆ. ಈ ದುಸ್ಥಿತಿ ಇದ್ದರೂ ಪಕ್ಷದ ನಾಯಕರು ಏನೂ ತಿಳಿಯದವರಂತೆ ಇದ್ದಾರೆ ಎಂದು ಟೀಕಿಸಿದರು. ಬಿಜೆಪಿ ಜಾತಿ ಹಾಗೂ ಧರ್ಮದ ಹೆಸರಿನಲ್ಲಿ ದೇಶವನ್ನು ವಿಭಜಿಸುವ ಕೆಲಸ ಮಾಡುತ್ತಿದೆ. ಅವರು ವಿಭಜಿಸುವ ಕೆಲಸ ಮಾಡಿದರೆ ಕಾಂಗ್ರೆಸ್ ಜೋಡಿಸುವ ಕೆಲಸ ಮಾಡುತ್ತಿದೆ. ದೇಶದಲ್ಲಿ ನಿರುದ್ಯೋಗ ಸಮಸ್ಯೆ ತಾಂಡವವಾಡುತ್ತಿದೆ. ಕಾಂಗ್ರೆಸ್ ಕೊಟ್ಟ ಮಾತಿನಂತೆ ಜನರನ್ನು ಉಳಿಸುವ ಕೆಲಸ ಮಾಡಲಿದೆ. ಈ ನಿಟ್ಟಿನಲ್ಲಿ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೂ ಭಾರತ ಐಕ್ಯತಾ ಯಾತ್ರೆ ನಡೆಸಲಾಗುತ್ತಿದೆ. ಇದು ಸತ್ಯ, ಅಹಿಂಸೆ, ನ್ಯಾಯಮಾರ್ಗವಾಗಿದೆ. ಯಾವುದೇ ಕಾರಣಕ್ಕೂ ಯಾತ್ರೆ ನಿಲ್ಲಿಸದೆ ಗುರಿ ತಲುಪುತ್ತೇವೆ. ಜೋರು ಮಳೆಯಲ್ಲೂ ನನ್ನ ಭಾಷಣ ಆಲಿಸಿದ ಎಲ್ಲರಿಗೂ ಧನ್ಯವಾದ ಎಂದು ನುಡಿದರು. ಈ ವೇಳೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಎಐಸಿಸಿ ರಾಜ್ಯ ಉಸ್ತುವಾರಿ ರಣದೀಪ್ ಸುರ್ಜೇವಾಲಾ, ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ಮಾಜಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಮತ್ತಿತರರು ಉಪಸ್ಥಿತರಿದ್ದರು.

ಇಂಡೋನೇಷ್ಯಾ: ಫುಟ್‌ಬಾಲ್ ಪಂದ್ಯದ ವೇಳೆ ಗಲಭೆ

ಕಾಲ್ತುಳಿತದಲ್ಲಿ ಸಾವನ್ನಪ್ಪಿದವರ ಸಂಖ್ಯೆ 170ಕ್ಕೆ ಏರಿಕೆ





ಜಕಾರ್ತ, ಅ.2- ಇಂಡೋನೇಷ್ಯಾದ ಫುಟ್ಬಾಲ್ ಸ್ಟೇಡಿಯಂನಲ್ಲಿ ನಡೆದ ಗಲಭೆಯ ವೇಳೆ ಸಂಭವಿಸಿದ ಕಾಲ್ತುಳಿತದಲ್ಲಿ ಸಾವನ್ನಪ್ಪಿದವರ ಸಂಖ್ಯೆ 170ಕ್ಕೇರಿದೆ.

ಆಕ್ರೋಶಗೊಂಡ ಸಾವಿರಾರು ಅಭಿಮಾನಿಗಳು ಕ್ರೀಡಾಂಗಣಕ್ಕೆ ನುಗ್ಗಿದ್ದು, ಅವರನ್ನು ನಿಯಂತ್ರಿಸಲು ಪೊಲೀಸರು ಅಶ್ರುವಾಯು ಪ್ರಯೋಗಿಸಿದರು. ಇದರಿಂದ ಕಾಲ್ತುಳಿತ ಉಂಟಾಯಿತು ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ. ಭಾನುವಾರ ಬೆಳಗ್ಗೆ 9:30ಕ್ಕೆ ಸಾವಿನ ಸಂಖ್ಯೆ 158 ಆಗಿತ್ತು. ನಂತರ 10:30 ಕ್ಕೆ ಸಾವಿನ ಸಂಖ್ಯೆ 170ಕ್ಕೆ ಏರಿದೆ. ಇದು ಪೂರ್ವ ಜಾವಾ ವಿಪತ್ತು ತಗ್ಗಿಸುವ ಸಂಸ್ಥೆ ಸಂಗ್ರಹಿಸಿದ ಡೇಟಾ ಎಂದು ಪೂರ್ವ ಜಾವಾ ಡೆಪ್ಯೂಟಿ ಗವರ್ನರ್ ಎಮಿಲ್ ದರ್ಡಾಕ್ ಬ್ರಾಡ್‌ಕಾಸ್ಟರ್ ಕೊಂಪಸ್ ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಶನಿವಾರ ರಾತ್ರಿ ನಡೆದ ಈ ದುರಂತದಲ್ಲಿ 18ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಇದು ವಿಶ್ವದ ಅತ್ಯಂತ ಮಾರಣಾಂತಿಕ ಕ್ರೀಡಾಂಗಣದ ದುರಂತಗಳಲ್ಲಿ ಒಂದಾಗಿದೆ. ಇಂಡೋನೇಷ್ಯಾದ ಟಾಪ್ ಲೀಗ್ ಪಂದ್ಯದಲ್ಲಿ ಪರ್ಸೆಬಯಾ ತಂಡ 3-2 ರಿಂದ ಗೆದ್ದ ನಂತರ ಈ ದುರ್ಘಟನೆ ಸಂಭವಿಸಿದೆ. ಹೀಗಾಗಿ ಇಂಡೋನೇಷ್ಯಾದಲ್ಲಿ ಒಂದು ವಾರಗಳ ಕಾಲ ಆಟಗಳನ್ನು ಸ್ಥಗಿತಗೊಳಿಸಿ ತನಿಖೆ ಪ್ರಾರಂಭಿಸಲಾಗಿದೆ ಎಂದು ಇಂಡೋನೇಷ್ಯಾದ ಫುಟ್ಬಾಲ್ ಅಸೋಸಿಯೇಷನ್ ತಿಳಿಸಿದೆ.

ಅರೆಮಾ ಎಫ್‌ಸಿ ಮತ್ತು ಪರ್ಸೆಬಯಾ ಸುರಬಯಾ ನಡುವಿನ ಪಂದ್ಯ ಮುಗಿದ ನಂತರ, ಸೋತ ತಂಡದ ಬೆಂಬಲಿಗರು ಪಿಚ್‌ಗೆ ನುಗ್ಗಿ ಗಲಾಟೆ ಮಾಡಿದ್ದೇ ಈ ದುರ್ಘಟನೆಗೆ ಕಾರಣ ಎನ್ನಲಾಗಿದೆ. ಅಭಿಮಾನಿಗಳು ಪಿಚ್‌ಗೆ ಇಳಿಯುತ್ತಿದ್ದಂತೆ ಪೊಲೀಸರು ಅಶ್ರುವಾಯು ಬಳಸಿ ಪರಿಸ್ಥಿತಿ ನಿಯಂತ್ರಿಸಲು ಯತ್ನಿಸಿದರು. ಆದರೂ ನೂಕುನುಗ್ಗಲು ಉಂಟಾಗಿ ಕಾಲ್ತುಳಿತ ಮತ್ತು ಉಸಿರುಗಟ್ಟುವಿಕೆಯಿಂದ 170 ಜನ ಮೃತಪಟ್ಟಿದ್ದಾರೆ.

ಅಧ್ಯಕ್ಷ ಜೊಕೊ ವಿಡೊಡೊ ದುರಂತದ ಬಗ್ಗೆ ತನಿಖೆಗೆ ಆದೇಶಿಸಿದ್ದಾರೆ. ಎಲ್ಲಾ ಫುಟ್ಬಾಲ್ ಪಂದ್ಯಗಳ ಸುರಕ್ಷತಾ ಪರಿಶೀಲನೆ ಮತ್ತು ಭದ್ರತಾ ಸುಧಾರಣೆಗಳು ಪೂರ್ಣಗೊಳ್ಳುವವರೆಗೆ ಎಲ್ಲಾ ಪಂದ್ಯಗಳನ್ನು ಅಮಾನತುಗೊಳಿಸುವಂತೆ ದೇಶದ ಫುಟ್ಬಾಲ್ ಸಂಸ್ಥೆಗೆ ನಿರ್ದೇಶನ ನೀಡಿದ್ದಾರೆ. ಈ ದುರಂತಕ್ಕೆ ನಾನು ತೀವ್ರವಾಗಿ ವಿಷಾದಿಸುತ್ತೇನೆ ಮತ್ತು ಈ ಫುಟ್ಬಾಲ್ ದುರಂತ ನಮ್ಮ ದೇಶದಲ್ಲಿ ಕೊನೆಯಾಗುತ್ತದೆ ಎಂದು ನಾನು ಭಾವಿಸುತ್ತೇನೆ ಎಂದು ವಿಡೋಡೋ ಹೇಳಿದ್ದಾರೆ.

ಎಸ್ಪಿ ವರಿಷ್ಠ ಮುಲಾಯಂ ಸಿಂಗ್ ಯಾದವ್ ಆಸ್ಪತ್ರೆಗೆ ದಾಖಲು



ಗುರುಗ್ರಾಮ್, ಅ.2- ಉತ್ತರ ಪ್ರದೇಶ ಮಾಜಿ ಮುಖ್ಯಮಂತ್ರಿ ಮತ್ತು ಸಮಾಜವಾದಿ ಪಕ್ಷದ ಸಂಸ್ಥಾಪಕ ಮುಲಾಯಂ ಸಿಂಗ್ ಯಾದವ್ ಅವರ ಆರೋಗ್ಯ ಸ್ಥಿತಿ ಗಂಭೀರವಾಗಿದ್ದು, ಅವರನ್ನು ಹರಿಯಾಣದ ಗುರುಗ್ರಾಮ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಐಸಿಯು ವಾರ್ಡ್‌ನಲ್ಲಿ ಅವರಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಯಾದವ್ ಅವರು ಕೆಲವು ತಿಂಗಳುಗಳಿಂದ ಹಲವಾರು ಕಾಯಿಲೆಗಳಿಗೆ ಚಿಕಿತ್ಸೆ ಪಡೆಯುತ್ತಿದ್ದಾರೆ. ಆದರೆ ಅವರ ಸ್ಥಿತಿ ಇಂದು ಗಂಭೀರವಾಗಿದೆ ಎಂದು ವಿವರಿಸಲಾಗಿದೆ. ಎಸ್‌ಪಿ ವರಿಷ್ಠರ ಪುತ್ರ ಅಖಿಲೇಶ್ ಯಾದವ್ ಅವರು ತಮ್ಮ ತಂದೆಯ ಪಕ್ಕದಲ್ಲಿರಲು ದೆಹಲಿಗೆ ತೆರಳಿದ್ದಾರೆ ಎಂದು ವರದಿಯಾಗಿದೆ. ಶಿವಪಾಲ್ ಯಾದವ್ ಅವರು ಪ್ರಸ್ತುತ ದೆಹಲಿಯಲ್ಲಿದ್ದಾರೆ.

ವಕೀಲರಿಗೆ ಪಾರ್ಕಿಂಗ್ ಹಕ್ಕು ಕುರಿತ ಪಿಐಎಲ್ ವಜಾಗೊಳಿಸಿದ ಹೈಕೋರ್ಟ್!

ಬೆಂಗಳೂರು, ಅ.2- ಕೋರ್ಟ್ ಆವರಣದೊಳಗೆ ವಕೀಲರು ತಮ್ಮ ವಾಹನಗಳನ್ನು ಪಾರ್ಕಿಂಗ್ ಮಾಡುವ ಹಕ್ಕನ್ನು ಹೊಂದಿರುವುದಿಲ್ಲ ಎಂದು ರಾಜ್ಯ ಹೈಕೋರ್ಟ್ ಹೇಳಿದೆ. ಈ ಸಂಬಂಧ ವಕೀಲ ಎನ್.ಎಸ್. ವಿಜಯನಾಥ್ ಬಾಬು ಸಲ್ಲಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ವಜಾಗೊಳಿಸಿದೆ. ವಕೀಲರ ಕಾಯ್ದೆಯ ಸೆಕ್ಷನ್ 30, ಕಾನೂನು ಅಭ್ಯಸಿಸುವ ಹಕ್ಕನ್ನು ನೀಡಿದ್ದು, ಕೋರ್ಟ್ ಆವರಣದೊಳಗೆ ತಮ್ಮ ವಾಹನಗಳನ್ನು ಪಾರ್ಕಿಂಗ್ ಮಾಡುವ ಹಕ್ಕು ನೀಡಿಲ್ಲ. ಇದರಲ್ಲಿ ಯಾವುದೇ ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಿಸಿದ ಅಂಶಗಳು ಇಲ್ಲದಿರುವುದರಿಂದ ದೂರುದಾರರು ತಪ್ಪಾಗಿ ಅರ್ಜಿ ಸಲ್ಲಿಸಿರುವುದಾಗಿ ಹಂಗಾಮಿ ಮುಖ್ಯ ನ್ಯಾಯಾಧೀಶ ಅಲೋಕ್ ಅರಾದೆ ಮತ್ತು ನ್ಯಾಯಾಧೀಶ ಎಸ್. ವಿಶ್ವಜಿತ್ ಶೆಟ್ಟಿ ಅವರನ್ನೊಳಗೊಂಡ ವಿಭಾಗೀಯ ಪೀಠ ಹೇಳಿತು.

ಹೊಸ ವಾಹನಗಳ ಮೇಲಿನ ಸ್ಟಿಕ್ಕರ್‌ಗೆ ಸಂಬಂಧಿಸಿದಂತೆ ವಕೀಲರ ಸಂಘದಿಂದ ಇದೇ ವರ್ಷ ಆಗಸ್ಟ್ 5 ರಂದು ನೀಡಿರುವ ನೋಟಿಸ್ ರದ್ದುಪಡಿಸಬೇಕೆಂದು ಕೋರಿ ಬೆಂಗಳೂರು ವಕೀಲರ ಸಂಘದ ಸದಸ್ಯರಾಗಿರುವ ದೂರುದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು. ವಕೀಲರಿಂದ ಪಾರ್ಕಿಂಗ್ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಉದ್ದೇಶದೊಂದಿಗೆ ನೋಟಿಸ್ ನೀಡಿರುವುದನ್ನು ಗಮನಿಸಿದ ನ್ಯಾಯಾಲಯ, ಕೋರ್ಟ್ ಆವರಣದೊಳಗೆ ಪಾರ್ಕಿಂಗ್ ಜಾಗ ಹೆಚ್ಚಿಗೆ ಇಲ್ಲದಿರುವುದರಿಂದ ವಾಹನಗಳ ನಿಯಂತ್ರಣ ಅಗತ್ಯವಾಗಿದೆ ಎಂದು ಅಭಿಪ್ರಾಯಪಟ್ಟಿತು.

ರೈಲ್ವೆ ಉದ್ಯೋಗಿಗಳಿಗೆ ಬೋನಸ್ ನೀಡಲು ಕೇಂದ್ರ ಸರ್ಕಾರ ಅನುಮೋದನೆ

ನವದೆಹಲಿ, ಅ.2- 2021-22ರ ಆರ್ಥಿಕ ವರ್ಷದಲ್ಲಿ ಗೆಜೆಟೆಡ್ ಅಲ್ಲದ ಅರ್ಹ ರೈಲ್ವೆ ಉದ್ಯೋಗಿಗಳಿಗೆ 78 ದಿನಗಳ ವೇತನಕ್ಕೆ ಸರಿಸಮನಾದ ಉತ್ಪಾದಕತೆ ಸಂಬಂಧಿತ ಬೋನಸ್ (ಪ್ರೊಡಕ್ಟಿವಿಟಿ ಲಿಂಕ್ಡ್ ಬೋನಸ್ ಪಿಎಲ್‌ಬಿ) ನೀಡಲು ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ.

ಈ ನಿರ್ಧಾರದಿಂದ ಸುಮಾರು 11.27 ಲಕ್ಷ ನಾನ್ ಗೆಜೆಟೆಡ್ ರೈಲ್ವೆ ಉದ್ಯೋಗಿಗಳಿಗೆ ಪ್ರಯೋಜನ ಸಿಗುವ ಸಾಧ್ಯತೆಯಿದೆ. ಆದರೆ, ಈ ಸೌಲಭ್ಯ ಆರ್‌ಪಿಎಫ್, ಆರ್‌ಪಿಎಸ್‌ಎಫ್ ಸಿಬ್ಬಂದಿಗೆ ಅನ್ವಯಿಸದು ಎಂದು ರೈಲ್ವೆಯ ಹೇಳಿಕೆ ತಿಳಿಸಿದೆ. ರೈಲ್ವೆ ಉದ್ಯೋಗಿಗಳಿಗೆ 78 ದಿನಗಳ ಪಿಎಲ್‌ಬಿ ಪಾವತಿಸಲು 1,832.09 ಕೋಟಿ ಬೇಕಾಗಲಿದ್ದು, ಇದನ್ನು ಹಣಕಾಸು ಇಲಾಖೆ ಒಪ್ಪಿಗೆ ಸಿಕ್ಕಿದೆ. ನಿಗದಿಪಡಿಸಿದ ವೇತನ ಲೆಕ್ಕಾಚಾರದ ಮಿತಿಯಂತೆ ಕನಿಷ್ಠ 7,000ದಿಂದ ಗರಿಷ್ಠ 17,951 ಪಿಎಲ್‌ಬಿ ಪಾವತಿಸಬೇಕಾಗುತ್ತದೆ. ದಸರೆ ಆಯುಧ ಪೂಜೆಗೂ ಮುನ್ನವೇ ಪಿಎಲ್‌ಬಿ ಉದ್ಯೋಗಿಗೆ ಪಾವತಿಯಾಗಲಿದೆ. 78 ದಿನಗಳ ಉತ್ಪಾದಕತೆ ಸಂಬಂಧಿತ ಬೋನಸ್ ಮಂಜೂರು ಮಾಡಿರುವುದಕ್ಕಾಗಿ ಪ್ರಧಾನಿ ನರೇಂದ್ರ ಮೋದಿಯವರಿಗೆ ಇಡೀ ರೈಲ್ವೆ ಪರಿವಾರದ ಪರವಾಗಿ ಧನ್ಯವಾದಗಳು ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಟ್ವೀಟ್ ಮಾಡಿದ್ದಾರೆ.

ಭಾರತೀ ಕಾಲೇಜಿನಲ್ಲಿ ದಸರಾ ಗೊಂಬೆಗಳಿಗೆ ಪೂಜೆ



ಭಾರತೀನಗರ, ಅ.2- ನಾಡಹಬ್ಬ ದಸರಾ ಸಂದರ್ಭದಲ್ಲಿ ಗೊಂಬೆಗಳನ್ನ ಕೂರಿಸಿ ಪೂಜೆಸಲ್ಲಿಸುವುದು ವಾಡಿಕೆಯಾಗಿದೆ ಎಂದು ಭಾರತೀ ಎಜುಕೇಷನ್ ಟ್ರಸ್ಟ್‌ನ ಟ್ರಸ್ಟಿ ಹಾಗೂ ಸಿಇಓ ಆಶಯ್ ಮಧುಮಾದೇಗೌಡ ತಿಳಿಸಿದರು.

ಭಾರತೀನಗರದ ಭಾರತೀ ಕಾಲೇಜಿನಲ್ಲಿ ನವರಾತ್ರಿ ಪ್ರಯುಕ್ತ ಕಾಲೇಜಿನಲ್ಲಿ ದಸರಾ ಗೊಂಬೆಗಳನ್ನು ಕೂರಿಸಿ ಪೂಜೆ ಸಲ್ಲಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ನವರಾತ್ರಿ ಉತ್ಸವದಲ್ಲಿ ಪ್ರತೀ ದಿನವೂ ಗೊಂಬೆಗಳಿಗೆ ಪೂಜೆ ಮಾಡಿ ರಾತ್ರಿ ಆರತಿ ಬೆಳಗಿ ವಿಶೇಷ ಪೂಜೆ ಮಾಡುವುದು ಸಂಪ್ರದಾಯ. ಹಿಂದೆಲ್ಲಾ ಪ್ರತೀ ಮನೆಗಳಲ್ಲೂ ದಸರಾ ಗೊಂಬೆಗಳನ್ನು ಕೂರಿಸಿ ಪೂಜೆ ಸಲ್ಲಿಸುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಕೆಲವರು ಮಾತ್ರಗೊಂಬೆ ಕೂರಿಸುವ ಪದ್ಧತಿಯನ್ನ ಮುಂದುವರೆಸಿದ್ದಾರೆ.

ಇಂತಹ ಕಾರ್ಯಕ್ರಮಗಳು ನಮ್ಮ ಕಾಲೇಜಿನಲ್ಲಿ ನಡೆಯುತ್ತಿರುವುದು ತುಂಬಾ ಸಂತಸ. ಕಳೆದ ಮೂರು ವರ್ಷಗಳಿಂದ ಕೊರೊನಾ ಹಿನ್ನೆಲೆಯಲ್ಲಿ ನಮ್ಮ ಕಾಲೇಜಿನಲ್ಲಿ ಯಾವುದೇ ಕ್ರಿಯಾಶೀಲತೆಯ ಕಾರ್ಯಕ್ರಮವನ್ನು ಆಯೋಜನೆ ಮಾಡಲು ಸಾಧ್ಯವಾಗಿರಲಿಲ್ಲ. ಇನ್ನು ಮುಂದೆ ಪ್ರತೀ ವರ್ಷವು ದಸರಾಗೊಂಬೆಗಳನ್ನು ಇಟ್ಟು ಪೂಜಿಸುವ ಕಾರ್ಯಕ್ರಮ ನಮ್ಮ ಕಾಲೇಜಿನಲ್ಲಿ ನಡೆಯುತ್ತಿರುತ್ತವೆ ಎಂದರು.

ಪಾಶ್ಚಾತ್ಯ ಸಂಸ್ಕೃತಿಗೆ ಮಾರು ಹೋಗಿ ದೇಶಿಯ ಸಂಸ್ಕೃತಿ ಮರೆಯಾಗುತ್ತಿರುವ ಸಂದರ್ಭದಲ್ಲಿ ಮಕ್ಕಳಿಗೆ ಸಂಸ್ಕಾರ ಕಲಿಸುವ ಕೆಲಸವನ್ನು ಅಧ್ಯಾಪಕರು ಮಾಡುತ್ತಿರುವುದು ಉತ್ತಮ ಬೆಳವಣಿಗೆ. ಹಬ್ಬಗಳು ನಮ್ಮ ದೇಶದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ಈ ನಿಟ್ಟಿನಲ್ಲಿ ಇಂತಹ ದಸರಾಗೊಂಬೆಗಳ ಪ್ರದರ್ಶನ ಅತ್ಯವಶ್ಯಕ ಎಂದರು.

ಈ ಕಾರ್ಯಕ್ರಮದಲ್ಲಿ ಹೆಣ್ಣುಮಕ್ಕಳು ಸಾಂಸ್ಕೃತಿಕ ಉಡುಗೆತೊಡುಗೆಗಳೊಂದಿಗೆ ಭಾಗವಹಿಸಿದ್ದು ನೋಡುಗರ ಕಣ್ಮನ ಸೆಳೆಯಿತು.

ನಂತರ ಭಾಗವಹಿಸಿದ್ದ ಎಲ್ಲರಿಗೂ ಸಹ ಸಿಹಿ ವಿತರಣೆ ಮಾಡಲಾಯಿತು. ಇದೇ ಸಂದರ್ಭದಲ್ಲಿ ಪ್ರಾಂಶುಪಾಲ ಡಾ.ಮರಾಮಕೃಷ್ಣ, ಭಾರತೀಎಜುಕೇಷನ್ ಟ್ರಸ್ಟ್ ಕಾರ್ಯದರ್ಶಿ ಬಿ.ಎಂ.ನಂಜೇಗೌಡ, ಡಾ.ಎಂ.ಎಸ್.ಮಹದೇವಸ್ವಾಮಿ, ಪಿಯು ವಿಭಾಗದ ಪ್ರಾಂಶುಪಾಲ ನಾಗಮಾದಯ್ಯ ಸೇರಿದಂತೆ ಎಲ್ಲಾ ವಿಭಾಗದ ಮುಖ್ಯಸ್ಥರು ಭಾಗವಹಿಸಿದ್ದರು.

2ನೇ ಟಿ20: ದ.ಆಫ್ರಿಕಾ ವಿರುದ್ಧ ಭಾರತಕ್ಕೆ ಜಯ, ಸರಣಿ ಕೈವಶ



ಗುವಾಹತಿ: ದಕ್ಷಿಣ ಆಫ್ರಿಕಾ ವಿರುದ್ಧದ 2ನೇ ಟಿ20 ಪಂದ್ಯದಲ್ಲಿ ಟೀಂ ಇಂಡಿಯಾ 16 ರನ್‌ಗಳ ಅಂತರದ ವಿರೋಚಿತ ಜಯ ಗಳಿಸಿದ್ದು, ಈ ಮೂಲಕ 3 ಪಂದ್ಯಗಳ ಟಿ20 ಸರಣಿಯನ್ನು ಇನ್ನೂ ಒಂದು ಪಂದ್ಯ ಬಾಕಿ ಇರುವಂತೆಯೇ ಕೈ ವಶ ಮಾಡಿಕೊಂಡಿದೆ. ಗುವಾಹತಿಯ ಬರ್ಸಾಪರಾ ಕ್ರಿಕೆಟ್ ಸ್ಟೇಡಿಯಂ ನಡೆದ 2ನೇ ಟಿ20 ಪಂದ್ಯದಲ್ಲಿ ಭಾರತ ನೀಡಿದ 238 ರನ್ ಗಳ ಬೃಹತ್ ಗುರಿಯನ್ನು ಬೆನ್ನು ಹತ್ತಿದ ದಕ್ಷಿಣ ಆಫ್ರಿಕಾ ತಂಡ ಕ್ವಿಂಟನ್ ಡಿ ಕಾಕ್ ಮತ್ತು ಡೇವಿಡ್ ಮಿಲ್ಲರ್ ಅಮೋಘ ಬ್ಯಾಟಿಂಗ್ ನ ಹೊರತಾಗಿಯೂ ನಿಗದಿತ 20 ಓವರ್ ಗಳಲ್ಲಿ 221 ರನ್ ಗಳಿಸಿ 16 ರನ್ ಗಳ ಅಂತರದಲ್ಲಿ ವಿರೋಚಿತ ಸೋಲು ಕಂಡಿತು.

ಬೃಹತ್ ಮೊತ್ತವನ್ನು ಬೆನ್ನು ಹತ್ತಿದ ದಕ್ಷಿಣ ಆಫ್ರಿಕಾ ತಂಡಕ್ಕೆ ಆರಂಭಿಕ ಆಘಾತ ಎದುರಿಸಿತು. ನಾಯಕ ಬವುಮಾ ಮತ್ತು ರೊಸ್ಸೋ ಶೂನ್ಯಕ್ಕೆ ಔಟಾಗಿದ್ದು ಆಫ್ರಿಕಾ ತಂಡಕ್ಕೆ ಭಾರಿ ಆಘಾತ ನೀಡಿತು. ಆದರೆ ಈ ಹಂತದಲ್ಲಿ ಜೊತೆಯಾದ ಕ್ವಿಂಟನ್ ಡಿಕಾಕ್ ಮತ್ತು ಮರ್ಕ್ರಾಮ್ ಜೋಡಿ ಆರಂಭಿಕ ಆಘಾತದಿಂದ ತಂಡವನ್ನು ಹೊರತಂದಿತು. ಮರ್ಕ್ರಾಮ್ 33 ರನ್ ಗಳಿಸಿ ಅಕ್ಸರ್ ಪಟೇಲ್ ಬೌಲಿಂಗ್ ನಲ್ಲಿ ಔಟಾದರು.

ಬಳಿಕ ಡಿಕಾಕ್ ಜೊತೆಗೂಡಿದ ಡೇವಿಡ್ ಮಿಲ್ಲರ್ ಅಕ್ಷರಶಃ ಭಾರತೀಯ ಬೌಲರ್‌ಗಳ ಮೇಲೆ ಸವಾರಿ ಮಾಡಿದರು. ಮುರಿಯದ ನಾಲ್ಕನೇ ವಿಕೆಟ್ ಗೆ ಈ ಜೋಡಿ ಶತಕದ ಜೊತೆಯಾಟವಾಡಿತು. 19ನೇ ಓವರ್ ನಲ್ಲಿ 26 ರನ್ ಗಳಿ ಆಫ್ರಿಕಾ ಪಾಳಯದಲ್ಲಿ ಗೆಲುವಿನ ಆಸೆ ಚಿಗುರಿಸಿತು. ಆದರೆ ಅಂತಿಮ ಓವರ್ ನಲ್ಲಿ ಗೆಲ್ಲಲು 37 ರನ್ ಗಳ ಅವಶ್ಯಕತೆ ಇತ್ತು. ಈ ವೇಳೆ ಈ ಜೋಡಿ 20 ರನ್ ಗಳಿಸಿ 16 ರನ್‌ಗಳ ಅಂತರದಲ್ಲಿ ವಿರೋಚಿತ ಸೋಲು ಕಂಡಿತು.

ಮೋದಿಯಿಂದ ದೇಶದಲ್ಲಿ ಅಂತಃಕರಣದ ಆಡಳಿತ

ಮೋದಿ@20 ಕೃತಿ ಕುರಿತು ಸಂವಾದದಲ್ಲಿ ಮಾಜಿ ಸಚಿವ ಸುರೇಶ್‌ಕುಮಾರ್ ಅಭಿಪ್ರಾಯ



ಮಂಡ್ಯ, ಅ.1- ಈ ದೇಶದಲ್ಲಿ ಅಂತಃಕರಣದ ಆಡಳಿತ ನೀಡಿದವರು ನರೇಂದ್ರ ಮೋದಿ ಎಂದು ಮಾಜಿ ಕಾನೂನು ಸಚಿವ ಹಾಗೂ ಶಾಸಕ ಎಸ್.ಸುರೇಶ್‌ಕುಮಾರ್ ಅಭಿಪ್ರಾಯಪಟ್ಟರು.

ನಗರದ ಎಸ್.ಬಿ.ಸಮುದಾಯ ಭವನದಲ್ಲಿ ಜಿಲ್ಲಾ ಬಿಜೆಪಿ ಆಯೋಜಿಸಿದ್ದ ಮೋದಿ @20 ಕೃತಿ ಬಗ್ಗೆ ಸಂವಾದ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಮೋದಿ@20 ಎಂಬ ಈ ಪುಸ್ತಕವು ಮೋದಿಯವರು ಗುಜರಾತ್ ಸಿಎಂ ಆಗಿದ್ದ ಅವಧಿಯಿಂದ ಹಿಡಿದು ಭಾರತದ ಪ್ರಧಾನಿ ಆಗುವವರೆಗೆ ಅಂದರೆ ಮೋದಿಯವರ ಕಳೆದ 20 ವರ್ಷಗಳ ರಾಜಕೀಯ ಜೀವನದ ಪಯಣವನ್ನು ಚಿತ್ರಿಸಲಾಗಿದೆ. ಅವರೊಂದಿಗೆ ಇದ್ದವರು ಮೋದಿ ಅವರನ್ನು ಕಂಡವರು ಲೇಖನಗಳನ್ನು ಬರೆದು ಕೃತಿಯಾಗಿಸಿದ್ದಾರೆ, ಎಲ್ಲರೂ ಓದಿ ಎಂದು ನುಡಿದರು.

ಈ ದೇಶದ ಯುವಕರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಭರವಸೆ ಮತ್ತು ವಿಶ್ವಾಸ. ರಷ್ಯಾ-ಉಕ್ರೇನ್ ಯುದ್ಧದ ವೇಳೆ 20 ಸಾವಿರ ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ಕರೆದುಕೊಂಡು ಬಂದರು. ಹಾಗಾಗಿ ಮೋದಿ20 ಕೃತಿಯಲ್ಲಿ ಬ್ಯಾಡ್ಮಿಂಟನ್ ತಾರೆ ಪಿ.ವಿ.ಸಿಂಧು ಅವರು ತಮ್ಮ ಲೇಖನದಲ್ಲಿ ಮೋದಿ ಯುವಕರ ಕಣ್ಮಣಿ, ಯುವಕರ ಆದರ್ಶ ಎಂದು ಹೇಳಿರುವುದು ಸಮರ್ಥಗ್ರಹಿಕೆ ಎಂದು ನುಡಿದರು.

ಪ್ರಧಾನಿ ನರೇಂದ್ರ ಮೋದಿ ಅವರ ಬಾಲ್ಯದ ಅಪರೂಪದ ಸನ್ನಿವೇಶಗಳು, ಫೋಟೋಗಳನ್ನು ಒಳಗೊಂಡ ಜೀವನ ಚರಿತ್ರೆಯೊಂದು ಬಿಡುಗಡೆಯಾಗಿದೆ. ಕನ್ನಡ ಸೇರಿದಂತೆ 10 ಭಾರತೀಯ ಮತ್ತು 10 ವಿದೇಶಿ ಭಾಷೆಗಳಲ್ಲಿರುವ ಈ ಕೃತಿಯನ್ನು ಕೊರೋನಾ ಹಿನ್ನೆಲೆಯಲ್ಲಿ ಆನ್‌ಲೈನ್ ಕಾರ್ಯಕ್ರಮದ ಮೂಲಕ ಬಿಡುಗಡೆ ಮಾಡಲಾಗಿದೆ ಎಂದು ತಿಳಿಸಿದರು.

ಅಮೆರಿಕದ ಅಧ್ಯಕ್ಷ ಜೋ ಬಿಡೆನ್ ಪ್ರಧಾನಿ ನರೇಂದ್ರ ಮೋದಿ ಅವರನ್ನು ಹುಡುಕಿಕೊಂಡು ಬಂದು ಮಾತಾಡಿಸುತ್ತಾರೆ ಹಾಗೇ ಪಾಕಿಸ್ತಾನದ ಸಚಿವರೊಬ್ಬರು ಮೋದಿಯಂತಹ ನಾಯಕ ನಮಗೂ ಸಿಗಬೇಕಾಗಿತ್ತು ಎಂದಿದ್ದಾರೆ. ಯೋಗ, ಆಯುರ್ವೇದ ಸೇರಿ ಭಾರತದ ಪರಂಪರೆಗೆ ವಿಶ್ವಮಾನ್ಯತೆ ದೊರೆತದ್ದು, ಮೋದಿ ಅವರ ಹೆಗ್ಗಳಿಕೆ ಎಂದು ಬಿಂಬಿಸಿದರು.

ಜೂ.21ರಂದು ಕರೆಕೊಟ್ಟ ವಿಶ್ವ ಯೋಗ ದಿನಕ್ಕೆ ಜಗತ್ತಿನ 195 ರಾಷ್ಟ್ರಗಳ ಪೈಕಿ 192 ರಾಷ್ಟ್ರಗಳು ಆಚರಿಸಿದವು. ಉಳಿದ ಮೂರು ರಾಷ್ಟ್ರಗಳಿಗೆ ಮಾತ್ರ ಯೋಗ ದಿನ ಆಚರಿಸುವ ಯೋಗಾ ಇರಲಿಲ್ಲ ಎಂದರು. ದಲಿತ ಸಮುದಾಯದ ರಾಮನಾಥ್ ಕೋವಿಂದ್, ಈಗ ಆದಿವಾಸಿ ಸಮಾಜದ ದ್ರೌಪದಿ ಮುರ್ಮು ಅವರಿಗೆ ದೇಶದ ಅತ್ಯುನ್ನತ ಸ್ಥಾನ ನೀಡಿದರು. ಇದು ದೀನ ದಲಿತರ ಉದ್ಧಾರದ ಬಗ್ಗೆ ಬರೀ ಮಾತನಾಡದೇ ಅಧಿಕಾರ ನೀಡಿದರು. ಈ ಉದಾತ್ತ ಗುಣವನ್ನು ದೇಶದ ಜನರು ಗಮನಿಸಬೇಕು ಎಂದು ತಿಳಿಸಿದರು.

ಬುದ್ಧಿಜೀವಿಗಳು ಮತ್ತು ತಜ್ಞರು ಬರೆದಿರುವ ತುಣುಕುಗಳ ಸಂಕಲನವಾಗಿರುವ ಈ ಪುಸ್ತಕವು, ಪ್ರಧಾನಿ ಮೋದಿಯವರ ಅನನ್ಯ ಆಡಳಿತ ಮಾದರಿಯ ಖಾತೆಯಲ್ಲಿ ಕಳೆದ 20 ವರ್ಷಗಳಲ್ಲಿ ಗುಜರಾತ್ ಮತ್ತು ದೇಶದ ಮೂಲಭೂತ ಪರಿವರ್ತನೆಯ ಮೇಲೆ ಬೆಳಕು ಚೆಲ್ಲುತ್ತದೆ. ಪುಸ್ತಕವನ್ನು ಬ್ಲೂಕ್ರಾಫ್ಟ್ ಡಿಜಿಟಲ್ ಫೌಂಡೇಶನ್ ಸಂಪಾದಿಸಿದೆ ಎಂದು ನುಡಿದರು. ವೇದಿಕೆಯಲ್ಲಿ ಬಿಜೆಪಿ ಮುಖಂಡರಾದ ಡಾ.ಸಿದ್ದರಾಮಯ್ಯ, ಅಶೋಕ್ ಜಯರಾಂ, ಡಾ.ಸದಾನಂದ, ಜಗದೀಶ್ ಹಿರೇಮನಿ, ನಿತ್ಯಾನಂದ, ಪ.ನ.ಸುರೇಶ್, ಎಚ್.ಆರ್.ಅರವಿಂದ್ ಮತ್ತಿತರರಿದ್ದರು.

ಪುಲ್ವಾಮಾದಲ್ಲಿ ಉಗ್ರ ದಾಳಿ: ಓರ್ವ ಪೊಲೀಸ್ ಹುತಾತ್ಮ, ಸಿಆರ್‌ಪಿಎಫ್ ಯೋಧನಿಗೆ ಗಾಯ

ಪುಲ್ವಾಮಾ: ಪುಲ್ವಾಮಾದಲ್ಲಿ ಸಿಆರ್‌ಪಿಎಫ್ ಮತ್ತು ಜಮ್ಮು ಮತ್ತು ಕಾಶ್ಮೀರ ಪೊಲೀಸರ ಜಂಟಿ ತಂಡದ ಮೇಲೆ ಭಾನುವಾರ ಭಯೋತ್ಪಾದಕರು ಗುಂಡಿನ ದಾಳಿ ನಡೆಸಿದ್ದು, ದಾಳಿಯಲ್ಲಿ ಕರ್ತವ್ಯದಲ್ಲಿದ್ದ ಓರ್ವ ಪೊಲೀಸ್ ಹುತಾತ್ಮರಾಗಿದ್ದಾರೆ ಮತ್ತು ಕೇಂದ್ರೀಯ ಮೀಸಲು ಪೊಲೀಸ್ ಪಡೆ(ಸಿಆರ್‌ಪಿಎಫ್) ಸಿಬ್ಬಂದಿ ಗಾಯಗೊಂಡಿದ್ದಾರೆ.

ಭದ್ರತಾ ಪಡೆಗಳು ಈ ಪ್ರದೇಶವನ್ನು ಸುತ್ತುವರಿದಿದ್ದು, ಭದ್ರತಾ ಪಡೆಗಳಿಗೆ ಸಹಾಯ ಮಾಡಲು ಹೆಚ್ಚಿನ ಪಡೆ ಕಳುಹಿಸಲಾಗಿದೆ ಎಂದು ಕಾಶ್ಮೀರ ವಲಯ ಪೊಲೀಸರು ತಿಳಿಸಿದ್ದಾರೆ. ಪುಲ್ವಾಮಾದ ಪಿಂಗ್ಲಾನಾದಲ್ಲಿ ಸಿಆರ್‌ಪಿಎಫ್ ಮತ್ತು ಪೊಲೀಸರ ಜಂಟಿ ನಾಕಾಬಂಧಿ ಮೇಲೆ ಉಗ್ರರು ಗುಂಡು ಹಾರಿಸಿದ್ದಾರೆ. ಈ ಭಯೋತ್ಪಾದಕ ದಾಳಿಯಲ್ಲಿ ಓರ್ವ ಪೊಲೀಸ್ ಸಿಬ್ಬಂದಿ ಹುತಾತ್ಮರಾಗಿದ್ದು, ಓರ್ವ ಸಿಆರ್ ಪಿಎಫ್ ಸಿಬ್ಬಂದಿ ಗಾಯಗೊಂಡಿದ್ದಾರೆ. ಸ್ಥಳಕ್ಕೆ ಹೆಚ್ಚಿನ ಸಿಬ್ಬಂದಿಯನ್ನು ಕಳುಹಿಸಲಾಗಿದೆ. ಪ್ರದೇಶವನ್ನು ಸುತ್ತುವರಿಯಲಾಗಿದೆ. ಹೆಚ್ಚಿನ ವಿವರಗಳನ್ನು ನಿರೀಕ್ಷಿಸಿ ಎಂದು ಕಾಶ್ಮೀರ ವಲಯ ಪೊಲೀಸರು ಟ್ವೀಟ್ ಮಾಡಿದ್ದಾರೆ.



ಕಾಂಗ್ರೆಸ್ ಪಕ್ಷದ 'ಭಾರತ್ ಜೋಡೋ ಯಾತ್ರೆ' ವರುಣಾ ವಿಧಾನಸಭಾ ಕ್ಷೇತ್ರದ ಬಂಚಳ್ಳಿಹುಂಡಿ- ಚಿ.ಛತ್ರ ಗ್ರಾಮಕ್ಕೆ ಆಗಮಿಸಿದ ಸಂದರ್ಭದಲ್ಲಿ ರಾಹುಲ್ ಗಾಂಧಿಯವರನ್ನು ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯರವರ ಅಧ್ಯಕ್ಷತೆಯಲ್ಲಿ ಮತ್ತು ಮಾಜಿ ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಬಿ.ಎಂ.ರಾಮುರವರ ನೇತೃತ್ವದಲ್ಲಿ ತಮ್ಮ ಮೊಮ್ಮೊಕ್ಕಳಾದ ರಿತೇಷ್ ರಾಕೇಶ್, ಲಹರಿ.ಆರ್ ಕುಮಾರ್, ದಿಗಂತ್ ಗಿರೀಶ್‌ರೊಂದಿಗೆ ಆಹ್ವಾನಿಸಿದರು.



ಮೈಸೂರು ದಸರಾ ಮಹೋತ್ಸವ – 2022



ಪೂರ್ಣ ಪ್ರಮಾಣದ ಜಂಬೂಸವಾರಿ ತಾಲೀಮು ಯಶಸ್ವಿ

ಮೈಸೂರು,ಅ.2(ಎಂಟಿವೈ)– ನಾಡಹಬ್ಬ ದಸರಾ ಪ್ರಮುಖ ಆಕರ್ಷಣೆ ಜಂಬೂಸವಾರಿಗೆ ಗಜಪಡೆ ಹಾಗೂ ಅಶ್ವಪಡೆಗೆ ಭಾನುವಾರ ಕುಶಾಲತೋಪಿನ ಸಿಡಿತದ ಶಬ್ದದೊಂದಿಗೆ ಅಂಬಾರಿಗೆ ಪುಷ್ಪಾರ್ಚನೆ ಮಾಡುವ ತಾಲೀಮನ್ನು ಯಶಸ್ವಿಯಾಗಿ ನಡೆಸಲಾಯಿತು.


ಅರಮನೆಯ ಮುಂಭಾಗದ ಆವರಣದಲ್ಲಿ ಇಂದು ಬೆಳಗ್ಗೆ ನಡೆದ ಜಂಬೂಸವಾರಿಯ ಮೊದಲ ಪೂರ್ಣ ಪ್ರಮಾಣದ ತಾಲೀಮಿನಲ್ಲಿ ಅಂಬಾರಿ ಆನೆ ಅಭಿಮನ್ಯು, ಕುಮ್ಕಿ ಆನೆಗಳಾದ ಕಾವೇರಿ, ಚೈತ್ರ, ಸೇರಿದಂತೆ 11 ಆನೆ, ಅಶ್ವಾರೋಹಿ ದಳದ 34 ಕುದುರೆ, ಪೊಲೀಸ್ ಬ್ಯಾಂಡ್ ವಾದನದ ತಂಡ, 240 ಮಂದಿ ಪೊಲೀಸ್ ಪೇದೆಯುಳ್ಳ 8 ಪೊಲೀಸ್ ತುಕಡಿಗಳು ಪಾಲ್ಗೊಂಡು, ಜಂಬೂಸವಾರಿ ದಿನ ಕ್ರಮಬದ್ಧವಾಗಿ ಸಾಗುವಂತೆ ಹೆಜ್ಜೆ ಹಾಕಿದವು.

ಅರಮನೆಯ ಆವರಣದಲ್ಲಿರುವ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಅವರ ನಿವಾಸದ ಬಳಿಯಿರುವ ಅಂಬಾರಿ ಕಟ್ಟುವ ಸ್ಥಳದಿಂದ ಪೊಲೀಸ್ ತುಕಡಿಯೊಂದಿಗೆ ಅಂಬಾರಿಗೆ ಪುಷ್ಪಾರ್ಚನೆ ಮಾಡುವ ಸ್ಥಳಕ್ಕೆ ಗಜಪಡೆಯನ್ನು ಕರೆತರಲಾಯಿತು. ಅಂಬಾರಿ ಆನೆ ಅಭಿಮನ್ಯುವಿನ ಮೇಲೆ ಪುಷ್ಪಾರ್ಚನೆ ಮಾಡಲು ಮುಂದಾಗುತ್ತಿದ್ದಂತೆ ಪೊಲೀಸ್ ಬ್ಯಾಂಡ್ ತಂಡವು ರಾಷ್ಟ್ರಗೀತೆಯನ್ನು ನುಡಿಸುತ್ತಿದ್ದಂತೆಯೇ ಕೋಟೆ ಮಾರಮ್ಮ ದೇವಾಲಯದ ಬಳಿ ಫಿರಂಗಿ ದಳದ ಸಿಬ್ಬಂದಿ ಕುಶಾಲತೋಪು ಸಿಡಿಸಿದರು. ಈ ವೇಳೆ ಜಂಬೂಸವಾರಿ ಮೆರವಣಿಗೆಯಲ್ಲಿ ಸಾಗುವ ಎಲ್ಲಾ ಆನೆಗಳು ಹಾಗೂ ಅಶ್ವಪಡೆ ಜಗ್ಗದೇ ಶಾಂತ ರೀತಿಯಲ್ಲಿ ಹೆಜ್ಜೆ ಹಾಕುವ ಮೂಲಕ ಜಂಬೂಸವಾರಿಗೆ ಸಜ್ಜಾಗಿರುವ ಸಂದೇಶ ರವಾನಿಸಿದವು. ಇಂದು ನಡೆದ ಪೂರ್ಣ ಪ್ರಮಾಣದ ತಾಲೀಮಿನಲ್ಲಿ ಪುಷ್ಪಾರ್ಚನೆ ಬಳಿಕ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ದ್ವಾರದವರೆಗೆ ಸರದಿ ಸಾಲಿನಲ್ಲಿ ಕರೆದೊಯ್ಯಲಾಯಿತು. ಇಂದು ಎರಡು ಬಾರಿ ತಾಲೀಮು ನಡೆಸಲಾಯಿತು.

ಈ ಸಂದರ್ಭದಲ್ಲಿ ಡಿಸಿಎಫ್ ಡಾ.ವಿ.ಕರಿಕಾಳನ್, ಸಿಎಆರ್ ಡಿಸಿಪಿ ಶಿವರಾಜು, ಅರಮನೆಯ ಭದ್ರತಾ ವಿಭಾಗದ ಎಸಿಪಿ ಚಂದ್ರಶೇಖರ್, ಪಶುವೈದ್ಯ ಡಾ.ಮುಜೀಬ್, ಸಹಾಯಕರಾದ ರಂಗರಾಜು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ನಾಳೆ ಪೂರ್ಣ ಪ್ರಮಾಣದ ತಾಲೀಮು: ಡಿಸಿಎಫ್ ಡಾ.ವಿ.ಕರಿಕಾಳನ್ ಮಾತನಾಡಿ, ಜಂಬೂಸವಾರಿಯ ಮೆರವಣಿಗೆಯ ತಾಲೀಮು ಇಂದು ಯಶಸ್ವಿಯಾಗಿ ನಡೆಸಲಾಗಿದೆ. ಅಂಬಾರಿ ಆನೆ ಸೇರಿದಂತೆ 11 ಆನೆಗಳು ತಾಲೀಮಿನಲ್ಲಿ ಪಾಲ್ಗೊಂಡಿದ್ದವು. ಇಂದು ನಡೆದ ಪುಷ್ಪಾರ್ಚನೆ ವೇಳೆ ಸಿಡಿಮದ್ದು ಸಿಡಿಸಿದ್ದರಿಂದ ಜಂಬೂಸವಾರಿ ದಿನ ಯಾವ ರೀತಿ ಶಬ್ದ ಕೇಳುತ್ತದೆ ಎಂದು ಆನೆಗಳಿಗೆ ಪರಿಚಯವಾದಂತಾಗಿದೆ. ಹಾಗಾಗಿ ಇಂದು ನಡೆದ ಯಶಸ್ವಿ ತಾಲೀಮು ಗಜಪಡೆ ಸಜ್ಜಾಗಲು ಪ್ರೇರಣೆ ನೀಡಿದಂತಾಗಿದೆ. ನಾಳೆ ಅಂತಿಮ ಹಂತ ತಾಲೀಮು ನಡೆಯಲಿದೆ ಎಂದರು.

ಜಂಬೂಸವಾರಿ ಮೆರವಣಿಗೆಯಲ್ಲಿ 9 ರಿಂದ 10 ಆನೆಗಳನ್ನು ಕಳುಹಿಸಲು ನಿರ್ಧರಿಸಲಾಗಿದೆ ನಿಶಾನೆ ಆನೆಯಾಗಿ ಅರ್ಜುನ ಸಾಗಲಿದೆ ನೌಪತ್ ಮಹೇಂದ್ರ, ಭೀಮಾ, ಪಾರ್ಥಸಾರಥಿ, ಸಾಲಾನೆಯಾಗಿ ಗೋಪಿ, ಗೋಪಾಲಸ್ವಾಮಿ, ಧನಂಜಯ ಸಾಗುತ್ತದೆ. ಎಲ್ಲಾ ಆನೆಗಳು ಮೆರವಣಿಗೆಗೆ ಸಜ್ಜಾಗುತ್ತಿವೆ. ಎಲ್ಲವೂ ಆರೋಗ್ಯದಿಂದ ಕೂಡಿವೆ ಎಂದು ತಿಳಿಸಿದರು.



ಡಿಸಿಪಿ ಶಿವರಾಜ್ ಮಾತನಾಡಿ, ಜಂಬೂಸವಾರಿ ದಿನ ಚಿನ್ನದ ಅಂಬಾರಿಗೆ ಪುಷ್ಪಾರ್ಚನೆ ಮಾಡಿದ ಮೇಲೆ ಅನುಮತಿ ಪಡೆದು ಮೆರವಣಿಗೆ ಆರಂಭಿಸಲಾಗುತ್ತದೆ. ಆ ಮಾದರಿಯಲ್ಲಿ ಇಂದು ತಾಲೀಮು ನಡೆಸಲಾಗಿದೆ. ಇಂದು ನಡೆದ ತಾಲೀಮಿನಲ್ಲಿ 240 ಪೇದೆಯುಳ್ಳ 8 ತುಕಡಿಗಳು ಪಾಲ್ಗೊಂಡಿವೆ ಎಂದು ತಿಳಿಸಿದರು.



ಕರಕುಶಲ ಪ್ರಾತ್ಯಕ್ಷಿಕೆ, ಮಕ್ಕಳ ಚಿತ್ರಕಲಾ ಸ್ಪರ್ಧೆ

ಮಕ್ಕಳಿಂದ ಚಿತ್ರ ರಚನೆ; ಪುಟ್ಟ ಪ್ರತಿಭೆ ಅನಾವರಣ

ಮೈಸೂರು,ಅ.2(ಎಂಟಿವೈ)– ನಾಡಹಬ್ಬ ದಸರಾ ಹಿನ್ನೆಲೆಯಲ್ಲಿ ಮೈಸೂರಿನ ಕಲಾಮಂದಿರದ ಆವರಣದಲ್ಲಿ ಶನಿವಾರ ಆಯೋಜಿಸಿದ್ದ 'ಕರಕುಶಲ ಪ್ರಾತ್ಯಕ್ಷಿಕೆ ಮತ್ತು ಮಕ್ಕಳ ಚಿತ್ರಕಲಾ ಸ್ಪರ್ಧೆ'ಯಲ್ಲಿ ನೂರಾರು ಮಕ್ಕಳು ಪಾಲ್ಗೊಂಡು, ವಿವಿಧ ಚಿತ್ರಗಳ ಬರೆದು ಗಮನ ಸೆಳೆದರು.



ಲಲಿತಕಲೆ ಮತ್ತು ಕರಕುಶಲ ಉಪ ಸಮಿತಿ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮವನ್ನು ಇಂದು ಬೆಳಗ್ಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಉದ್ಘಾಟಿಸಿ ಮಾತನಾಡಿ, ಮಕ್ಕಳಲ್ಲಿರುವ ಪ್ರತಿಭೆಯನ್ನು ಅನಾವರಣ ಮಾಡುವುದಕ್ಕಾಗಿ ದಸರಾ ಚಿತ್ರಕಲಾ ಪ್ರದರ್ಶನ ಉತ್ತಮ ವೇದಿಕೆಯಾಗಿ ರೂಪುಗೊಂಡಿದೆ. ಪ್ರದರ್ಶನದಲ್ಲಿ ಪೋಷಕರು, ಶಿಕ್ಷಕರು ಮಕ್ಕಳೊಂದಿಗೆ ಆಗಮಿಸಿ ಚಿತ್ರಕಲಾ ಸ್ಪರ್ಧೆಗೆ ಉತ್ತೇಜನ ನೀಡುತ್ತಿರುವುದು ಶ್ಲಾಘನೀಯ. ನಾಡಹಬ್ಬ ದಸರಾ ಮಹೋತ್ಸವವನ್ನು ಎಲ್ಲಾ ವರ್ಗದ ಜನರು ಆಚರಿಸುವಂತೆ ಮಾಡುವ ನಿಟ್ಟಿನಲ್ಲಿ ಈ ಬಾರಿ ಹಲವು ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಲಾಗಿದೆ. ಮಕ್ಕಳು ತಮ್ಮಲ್ಲಿರುವ ಪ್ರತಿಭೆಯನ್ನು ಚಿತ್ರದ ರೂಪದಲ್ಲಿ ಅನಾವರಣಗೊಳಿಸಿದ್ದಾರೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಎಲ್.ನಾಗೇಂದ್ರ ಮಾತನಾಡಿ, ಮಕ್ಕಳನ್ನು ಉತ್ತೇಜಿಸಲು ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಮಕ್ಕಳ ಭವಿಷ್ಯವನ್ನು ಉಜ್ವಲಗೊಳಿಸುವುದರೊಂದಿಗೆ, ಪಠ್ಯೇತರ ಚಟುವಟಿಕೆಯಲ್ಲಿ ಪಾಲ್ಗೊಳ್ಳಲು ಪ್ರೋತ್ಸಾಹ ನೀಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಅಭಿಪ್ರಾಯಪಟ್ಟರು.

ನೂರಾರು ಮಕ್ಕಳು ಭಾಗಿ: ಚಿತ್ರಕಲಾ ಸ್ಪರ್ಧೆಯಲ್ಲಿ 300ಕ್ಕಿಂತ ಹೆಚ್ಚು ಮಕ್ಕಳು ಪಾಲ್ಗೊಂಡಿದ್ದರು. 1–4ನೇ ತರಗತಿವರೆಗೆ (ಪ್ರಾಣಿ, ಪಕ್ಷಿ, ಪರಿಸರ), 5–7ನೇ ತರಗತಿವರೆಗೆ (ಮೈಸೂರಿನ ಸುಂದರ ತಾಣಗಳು, ಸ್ಮಾರಕಗಳು, ಸಾಧಕರು), 8–10ನೇ ತರಗತಿ ವಿದ್ಯಾರ್ಥಿಗಳಿಗೆ (75ನೇ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವ) ಪ್ರತ್ಯೇಕ ಮೂರು ವಿಭಾಗದಲ್ಲಿ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು.

ಕರಕುಶಲ ಪ್ರದರ್ಶನ : ವೇದಿಕೆ ಕಾರ್ಯಕ್ರಮದ ಬಳಿಕ ಕಲಾಮಂದಿರ ಆವರಣದಲ್ಲಿ ಆಯೋಜಿಸಿದ್ದ ಕರಕುಶಲ ಮೇಳಕ್ಕೆ ಸಚಿವ ಎಸ್.ಟಿ.ಸೋಮಶೇಖರ್ ಚಾಲನೆ ನೀಡಿ, ಮಳಿಗೆಯನ್ನು ವೀಕ್ಷಿಸಿದರು. ಚರಕದಿಂದ ತಯಾರಿಸಿದ 23 ಟವೆಲ್, ಗೊಂಬೆಗಳು, ಮಣ್ಣಿನ ದೀಪಗಳು, ಬಿದಿರಿನಿಂದ ತಯಾರಿಸಿದ ಕೀ ಬಂಚ್‌ಗಳನ್ನು ಖರೀದಿಸಿ ಸಮಿತಿಯ ಸದಸ್ಯರಿಗೆ ಉಡುಗೊರೆಯಾಗಿ ನೀಡಿದರು. ಪ್ರದರ್ಶನದಲ್ಲಿದ್ದ ಕಿನ್ನಾಳ ಕಲೆ, ಕೌದಿ ಮತ್ತು ಕಸೂತಿ ಕಲೆ, ಕುಂಬಾರಿಕೆ, ಇನ್ಲೆ ಆರ್ಟ್, ಚರಕದಿಂದ ನೂಲುವಿಕೆ, ಕೈಮಗ್ಗದ ನೇಕಾರಿಕೆ, ವರ್ಲಿ ಆರ್ಟ್, ಚನ್ನಪಟ್ಟಣ ಗೊಂಬೆ ತಯಾರಿಕೆ, ಬಿದಿರು– ಬೆತ್ತದ ಬುಟ್ಟಿ ಹೆಣಿಗೆ, ಮದರಂಗಿ ಕಲೆ, ವ್ಯಂಗ್ಯ ಚಿತ್ರಕಲೆ, ಸೂಕ್ಷ್ಮ ಕಲೆ ಪ್ರದರ್ಶನ, ಕರಕುಶಲ ಪ್ರಾತ್ಯಕ್ಷಿಕೆ ಮಳಿಗೆಗಳನ್ನು ವೀಕ್ಷಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಲಲಿತಕಲೆ ಮತ್ತು ಕರಕುಶಲ ಉಪ ಸಮಿತಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಚಾಮುಂಡಿಬೆಟ್ಟ ಹತ್ತಿ ನಗದು ಬಹುಮಾನ ಗೆದ್ದ ಮಕ್ಕಳು

ಮೈಸೂರು, ಅ.2(ಆರ್‌ಕೆ)–ಮೈಸೂರಿನ ಚಾಮುಂಡಿಬೆಟ್ಟದ ಮೆಟ್ಟಿಲುಗಳನ್ನೇರಿ ಶಾಲಾ–ಕಾಲೇಜು ಮಕ್ಕಳು ನಗದು ಬಹುಮಾನ ಗೆದ್ದು ಬೀಗಿದರು.



ದಸರಾ ಮಹೋತ್ಸವದ ಅಂಗವಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ ಹಾಗೂ ದಸರಾ ಸಾಹಸೋತ್ಸವ ಉಪ ಸಮಿತಿ ಸಂಯುಕ್ತಾಶ್ರಯದಲ್ಲಿ ಇಂದು ಬೆಳಗ್ಗೆ ಆಯೋಜಿಸಿದ್ದ ಚಾಮುಂಡಿಬೆಟ್ಟ ಹತ್ತುವ ಸ್ಪರ್ಧೆಯಲ್ಲಿ 300ಕ್ಕೂ ಹೆಚ್ಚು ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡಿದ್ದರು.

ಬೆಳಗ್ಗೆ 7.30 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಆರಂಭವಾದ ಸ್ಪರ್ಧೆಯನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹೆಚ್ಚುವರಿ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಉದ್ಘಾಟಿಸಿದರು. ಪುರುಷರ ವಿಭಾಗದಲ್ಲಿ ಅನಿಲ್ ಕುಮಾರ್ ಪ್ರಥಮ, ತಿರುಮಲ ದ್ವಿತೀಯ ಹಾಗೂ ಗೌತಮ್ ತೃತೀಯ ಬಹುಮಾನ ಪಡೆದರು. ಮಹಿಳೆಯರ ವಿಭಾಗದಲ್ಲಿ ಉಷಾ (ಪ್ರಥಮ), ನೀಲಮ್ಮ (ದ್ವಿತೀಯ) ಹಾಗೂ ಭೂಮಿಕ (ತೃತೀಯ) ಅವರು ವಿಜೇತರಾದರು.

16 ವರ್ಷದೊಳಗಿನ ಕಿರಿಯ ಬಾಲಕರ ವಿಭಾಗದಲ್ಲಿ ವರುಣ್ ಬಿ.ರಾಜು, ದಿನೇಶ ಮತ್ತು ಗುರುಪ್ರಸಾದ್ ಕ್ರಮವಾಗಿ ಪ್ರಥಮ, ದ್ವಿತೀಯ, ತೃತೀಯ ಸ್ಥಾನ ಗಳಿಸಿದರೆ, ಕಿರಿಯ ಬಾಲಕಿಯರ ವಿಭಾಗದಲ್ಲಿ ಸೋನಿಕ ಪ್ರಥಮ, ದೀಪಿಕಾ ದ್ವಿತೀಯ ಮತ್ತು ವಂದನಾ ತೃತೀಯ ಬಹುಮಾನ ಗಳಿಸಿದರು. ಪುರುಷರು ಮತ್ತು ಮಹಿಳೆಯರ ವಿಭಾಗದಲ್ಲಿ ಪ್ರಥಮ ಸ್ಥಾನ ಗಳಿಸಿದವರಿಗೆ 5,000 ರೂ., ದ್ವಿತೀಯ 3,000 ರೂ. ಹಾಗೂ ತೃತೀಯ 2,000 ರೂ. ನಗದು ಬಹುಮಾನ, ಮೆಡಲ್ ಹಾಗೂ ಪ್ರಮಾಣ ಪತ್ರ ನೀಡಿ ಗೌರವಿಸಲಾಯಿತು.

ಕಿರಿಯ ಬಾಲಕ, ಬಾಲಕಿಯರ ವಿಭಾಗದಲ್ಲಿ ವಿಜೇತರಾದವರಿಗೆ 3,000 ರೂ. (ಪ್ರಥಮ), 2,000 ರೂ. (ದ್ವಿತೀಯ), ಹಾಗೂ 1,000 ರೂ. (ತೃತೀಯ) ನಗದು ಬಹುಮಾನ, ಮೆಡಲ್ ಹಾಗೂ ಪ್ರಮಾಣ ಪತ್ರ ವಿತರಿಸಲಾಯಿತು. ಚಾಮುಂಡಿಬೆಟ್ಟದ ಸರ್ಕಾರಿ ಶಾಲೆ ಬಳಿ ದಸರಾ ಸಾಹಸೋತ್ಸವ ಉಪ ಸಮಿತಿ ಉಪಾಧ್ಯಕ್ಷ ಶಿವರಾಜ್ ಅವರು ಚಾಮುಂಡಿಬೆಟ್ಟ ಹತ್ತುವ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ಪ್ರದಾನ ಮಾಡಿದರು.

ದಸರಾ ಕ್ರೀಡಾ ಉಪ ಸಮಿತಿ ಕಾರ್ಯದರ್ಶಿ ಹಾಗೂ ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಟಿ.ಆರ್. ರೋಹಿತ್ ಗಂಗಾಧರ್, ಜಂಟಿ ನಿರ್ದೇಶಕ ಸುಭಾಷ್ ಚಂದ್ರ ಸಹಾಯಕ ನಿರ್ದೇಶಕ (ಶಿವಮೊಗ್ಗ) ಮಂಜುನಾಥಸ್ವಾಮಿ, ರಾಮನಗರ ಶಿಲಾರೋಹಣ ಕೇಂದ್ರದ ವ್ಯವಸ್ಥಾಪಕ ಮುನಿರಾಜ್, ದಸರಾ ಕ್ರೀಡಾ ಉಪ ಸಮಿತಿ ಅಧ್ಯಕ್ಷ ಸುಬ್ಬಣ್ಣ ಕುಬ್ಬಳ್ಳಿ, ಉಪಾಧ್ಯಕ್ಷರಾದ ಶಿವರಾಜ್, ನಾಗಣ್ಣಗೌಡ, ಸದಸ್ಯರಾದ ಎನ್.ವಿ.ವಿನಯ್ ಕುಮಾರ್, ಡಿ.ಪಿ.ಚೇತನ್ ಹಾಗೂ ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಬೆಟ್ಟ ಹತ್ತುವ ಸ್ಪರ್ಧೆಯಲ್ಲಿ ಆಂಬುಲೆನ್ಸ್, ಕುಡಿಯುವ ನೀರು, ಉಪಾಹಾರ ವ್ಯವಸ್ಥೆ ಮಾಡಲಾಗಿತ್ತು ನಿತ್ಯ ಬೆಟ್ಟ ಹತ್ತುವ ವಾಯುವಿಹಾರಿಗಳೂ ಸಹ ಈ ಸಂದರ್ಭ ಭಾಗವಹಿಸಿದ್ದರು.

ಮೈಸೂರಿನ ಹಲವು ರಸ್ತೆಗಳಲ್ಲಿ ಸಂಚಾರ ನಿರ್ಬಂಧ

ಟ್ರಾಫಿಕ್ ಜಾಮ್‌ನಿಂದ ವಾಹನ ಸವಾರರ ಪರದಾಟ



ಮೈಸೂರು, ಅ.2(ಎಂಟಿವೈ)– ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆಯುತ್ತಿರುವ ಭಾರತ ಐಕ್ಯತಾ ಯಾತ್ರೆ ಮೈಸೂರು ತಲುಪಿರುವ ಹಿನ್ನೆಲೆ ಹಾಗೂ ನಾಡಹಬ್ಬ ದಸರಾ ಮಹೋತ್ಸವ ಅಂಗವಾಗಿ ಕೆಲವು ರಸ್ತೆಗಳಲ್ಲಿ ವಾಹನ ಸಂಚಾರದಲ್ಲಿ ಮಾರ್ಪಾಡು ಮಾಡಿರುವುದರಿಂದ ಸಾಂಸ್ಕೃತಿಕ ನಗರಿ ಮೈಸೂರಿನ ಹೃದಯ ಭಾಗದಲ್ಲಿ ಭಾನುವಾರ ವಾಹನ ಹಾಗೂ ಜನ ಸಂಚಾರಕ್ಕೆ ತೀವ್ರ ಅಡಚಣೆಯುಂಟಾಗಿ ಸಾರ್ವಜನಿಕರು ಪರದಾಡುವಂತಾಯಿತು.

ವಾರಾಂತ್ಯದ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ನಗರಿ ಮೈಸೂರಿಗೆ ಪ್ರವಾಸಿಗರು ಲಗ್ಗೆ ಇಟ್ಟಿದ್ದು, ಎಲ್ಲೆಡೆ ಪ್ರವಾಸಿಗರಿಂದ ಮೈಸೂರು ತುಂಬಿ ತುಳುಕುತ್ತಿದೆ. ಇದರೊಂದಿಗೆ ನಾಡಹಬ್ಬ ದಸರಾ ಮಹೋತ್ಸವ ವಿವಿಧ ಕಾರ್ಯಕ್ರಮ ವೀಕ್ಷಣೆಗೆ ವಿವಿಧೆಡೆಯಿಂದ ಜನರು ನಗರದ ಹೃದಯ ಭಾಗಕ್ಕೆ ಆಗಮಿಸಿದ್ದರಿಂದ ರಸ್ತೆಗಳಲ್ಲಿ ಜನ ಹಾಗೂ ವಾಹನ ಸಂಚಾರ ಹೆಚ್ಚಾಗಿತ್ತು. ಇದೇ ವೇಳೆ ಭಾರತ ಐಕ್ಯತಾ ಯಾತ್ರೆ ನಡೆಸುತ್ತಿರುವ ರಾಹುಲ್ ಗಾಂಧಿ ನೂರಾರು ಬೆಂಬಲಿಗರೊಂದಿಗೆ ಮೈಸೂರು ಪ್ರವೇಶಿಸಿದ್ದು, ಭದ್ರತಾ ದೃಷ್ಟಿಯಿಂದ ಮೈಸೂರು–ನಂಜನಗೂಡು ಮುಖ್ಯ ರಸ್ತೆಯಲ್ಲಿ ವಾಹನ ಸಂಚಾರ ನಿರ್ಬಂಧ ಹಾಗೂ ಹಾರ್ಡಿಂಗ್ ವೃತ್ತ, ಬಿಎನ್ ರಸ್ತೆಯಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿತ್ತು. ಇದರಿಂದ ಹೃದಯ ಭಾಗದಲ್ಲಿ ಸಂಚಾರ ವ್ಯವಸ್ಥೆಯಲ್ಲಿ ಅವ್ಯವಸ್ಥೆ ಉಂಟಾಗಿ ಜನ ಪರಿತಪಿಸಿದರು.

ಜನರ ಮಧ್ಯೆ ದಸರಾ ಗಜಪಡೆಯ ತಾಲೀಮು: ಮಳೆ ಹಿನ್ನೆಲೆಯಲ್ಲಿ ಕಳೆದ ಎರಡು ದಿನಗಳಿಂದ ಅರಮನೆ ಆವರಣದಲ್ಲೇ ತಾಲೀಮು ನಡೆಸಿದ್ದ ದಸರಾ ಗಜಪಡೆಯನ್ನು ಇಂದು ಜಂಬೂಸವಾರಿ ಮಾರ್ಗದಲ್ಲಿ ತಾಲೀಮಿಗೆ ಕರೆದೊಯ್ಯಲಾಗಿತ್ತು. ಸಂಜೆ ವೇಳೆ ಅರಮನೆಯಿಂದ ಹೊರ ಬಂದಿದ್ದ ಗಜಪಡೆ, ಅರಮನೆಗೆ ವಾಪಸ್ಸಾಗುವಾಗ ಜನ ಜಂಗುಳಿ ನಡುವೆಯೇ ಸಾಗಬೇಕಾದ ಅನಿವಾರ್ಯತೆ ಎದುರಾಯಿತು. ಒಂದೆಡೆ ಟ್ರಾಫಿಕ್ ಜಾಮ್‌ನಿಂದ ಕಂಗೆಟ್ಟಿದ್ದ ಜನ ರಸ್ತೆಯಲ್ಲೇ ಸಂಚರಿಸಲಾರಂಭಿಸಿದರು. ಈ ಸಂದರ್ಭದಲ್ಲಿ ದಸರಾ ಗಜಪಡೆ ಜನರ ನಡುವೆ ಹೆಜ್ಜೆ ಹಾಕಿ ಗಮನ ಸೆಳೆದವು.

ಗಂಟೆ ಗಟ್ಟಲೇ ನಿಂತಲ್ಲೇ ನಿಂತ ವಾಹನ: ಟ್ರಾಫಿಕ್ ಜಾಮ್‌ನಿಂದಾಗಿ ಅರಮನೆ ಸುತ್ತಲಿನ ರಸ್ತೆ, ಡಿ.ದೇವರಾಜ ಅರಸು ರಸ್ತೆ, ಸಯ್ಯಾಜಿರಾವ್ ರಸ್ತೆ, ಚಾಮರಾಜ ಜೋಡಿ ರಸ್ತೆ, ಜೆಎಲ್‌ಬಿ ರಸ್ತೆ, ಮಿರ್ಜಾ ಇಸ್ಮಾಯಿಲ್ ರಸ್ತೆ, ನಜರ್‌ಬಾದ್ ರಸ್ತೆ, ಲಲಿತಮಹಲ್ ರಸ್ತೆ, ಇರ್ವಿನ್ ರಸ್ತೆ ಸೇರಿದಂತೆ ವಿವಿಧ ರಸ್ತೆಗಳಲ್ಲಿ ಗಂಟೆ ಗಟ್ಟಲೇ ವಾಹನಗಳು ರಸ್ತೆಯಲ್ಲೇ ನಿಂತಲ್ಲೇ ನಿಲ್ಲುವಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ವಾರಾಂತ್ಯ ರಜೆಯನ್ನು ಕಳೆಯಲು ಮೈಸೂರಿನ ಬಂದಿದ್ದ ಪ್ರವಾಸಿಗರು ಪರದಾಡಿದರೆ, ಸ್ಥಳೀಯರು ಸುಗಮ ಸಂಚಾರಕ್ಕೆ ತೊಡಕಾಗಿ ಕಂಗೆಟ್ಟರು. ಟ್ರಾಫಿಕ್ ಜಾಮ್‌ನಿಂದಾಗಿ ಕೆಲವು ಆಂಬುಲೆನ್ಸ್‌ಗಳ ಸಂಚಾರಕ್ಕೂ ಅಡಚಣೆ ಉಂಟಾಗಿತ್ತು.

ಮೈಸೂರು ವಿವಿ ಹಾಕಿ ಮೈದಾನದಲ್ಲಿ ಮುದ್ದು ಶ್ವಾನಗಳದ್ದೇ ಕಾರುಬಾರು



ಮೈಸೂರು,ಅ.2(ಎಂಟಿವೈ)– ಮೈಸೂರು ವಿಶ್ವವಿದ್ಯಾನಿಲಯ ಪೆವಿಲಿಯನ್ ಹಾಕಿ ಮೈದಾನದಲ್ಲಿ ಭಾನುವಾರ ಮುದ್ದು ಶ್ವಾನಗಳದ್ದೇ ಕಾರುಬಾರು. ಎಲ್ಲಿ ನೋಡಿದರೂ ಬಣ್ಣ ಬಣ್ಣದ ಶ್ವಾನಗಳು ಮೈಮಾಟದಿಂದ ನೋಡುಗರನ್ನು ಮಂತ್ರಮುಗ್ಧಗೊಳಿಸಿ ಕಣ್ಮನ ಸೆಳೆದವು.



ನಾಡಹಬ್ಬ ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ರೈತ ದಸರಾ ಉಪ ಸಮಿತಿಯು ಮೈಸೂರು ವಿವಿಯ ಹಾಕಿ ಮೈದಾನದಲ್ಲಿ ಆಯೋಜಿಸಿದ್ದ 'ಸಾಕು ಪ್ರಾಣಿಗಳ ಪ್ರದರ್ಶನ'ದಲ್ಲಿ ಸುಮಾರು 32 ಬಗೆಯ 480 ಶ್ವಾನಗಳು ಪಾಲ್ಗೊಂಡು ಶ್ವಾನ ಪ್ರಿಯರನ್ನು ಪುಳಕಿತರನ್ನಾಗಿಸಿದವು. ಶ್ವಾನಗಳನ್ನು ನೋಡಲೆಂದೇ ವಿವಿಧೆಡೆಗಳಿಂದ ಆಗಮಿಸಿದ್ದ ಅಪಾರ ಸಂಖ್ಯೆಯ ಪ್ರಾಣಿ ಪ್ರಿಯರು ಶ್ವಾನಗಳನ್ನು ಕಂಡು ಮೂಕವಿಸ್ಮಿತರಾದರು. ಸ್ಪರ್ಧೆಯಲ್ಲಿ ಮೈಸೂರಿನ ವಿವಿಧ ಬಡಾವಣೆಗಳಲ್ಲದೆ, ಬೆಂಗಳೂರು, ಮಡಿಕೇರಿ, ಕೇರಳ, ತಮಿಳುನಾಡು ಸೇರಿದಂತೆ ವಿವಿಧೆಡೆಗಳಿಂದ ಕರೆತರಲಾಗಿದ್ದ ಶ್ವಾನಗಳು ಪ್ರದರ್ಶನದಲ್ಲಿ ತಮ್ಮ ಬುದ್ಧಿವಂತಿಕೆಯನ್ನು ಪ್ರದರ್ಶಿಸಿ ಸೈ ಎನಿಸಿಕೊಂಡವು.

ಪ್ರದರ್ಶನದಲ್ಲಿ ಮೂರು ಕೆಜಿ ತೂಕದ ಮಿನಿಯೇಚರ್ ಪಿಂಚರ್ ತಳಿಯ ಶ್ವಾನದಿಂದ ಹಿಡಿದು 130 ಕೆಜಿ ತೂಕದ ಸೆಂಟ್ ಬರ್ನಾಡ್, ಗ್ರೇಟ್ ಡೇನ್ ಸೇರಿದಂತೆ ಇನ್ನಿತರ ತಳಿಗಳ ಶ್ವಾನಗಳು ಪಾಲ್ಗೊಂಡಿದ್ದವು. ಅಲ್ಲದೆ 20 ಸಾವಿರ ಬೆಲೆ ಬಾಳುವ ಶ್ವಾನದಿಂದ ಒಂದು ಲಕ್ಷ ರೂ. ಬೆಲೆಬಾಳುವ ಶ್ವಾನಗಳು ಆಕರ್ಷಣೀಯ ಕೇಂದ್ರ ಬಿಂದುವಾಗಿದ್ದವು.

ಪ್ರದರ್ಶನದಲ್ಲಿ ವಿವಿಧ ವಿಭಾಗಗಳಲ್ಲಿ ಕಾರ್ವನ್ ಹೌಂಡ್, ಮುಧೋಳ್, ರಾಜಪಾಳ್ಯಂ, ವಿಪೆಟ್, ಪಗ್, ಶಿಜು ಟುಜ್ಸ್, ಇಂಗ್ಲೀಷ್ ಕುಕರ್ ಸ್ಪಾನಿಲ್, ಗೋಲ್ಡನ್ ರಿಟ್ರೀವರ್, ಲ್ಯಾಬ್ರಡಾರ್ ರಿಟ್ರೀವರ್, ಬೀಗಲ್, ಅಕಿಟ, ಚೌಚೌ, ಪೊಮೆರಿಯನ್, ಸೈಬೀರಿಯನ್ ಹಸ್ಕಿ, ಡಾಶ್‌ಹೌಂಡ್ ಮಿನಿಯೇಚರ್, ಡಾಶ್‌ಹೌಂಡ್ ಸ್ಟಾಂಡರ್ಡ್, ಬುಲ್ ಟೆರಿರ್, ಬಾಕ್ಸರ್, ಬುಲ್ಡಾಗ್, ಡಾಬರ್‌ಮನ್, ಗ್ರೇಟ್‌ಡೇನ್, ರಾಟ್‌ವೀಲರ್, ಸೇಂಟ್ ಬರ್ನಾಡ್, ಜೆರ್ಮನ್ ಶೆಫರ್ಡ್ ಸೇರಿದಂತೆ ಇನ್ನಿತರ ತಳಿಗಳ ಶ್ವಾನಗಳು ಸ್ಪರ್ಧೆಯಲ್ಲಿ ಪಾಲ್ಗೊಂಡವು. ಗಂಡು, ಹೆಣ್ಣು ಹಾಗೂ ಮರಿಗಳ ವಿಭಾಗದಲ್ಲಿ ಒಟ್ಟು 28 ಬಗೆಯ ಸ್ಪರ್ಧೆ ಆಯೋಜಿಸಲಾಗಿತ್ತು. ಪ್ರತಿಯೊಂದು ತಳಿಯ ಶ್ವಾನಕ್ಕೂ ಅದರದೇ ಆದ, ಗುಣಲಕ್ಷಣಗಳಿದ್ದು, ಅದರ ಆಧಾರದ ಮೇಲೆ, ಮಾಲೀಕರ ಸೂಚನೆ ಪಾಲನೆ, ಆರೋಗ್ಯ ಸೇರಿದಂತೆ ವಿವಿಧ ಆಯಾಮದಲ್ಲಿ ಸ್ಪರ್ಧೆ ನಡೆಸಲಾಯಿತು.



ಚಾರ್ಲಿ 777 ಭಾಗಿ: ಸಾಕು ಪ್ರಾಣಿಗಳ ಪ್ರದರ್ಶನದಲ್ಲಿ ಚಾರ್ಲಿ 777 ಚಿತ್ರದಲ್ಲಿ ಮನೋಜ್ಞವಾಗಿ ಅಭಿನಯಿಸಿರುವ ಶ್ವಾನವು ಪಾಲ್ಗೊಂಡಿದ್ದು ವಿಶೇಷ. ವೇದಿಕೆ ಮೇಲೆ ಚೇರ್ ಮೇಲೆ ಆಸೀನವಾಗಿ ಸಭಿಕರತ್ತ ದೃಷ್ಟಿ ಬೀರುತ್ತ ಚಾರ್ಲಿ ಎಲ್ಲರ ಪ್ರೀತಿಯನ್ನು ಸಂಪಾದಿಸಿತು. ನೂರಾರು ಮಂದಿ ಚಾರ್ಲಿಯೊಂದಿಗೆ ಫೋಟೋ ತೆಗೆಸಿಕೊಂಡು ಸಂಭ್ರಮಿಸಿದರು. ಇದೇ ವೇಳೆ ಚಾರ್ಲಿ ಚಿತ್ರ ತಂಡವು ಪಾಲ್ಗೊಂಡಿತ್ತು.


ಮುಂಜಾಗ್ರತಾ ಕ್ರಮ: ಸಾಕು ಪ್ರಾಣಿಗಳ ಪ್ರದರ್ಶನದಲ್ಲಿ ಮುಂಜಾಗ್ರತಾ ಕ್ರಮವಾಗಿ ತಾತ್ಕಾಲಿಕ ಚಿಕಿತ್ಸಾ ಕೇಂದ್ರ ಸ್ಥಾಪಿಸಲಾಗಿತ್ತು. ಅಲ್ಲದೆ, ಶ್ವಾನಗಳು ಬಿಸಿಲಿನ ಬೇಗೆಯಿಂದ ಪರದಾಡುವುದನ್ನು ರಕ್ಷಿಸಲು ನೀರಿನ ವ್ಯವಸ್ಥೆ ಮಾಡಲಾಗಿತ್ತು. ಐಷಾರಾಮಿ ಕಾರ್‌ಗಳಲ್ಲಿ ತಮ್ಮ ಶ್ವಾನವನ್ನು ತಂದಿದ್ದ ಪ್ರಾಣಿಪ್ರಿಯರು ಕಾಲ ಕಾಲಕ್ಕೆ ನೀರನ್ನು ಸ್ಪ್ರೇ ಮಾಡಿ, ಶ್ವಾನಗಳನ್ನು ಬಿಸಿಲಿನ ಬೇಗೆಯಿಂದ ಕಾಪಾಡುತ್ತಿದ್ದರು.


ಚಾಲನೆ: ಇದಕ್ಕೂ ಮುನ್ನ ಶ್ವಾನ ಪ್ರದರ್ಶನವನ್ನು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮುಖಂಡ ಬಿ.ಪಿ.ಮಂಜುನಾಥ್, ಪಶುಪಾಲನ ಇಲಾಖೆ ಉಪ ನಿರ್ದೇಶಕ ಷಡಕ್ಷರಿ ಮೂರ್ತಿ, ದಸರಾ ರೈತ ಉಪಸಮಿತಿ ಅಧ್ಯಕ್ಷ ಮಹೇಶ್, ಉಪಾಧ್ಯಕ್ಷರಾದ ಸ್ವಾಮಿಗೌಡ, ರಮೇಶ್, ಸದಸ್ಯರಾದ ರವಿ ಗಂಡತೂರು, ಸುರೇಶ್, ಕುಮಾರ, ಮೋನಿಕಾ, ಬಸವರಾಜು, ಸುರೇಶ್, ಕೆ.ಪಿ.ಕುಮಾರ್‌ಗೌಡ, ಕೃಷ್ಣಮಾದೇಗೌಡ, ಪ್ರೇಮಾ ಸೇರಿದಂತೆ ಇನ್ನಿತರು ಪಾಲ್ಗೊಂಡಿದ್ದರು.













ಮೈಸೂರು ಮಿತ್ರ

ಸೋಮವಾರ 3 ಅಕ್ಟೋಬರ್ 2022



ಬದನವಾಳುವಿನಲ್ಲಿ ಗಾಂಧಿ ಪ್ರತಿಮೆಗೆ ರಾಹುಲ್‌ಗಾಂಧಿ ನಮನ



ಬದನವಾಳಿನ ಖಾದಿ ಗ್ರಾಮೋದ್ಯೋಗ ಕೇಂದ್ರದಲ್ಲಿ ಭಜನ ನಿರತ ಕಾಂಗ್ರೆಸ್ ನಾಯಕರು.



ನಂಜನಗೂಡಿನ ಶ್ರೀಕಂಠೇಶ್ವರ ಸ್ವಾಮಿ ದೇವಾಲಯದಲ್ಲಿ ರಾಹುಲ್‌ಗಾಂಧಿ ಹಾಗೂ ಸಿದ್ದರಾಮಯ್ಯ

ಬದನವಾಳಿನಲ್ಲಿ ಸೌಹಾರ್ದತೆ ಮೂಡಿಸಿದ ರಾಹುಲ್ ಗಾಂಧಿ

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್

ನಂಜನಗೂಡು, ಅ.2(ರಂಗಸ್ವಾಮಿ)– ಗಾಂಧೀ ಜಯಂತಿಯ ಪುಣ್ಯದಿನದಂದು ರಾಹುಲ್ ಗಾಂಧಿಯವರು ಐಕ್ಯತಾ ಯಾತ್ರೆಯ ಮೂಲಕ ಇಡೀ ದೇಶದಲ್ಲಿ ಮೊದಲ ಬಾರಿಗೆ ಸವರ್ಣೀಯರು ಮತ್ತು ದಲಿತರ ಮಧ್ಯೆ ಇರುವ ಭೇದ–ಭಾವವನ್ನು ಅಳಿಸಿ ಭ್ರಾತೃತ್ವ, ಸೌಹಾರ್ದತೆ ಮೂಡಿಸುವ ಕೆಲಸಕ್ಕೆ ಮುಂದಾಗಿದ್ದಾರೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಅವರು ತಾಲೂಕಿನ ಬದನವಾಳು ಗ್ರಾಮದ ಖಾದಿ ಗ್ರಾಮೋದ್ಯೋಗ ಕೇಂದ್ರದಲ್ಲಿ ರಾಹುಲ್‌ಗಾಂಧಿಯವರೊಡನೆ ಗಾಂಧಿ ಜಯಂತಿ ಆಚರಿಸಿದ ಬಳಿಕ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದರು.

ರಾಹುಲ್‌ಗಾಂಧಿ ತಮ್ಮ ಪಾದಯಾತ್ರೆಯನ್ನು ಅರ್ಧ ದಿನ ಮೊಟಕುಗೊಳಿಸಿ ಗಾಂಧೀಜಿರವರು ಭೇಟಿ ನೀಡಿದ್ದ ಐತಿಹಾಸಿಕ ಕ್ಷೇತ್ರದಲ್ಲಿ ಗಾಂಧಿ ಜಯಂತಿ ಆಚರಿಸಿರುವುದು ಚರಿತ್ರೆಯಲ್ಲಿ ಐತಿಹಾಸಿಕ ದಿನವಾಗಿದೆ. ಬದನವಾಳು ಗ್ರಾಮದಲ್ಲಿ 1993ರಲ್ಲಿ ನಡೆದ ಘರ್ಷಣೆಯಿಂದ ಸವರ್ಣೀಯರು ಮತ್ತು ದಲಿತರ ನಡುವೆ ಭೇದ–ಭಾವ ಉಂಟಾಗಿ, ಒಂದು ಕೇರಿಯಿಂದ ಮತ್ತೊಂದು ಕೇರಿಗೆ ಸಂಪರ್ಕ ಕಲ್ಪಿಸುವ ರಸ್ತೆ ಮುಚ್ಚಲಾಗಿತ್ತು. ರಾಹುಲ್‌ಗಾಂಧಿರವರು ಎರಡೂ ಕೋಮಿನ ಮುಖಂಡರೊಡನೆ ಮಾತುಕತೆ ನಡೆಸಿ ಸಮಸ್ಯೆ ಆಲಿಸಿ ಸಂಪರ್ಕ ರಸ್ತೆಯನ್ನು ಸ್ವಚ್ಛಗೊಳಿಸುವ ಮೂಲಕ ಸವರ್ಣೀಯರು ಮತ್ತು ದಲಿತರನ್ನು ಒಂದುಗೂಡಿಸುವ ಪ್ರಯತ್ನಕ್ಕೆ ದೇಶದಲ್ಲಿ ಮೊದಲಬಾರಿಗೆ ಮುನ್ನುಡಿ ಬರೆದಿದ್ದಾರೆ. ಎರಡೂ ಕೋಮಿನ ಮುಖಂಡರ ನಡುವಿನ ವೈಮನಸ್ಸನ್ನು ತಿಳಿಗೊಳಿಸಿ, ಸಹಪಂಕ್ತಿ ಭೋಜನ ಸ್ವೀಕರಿಸಿ ಐಕ್ಯತೆ ಮೂಡಿಸುವ ಕೆಲಸ ಮಾಡಿದ್ದಾರೆ. ಅಲ್ಲದೆ ಗ್ರಾಮದಲ್ಲಿ ಹಳೆ ಮನೆಗಳಿಗೆ ಬಣ್ಣ ಬಳಿಸುವ ಕೆಲಸವನ್ನು ಮಾಡಲಾಗಿದೆ ಎಂದರಲ್ಲದೆ, ಈ ಪಾದಯಾತ್ರೆ ದೇಶವನ್ನು ಒಂದುಗೂಡಿಸುವ ಐಕ್ಯತಾ ಪಾದಯಾತ್ರೆಯಾಗಿದೆ ಎಂದರು.

ಕಾಂಗ್ರೆಸ್ ಪಕ್ಷದ ಐಕ್ಯತಾ ಯಾತ್ರೆಯು ಅಪಾರ ಜನಬೆಂಬಲದೊಂದಿಗೆ ಮುನ್ನಡೆಯುವುದನ್ನು ಕಂಡು ಬಿಜೆಪಿ ನಾಯಕರು ಹೊಟ್ಟೆಕಿಚ್ಚು ಪಡುತ್ತಿದ್ದಾರೆ. ಪ್ರಾಣಕೊಟ್ಟು ಬಲಿದಾನ ಮಾಡಿ ದೇಶ ಕಟ್ಟುವ ಕೆಲಸ ಮಾಡಿದ ಪಕ್ಷಕ್ಕೆ ಬಿಜೆಪಿ ನಾಯಕರು ಕಪ್ಪು ಬಾವುಟ ಪ್ರದರ್ಶನಕ್ಕೆ ಮುಂದಾಗಿದ್ದಾರೆಂಬ ಬಗ್ಗೆ ನನಗೆ ಮಾಹಿತಿ ಇದೆ. ಮೊಟ್ಟೆ, ಕಲ್ಲು, ಕಪ್ಪುಬಾವುಟ ಪ್ರದರ್ಶನಕ್ಕೆ ಎಂದೂ ಹೆದರುವುದಿಲ್ಲ, ಪೊಲೀಸ್ ಕಮಿಷನರ್ ಬಳಿ ಮಾತನಾಡುತ್ತೇನೆ. ಬಿಜೆಪಿ ನಾಯಕರಿಗೆ ಸವಾಲು ಹಾಕುತ್ತಿದ್ದೇನೆ. ಅವರು ಕಪ್ಪು ಬಾವುಟ ಪ್ರದರ್ಶಿಸಲಿ, ಅವರಿಗೆ ತಕ್ಕ ಪಾಠವನ್ನು ಕಲಿಸುತ್ತೇನೆ ಎಂದರು.

ಮಾಜಿ ಸಚಿವ ಪ್ರಿಯಾಂಕ ಖರ್ಗೆ ಮಾತನಾಡಿ, ಕೇಂದ್ರ ಸರ್ಕಾರ ಅಧಿಕಾರಕ್ಕೆ ಬಂದು 8 ವರ್ಷ ಆಯಿತು, ರಾಜ್ಯ ಸರ್ಕಾರ ಅಧಿಕಾರಕ್ಕೆ ಬಂದು 3 ವರ್ಷ ಕಳೆದರೂ ಇನ್ನು ಕೂಡ ಒಂದೂ ಜನಪರ ಯೋಜನೆ ರೂಪಿಸಲು ಆಗಿಲ್ಲ, ದೇಶದಲ್ಲಿ ಏನೇ ನಡೆದರೂ ಕೂಡ ರಾಷ್ಟ್ರದ ಬಿಜೆಪಿಯವರು ನೆಹರು ಮೇಲೆ, ರಾಜ್ಯದ ಬಿಜೆಪಿಗರು ಇಲ್ಲಿನ ಸಿದ್ದರಾಮಯ್ಯ ಸರ್ಕಾರದ ಮೇಲೆ ಹಾಕುತ್ತಿದ್ದಾರೆ. ನನಗೆ ಬಿಜೆಪಿ ನಾಯಕರ ಹತಾಶ ಹೇಳಿಕೆ ಕಂಡು ಅಯ್ಯೋ ಅನಿಸುತ್ತಿದೆ ಎಂದರು.

ಬಿಜೆಪಿಗರಿಗೆ ಅಭಿವೃದ್ಧಿ ಮೇಲೆ, ರಾಜ್ಯದ ಯುವಕರ ಭವಿಷ್ಯ ಉದ್ಧಾರವಾಗುವುದು ಇಷ್ಟವಿಲ್ಲ, ರಾಹುಲ್‌ಗಾಂಧಿ ಯಾತ್ರೆ ಬಗ್ಗೆ ಹೇಳಿಕೆ ನೀಡಿ ತಪ್ಪಿನಿಂದ ನುಣಿಚಿಕೊಳ್ಳುವ ಯತ್ನವನ್ನು ಬಿಟ್ಟು ಬೆಲೆ ಏರಿಕೆ ಬಗ್ಗೆ ಸ್ಪಷ್ಟನೆ ನೀಡಿ ಎಂದರು. ಭಾರತ್ ಐಕ್ಯತಾ ಯಾತ್ರೆ ದೇಶವನ್ನು ಒಗ್ಗೂಡಿಸುವ ಯಾತ್ರೆ, ಸಂವಿಧಾನವನ್ನು ಎತ್ತಿಹಿಡಿಯುವ ಯಾತ್ರೆ, ಭರವಸೆ ಮೂಡಿಸುವ ಯಾತ್ರೆಯಾಗಿದೆ ಎಂಬುದನ್ನು ಬಿಜೆಪಿಗರು ಅರ್ಥ ಮಾಡಿಕೊಳ್ಳಬೇಕು ಎಂದು ಟೀಕಾಪ್ರಹಾರ ನಡೆಸಿದರು.



ಶಾಲಾ ಮಕ್ಕಳೊಂದಿಗೆ ರಾಹುಲ್‌ಗಾಂಧಿ.



ಬದನವಾಳಿನಲ್ಲಿ ಬಟ್ಟೆ ನೇಂಯ್ಗೆ ವೀಕ್ಷಿಸಿದ ರಾಹುಲ್‌ಗಾಂಧಿ.



ಬದನವಾಳು ಗ್ರಾಮಸ್ಥರಿಂದ ರಾಹುಲ್‌ಗಾಂಧಿಗೆ ಆತ್ಮೀಯ ಸ್ವಾಗತ.

ಇನ್ನೊಂದು ದಿನ ಇಡಿಯವರು ದಿನಾಂಕ ನಿಗದಿಪಡಿಸಲಿ

ನನ್ನ ಮೇಲೆ ನಡೆಯುತ್ತಿರುವ ಇಡಿ ಕೇಸ್‌ಗೆ ಸಂಬಂಧಿಸಿದಂತೆ ಇಡಿ ಇಲಾಖೆಯವರು ಅ.7ರಂದು ಆಗಮಿಸುವಂತೆ ಹೊಸ ಸಮನ್ಸ್ ಜಾರಿಗೊಳಿಸಿದ್ದಾರೆ. ರಾಹುಲ್‌ಗಾಂಧಿ ಪಾದಯಾತ್ರೆ ಅಂಗವಾಗಿ ಹಾಜರಾಗಲು ಸಾಧ್ಯವಿಲ್ಲ. ಮತ್ತೊಂದು ದಿನಾಂಕ ನಿಗದಿಪಡಿಸಿ ಸಮಯಾವಕಾಶ ನೀಡಬೇಕೆಂದು ಮೇಲ್ ಮೂಲಕ ಮನವಿ ಮಾಡಿದ್ದೇನೆ. ದೇಶದ ಕಾನೂನಿಗೆ ನಾನು ಗೌರವ ನೀಡುತ್ತೇನೆ ಎಂದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1 ತೋತಾಪುರಿ–1 (ಕ): ರಾ.10.30ಕ್ಕೆ.

ಸ್ಕ್ರೀನ್ 2 ವಿಕ್ರಂ ವೇದಾ (ಹಿಂ): ಬೆ.10.30ಕ್ಕೆ, ರಾ.7.10ಕ್ಕೆ, ರಾ.10.05ಕ್ಕೆ, ನಾನೇ ವರುವೇನ್ (ತ): ಮ.1.30ಕ್ಕೆ, ಗುರುಶಿಷ್ಯರು (ಕ): ಸಂ.4ಕ್ಕೆ.

ಸ್ಕ್ರೀನ್ 3 ಗುರುಶಿಷ್ಯರು (ಕ): ಬೆ.10.05ಕ್ಕೆ, ಪೊನ್ನಿಯನ್ ಸೆಲ್ವನ್–1(ತ): ಮ.1.10ಕ್ಕೆ, ರಾ.10ಕ್ಕೆ, ಲಕ್ಕಿಮ್ಯಾನ್ (ಕ): ಸಂ.4.20ಕ್ಕೆ, ತೋತಾಪುರಿ–1(ಕ): ರಾ.7.20ಕ್ಕೆ.

ಸ್ಕ್ರೀನ್ 4 ಕಾಂತಾರ (ಕ): ಬೆ.10.10ಕ್ಕೆ, ಮ.1.05ಕ್ಕೆ, ರಾ.7.05ಕ್ಕೆ, ರಾ.10ಕ್ಕೆ, ಪೊನ್ನಿಯನ್ ಸೆಲ್ವನ್–1(ತ): ಮ.3.55ಕ್ಕೆ.

ಐನಾಕ್ಸ್ ಮೂವೀಸ್

LIVE THE MOVIE

ದೂ : 2533444 / 2433456

ಸ್ಕ್ರೀನ್ 1 ಪೊನ್ನಿಯನ್ ಸೆಲ್ವನ್–1(ತ): ಬೆ.9.55ಕ್ಕೆ, ತೋತಾಪುರಿ –1(ಕ): ಮ.1.15ಕ್ಕೆ, ರಾ.7.10ಕ್ಕೆ, ಕಾಂತಾರ (ಕ): ಸಂ.4.05ಕ್ಕೆ, ರಾ.10ಕ್ಕೆ.

ಸ್ಕ್ರೀನ್ 2 ಪೊನ್ನಿಯನ್ ಸೆಲ್ವನ್–1(ತ): ರಾ.10.20ಕ್ಕೆ.

ಸ್ಕ್ರೀನ್ 3 ವಿಕ್ರಮ್ ವೇದಾ (ಹಿಂ): ರಾ.10.30ಕ್ಕೆ.

ಸ್ಕ್ರೀನ್ 4 ಗುರು ಶಿಷ್ಯರು (ಕ): ರಾ.10.10ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1 ಸ್ವಚ್ಛ ಕರ್ನಾಟಕ (ಕ): ಬೆ.11ಕ್ಕೆ, ಮಾನ್ಸೂನ್ ರಾಗ (ಕ): ಮ.1.30ಕ್ಕೆ, ಸಂ.4.30ಕ್ಕೆ, ಕೊಟ್ಟು (ಮ): ರಾ.7.45ಕ್ಕೆ.

ಸ್ಕ್ರೀನ್ 2 ಗುರುಶಿಷ್ಯರು (ಕ): ಬೆ.10.30ಕ್ಕೆ, ಮ.1.35ಕ್ಕೆ, ರಾ.7.45ಕ್ಕೆ, ಲಕ್ಕಿಮ್ಯಾನ್ (ಕ): ಸಂ.4.45ಕ್ಕೆ.

ಸ್ಕ್ರೀನ್ 3 ಬ್ರಹ್ಮಾಸ್ತ್ರ (3ಡಿ)(ಹಿಂ): ಮ.1.15ಕ್ಕೆ, ರಾ.7.45ಕ್ಕೆ, ಬ್ರಹ್ಮಾಸ್ತ್ರ (3ಡಿ)(ಕ): ಸಂ.4.30ಕ್ಕೆ.

ಸ್ಕ್ರೀನ್ 4 ಲಕ್ಕಿಮ್ಯಾನ್ (ಕ): ಬೆ.10.30ಕ್ಕೆ, ಮ.1.35ಕ್ಕೆ, ರಾ.7.45ಕ್ಕೆ, ಗುರುಶಿಷ್ಯರು (ಕ): ಸಂ.4.35ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕಾಂತಾರ (ಕ): ಬೆ.8.35ಕ್ಕೆ, ಮ.12.30ಕ್ಕೆ, ಮ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ, ತೋತಾಪುರಿ 1(ಕ): ಬೆ.10.30ಕ್ಕೆ, ಸಂ.4.25ಕ್ಕೆ, ರಾ.7.20ಕ್ಕೆ, ರಾ.10.15ಕ್ಕೆ, ಗುರು ಶಿಷ್ಯರು (ಕ): ಬೆ.10.15ಕ್ಕೆ, ಬ್ರಹ್ಮಾಸ್ತ್ರ (3ಡಿ)(ಹಿಂ): ಬೆ.11.30ಕ್ಕೆ, ಸಂ.6.30ಕ್ಕೆ, ರಾ.10ಕ್ಕೆ, ಪೊನ್ನಿಯನ್ ಸೆಲ್ವನ್–1(ತ): ಬೆ.8ಕ್ಕೆ, ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ನಾನೇ ವರುವೇನ್ (ತ): ಬೆ.10.50ಕ್ಕೆ, ಮ.1.30ಕ್ಕೆ, ರಾ.7.35ಕ್ಕೆ, ಅವತಾರ್ ರೀ ರಿಲೀಸ್ (ಇಂ): ಮ.3ಕ್ಕೆ, ಡೋಂಟ್ ವರಿ ಡಾರ್ಲಿಂಗ್ (ಇಂ): ಸಂ.4.10ಕ್ಕೆ, ವಿಕ್ರಮ್ ವೇದ (ಹಿಂ): ಬೆ.9ಕ್ಕೆ, ಬೆ.11.45ಕ್ಕೆ, ಮ.3.15ಕ್ಕೆ, ಸಂ.6.45ಕ್ಕೆ, ರಾ.10.15ಕ್ಕೆ, ಚುಪ್ (ಹಿಂ): ಮ.1.25ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ನಾನೇ ಒರುವೇನ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಪಿಎಸ್–1 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಾಂತಾರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮರ್ದಿನಿ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಟ್ರಿಗರ್ (ತ)	4 ಪ್ರದರ್ಶನಗಳು
ಸಂಗಂ	
ಮಾನ್ಸೂನ್ ರಾಗ (ಕ)	4 ಪ್ರದರ್ಶನಗಳು
ಲಿಡೋ	
ರಾಜಾ ರಾಣಿ ರೋರರ್ ರಾಕೆಟ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ವಿಕ್ರಮ್‌ವೇದಾ (ಹಿಂ)	4 ಪ್ರದರ್ಶನಗಳು
ಪ್ರಭಾ	
ಗಾಳಿಪಟ–2 (ಕ)	4 ಪ್ರದರ್ಶನಗಳು

ಭಾರತ ಐಕ್ಯತಾ ಯಾತ್ರೆ: ಹುಣಸೂರಿನಿಂದ 6 ಸಾವಿರ ಮಂದಿ ಭಾಗಿ

'ಕೈ' ಕಾರ್ಯಕರ್ತರಿಗೆ ಶಾಸಕ ಹೆಚ್‌ಪಿಎಂ ಅಭಿನಂದನೆ

ಹುಣಸೂರು, ಅ.2– ರಾಹುಲ್ ಗಾಂಧಿ ನೇತೃತ್ವದಲ್ಲಿ, ಕಾಂಗ್ರೆಸ್ ಪಕ್ಷ ಹಮ್ಮಿಕೊಂಡಿದ್ದ ಭಾರತ್ ಜೋಡೋ ಯಾತ್ರೆ ಭಾನುವಾರ ಬೆಳಗ್ಗೆ ಕಳಲೆ ಗೇಟ್‌ನಿಂದ ಮೈಸೂರಿನ ಬಂಡಿಪಾಳ್ಯಕ್ಕೆ ಆಗಮಿಸಿತು. ನಿರೀಕ್ಷೆಗೂ ಮೀರಿ ಹೆಚ್ಚಿನ ರೀತಿ ಯಶಸ್ವಿಯಾಗಲು ಕಾರಣರಾದ, ಕಾರ್ಯಕರ್ತರಿಗೆ ಮತ್ತು ಸಾರ್ವಜನಿಕರಿಗೆ ಶಾಸಕ ಹೆಚ್.ಪಿ. ಮಂಜುನಾಥ್ ಅಭಿನಂದನೆ ತಿಳಿಸಿದ್ದಾರೆ.



ಐಕ್ಯತಾ ಯಾತ್ರೆಯಲ್ಲಿ ಪಾಲ್ಗೊಂಡು ರಾಹುಲ್ ಗಾಂಧಿ, ಡಿ.ಕೆ.ಸುರೇಶ್, ಹಾಗೂ ಸಾವಿರಾರು ಕಾರ್ಯಕರ್ತರ ಜತೆಗೂಡಿ ಹೆಜ್ಜೆಹಾಕುವ ಮೂಲಕ ಸಾಥ್ ನೀಡಿದರು. ಈ ವೇಳೆ ಮಾತನಾಡಿದ ಶಾಸಕ ಹೆಚ್.ಪಿ.ಮಂಜುನಾಥ್, ಹುಣಸೂರಿನಿಂದ ಸುಮಾರು 6 ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ಭಾರತ್ ಜೋಡೋ ಯಾತ್ರೆಯಲ್ಲಿ ಭಾಗವಹಿಸಿ ರಾಹುಲ್ ಗಾಂಧಿಯ ಪ್ರೀತಿಯ ಕರ್ನಾಟಕ ಐಕ್ಯತಾ ಯಾತ್ರೆ ಪರಿಪೂರ್ಣವಾಗಿ ಯಶಸ್ವಿಯಾಗಲು ಕಾರಣರಾದ ಎಲ್ಲ ಕಾರ್ಯಕರ್ತರು, ಮುಖಂಡರ ಸಹಕಾರ ಮರೆಯುವಂತಿಲ್ಲ, ಇದರ ಜತಗೆ ಮಾಧ್ಯಮಗಳ ಸಹಕಾರವನ್ನು ಸ್ಮರಿಸಿದರು.

ಯಾತ್ರೆಯಲ್ಲಿ ಸಂಸದ ಡಿ.ಕೆ.ಸುರೇಶ್, ಶಾಸಕ ಅನಿಲ್ ಚಿಕ್ಕಮಾದು, ಡಾ.ಯತೀಂದ್ರ ಸಿದ್ದರಾಮಯ್ಯ, ರವಿಶಂಕರ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ವಿಜಯಕುಮಾರ್, ಬಿ.ಕೆ ಹರಿಪ್ರಸಾದ್, ಯು.ಟಿ.ಖಾದರ್, ಐವನ್ ಡಿ ಸೋಜ, ಈಶ್ವರ್‌ಖಂಡ್ರೆ, ಲಕ್ಷ್ಮೀ ಹೆಬ್ಬಾಳ್ಕರ್, ಸಲೀಮ್ ಅಹ್ಮದ್, ಅಯೂಬ್ ಖಾನ್ ಭಾಗಿಯಾಗಿದ್ದರು. ಶನಿವಾರ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆಯಿಂದ ಮೈಸೂರು ಜಿಲ್ಲೆ ನಂಜನಗೂಡು ತಾಲೂಕಿಗಾಗಮಿಸಿತ್ತು.

ಭಾರತ ಐಕ್ಯತಾ ಯಾತ್ರೆಯಲ್ಲಿ ತಿ.ನರಸೀಪುರದ ಸಾವಿರಾರು ಕಾಂಗ್ರೆಸ್ ಕಾರ್ಯಕರ್ತರು ಭಾಗಿ

ತಿ.ನರಸೀಪುರ ಅ.2– ಕಾಂಗ್ರೆಸ್ ರಾಷ್ಟ್ರೀಯ ಮುಖಂಡ ರಾಹುಲ್ ಗಾಂಧಿ ನೇತೃತ್ವದ ಭಾರತ್ ಜೋಡೋ ಯಾತ್ರೆಯಲ್ಲಿ ತಿ.ನರಸೀಪುರ ವಿಧಾನಸಭಾ ಕ್ಷೇತ್ರದ ಸಾವಿರಾರು ಕಾಂಗ್ರೆಸ್ ಕಾರ್ಯಕರ್ತರು ಭಾಗಿಯಾಗಿದ್ದರು.

ಕಳೆದ 2 ದಿನಗಳಿಂದ ಪಾದಯಾತ್ರೆಯಲ್ಲಿ ಉತ್ಸಾಹದಿಂದ ಭಾಗವಹಿಸಿದ್ದ ಕಾಂಗ್ರೆಸ್ ಕಾರ್ಯಕರ್ತರು ರಾಹುಲ್ ಗಾಂಧಿ ಅವರೊಂದಿಗೆ ಗುಂಡ್ಲುಪೇಟೆ ತಾಲೂಕಿನ ಬೇಗೂರಿನಿಂದ ವರುಣಾ ಕ್ಷೇತ್ರದ ತಾಂಡವಪುರದವರೆಗೂ ಪಾದಯಾತ್ರೆ ನಡೆಸಿದರು. ಈ ವೇಳೆ ಪಾದಯಾತ್ರೆಗೆ ಸಾಥ್ ನೀಡಿದ ಕಾರ್ಯಕರ್ತರನ್ನು ನರಸೀಪುರ ವಿಧಾನಸಭಾ ಕ್ಷೇತ್ರದ ಜಂಕ್ಷನ್‌ನಲ್ಲಿ ವಿಪಕ್ಷ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಮಾಜಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ, ವಸತಿ ಜಾಗೃತ ಸಮಿತಿ ಮಾಜಿ ಅಧ್ಯಕ್ಷ ಸುನೀಲ್ ಬೋಸ್ ಅದ್ಧೂರಿಯಾಗಿ ಸ್ವಾಗತಿಸಿದರು.



ಮಾಜಿ ಸಚಿವ ಹೆಚ್.ಸಿ.ಮಹದೇವಪ್ಪ ಮಾತನಾಡಿ, ಭಾರತ್ ಜೋಡೋ ಯಾತ್ರೆ ಪಕ್ಷದ ಕಾರ್ಯಕ್ರಮವಲ್ಲ. ಬದಲಿಗೆ ದೇಶ ಉಳಿಸಬೇಕೆಂಬ ಉದ್ದೇಶದಿಂದ ಮಾಡಲಾಗುತ್ತಿದೆ. ದೇಶದಲ್ಲಿ ಬಿಜೆಪಿ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ಸಾಮರಸ್ಯ ಇಲ್ಲದಂತಾಗಿದೆ. ಕೆಲವೇ ಧರ್ಮದವರನ್ನು ಟಾರ್ಗೆಟ್ ಮಾಡಿ ತೊಂದರೆ ಕೊಡುವ ಕೆಲಸ ಮಾಡಲಾಗುತ್ತಿದೆ. ಧರ್ಮ–ಧರ್ಮಗಳ ನಡುವೆ ಸಂಘರ್ಷ, ದ್ವೇಷ ಉಂಟು ಮಾಡುವ ಕೆಲಸವನ್ನು ಬಿಜೆಪಿ ಮಾಡುತ್ತಾ ಬಂದಿದೆ. ಹಾಗಾಗಿ ಬಿಜೆಪಿಯಿಂದ ಅನ್ಯಾಯಕ್ಕೊಳಗಾಗಿರುವವರನ್ನು ಒಂದು ಮಾಡಬೇಕೆನ್ನುವುದು ಕಾರ್ಯಕ್ರಮದ ಉದ್ದೇಶ ಎಂದು ತಿಳಿಸಿದರು

ಈ ವೇಳೆ ಕ್ಷೇತ್ರ ಅಧ್ಯಕ್ಷ ಎಂ.ಡಿ. ಬಸವರಾಜು, ಪುರಸಭಾ ಸದಸ್ಯ ಬಾದಾಮಿ ಮಂಜು, ಎಪಿಎಂಸಿ ಮಾಜಿ ಅಧ್ಯಕ್ಷ ಎಂ. ರಾಜು, ಗ್ರಾಪಂ ಮಾಜಿ ಅಧ್ಯಕ್ಷ ಎ.ಜೆ. ವೆಂಕಟೇಶ್, ಎಂ.ಶಿವರಾಮ, ಹೆಮ್ಮಿಗೆ ಶೇಷಾದ್ರಿ, ಖಾಸಗಿ ಬಸ್ ಏಜೆಂಟರ ಸಂಘದ ಅಧ್ಯಕ್ಷ ಪಿ.ಪುಟ್ಟರಾಜು, ಮುಖಂಡರಾದ ಕೇತಹಳ್ಳಿ ನಾಗೇಶ್, ಕುಸಪ್ಪ, ಪುಟ್ಟಸ್ವಾಮಿ, ಮಹೇಶ್, ಗೋಪಿ ಬೋರೆಗೌಡ, ಉಮೇಶ್, ರಮೇಶ್ ಸೇರಿ ಸಾವಿರಾರು ಕಾರ್ಯಕರ್ತರು ಭಾಗವಹಿಸಿದ್ದರು.



ಮೈಸೂರು ದಸರಾ ಮಹೋತ್ಸವ ಅಂಗವಾಗಿ ನಡೆಯುತ್ತಿರುವ ಯುವ ದಸರಾ ಕಾರ್ಯಕ್ರಮಕ್ಕೆ ಆಗಮಿಸಿದ ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರನ್ನು ಬಿಜೆಪಿ ಮುಖಂಡ ಡಾ.ಹೆಚ್.ವಿ.ಕೃಷ್ಣಸ್ವಾಮಿ ಸನ್ಮಾನಿಸಿದರು. ಈ ವೇಳೆ ಜಿಲ್ಲಾ ಸಹ ವಕ್ತಾರ ಗಿರೀಶ್, ಹಿರಿಯ ಮುಖಂಡ ಮಲ್ಲೇಗೌಡ, ತಾಲೂಕು ವೀರಶೈವ ಸಂಘದ ಉಪಾಧ್ಯಕ್ಷ ಸೋಮಶೇಖರ್, ಮುಖಂಡರಾದ ಶಿವಕುಮಾರ್, ಶಿವಾನಂದ, ವೆಂಕಟೇಶ್, ಶಿವು, ಗೋಪಾಲಯ್ಯ, ಶ್ರೀರಾಮುಲು, ವಕೀಲ ಕೃಷ್ಣಯ್ಯ ಹನುಮಂತ ನಾಯಕ, ರಾಜೇಶ, ಚಾಮರಾಜ, ಸುನೀಲ್ ಇನ್ನಿತರರಿದ್ದರು.

ಕೆರೆ ಕೋಡಿ ಬಿದ್ದು ಬೆಳೆ ನಾಶ

ಹೆಚ್.ಡಿ.ಕೋಟೆ, ಅ.2– ಭಾರೀ ಮಳೆಗೆ ತಾಲೂಕಿನ ಜಿಯಾರ ಗ್ರಾಮದ ಕೆರೆ ಕೋಡಿ ಬಿದ್ದು ಅಪಾರ ಪ್ರಮಾಣದ ಬೆಳೆ ನಾಶವಾಗಿರುವ ಘಟನೆ ಭಾನುವಾರ ಸಂಜೆ ನಡೆದಿದೆ.

ಭಾರೀ ಮಳೆ ಸುರಿದ ಪರಿಣಾಮ ಕೆರೆಯಲ್ಲಿ ನೀರು ಹೆಚ್ಚಾದ ಕಾರಣ ಕೆರೆ ಕೋಡಿ ಬಿದ್ದಿದ್ದು, ಜಿಯಾರ ಗ್ರಾಮಕ್ಕೆ ತೆರಳುವ ಕೋಟೆ ಮುಖ್ಯರಸ್ತೆ ಸಂಪೂರ್ಣ ಜಲಾವೃತವಾಗಿದೆ. ಅಲ್ಲದೇ ರೈತರ ಜಮೀನುಗಳಿಗೂ ನೀರು ನುಗ್ಗಿದ್ದು, ಜೋಳ, ಹತ್ತಿ, ಬಾಳೆ, ರಾಗಿ, ಭತ್ತ, ಸೇರಿದಂತೆ ಲಕ್ಷಾಂತರ ರೂ. ಮೌಲ್ಯದ ಫಸಲು ನಾಶವಾಗಿದೆ



ಎನ್ನಲಾಗಿದೆ. ಹಲವು ರೈತರ ಮನೆಗಳಿಗೆ ನೀರು ನುಗ್ಗಿದೆ. ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿ ರೈತರಿಗೆ ಸೂಕ್ತ ಪರಿಹಾರ ದೊರಕಿಸಿಕೊಡಬೇಕು ಎಂದು ಆಗ್ರಹಿಸಿದ್ದಾರೆ.

ಮಹಾತ್ಮರ ತತ್ವಾದರ್ಶಗಳನ್ನು ಅಳವಡಿಸಿಕೊಳ್ಳಿ



ಸರಗೂರು, ಅ.2– ಹಳ್ಳಿಗಳ ಅಭಿವೃದ್ಧಿ ಕನಸು ಕಂಡಿದ್ದ ಗಾಂಧೀಜಿ ಅವರಂತಹ ಮಹಾತ್ಮರ ಜಯಂತಿ ಆಚರಿಸುವ ಜೊತೆಗೆ ಅವರ ತತ್ವಾದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಪಪಂ ಮುಖ್ಯಾಧಿಕಾರಿ ಬಿ.ಜಿ. ಸತೀಶ್ ಅಭಿಪ್ರಾಯಪಟ್ಟರು.

ಪಟ್ಟಣ ಪಂಚಾಯಿತಿ ಆವರಣದಲ್ಲಿ ಭಾನುವಾರ ನಡೆದ ಮಹಾತ್ಮ ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಅಹಿಂಸೆ ಮೂಲಕ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟ ಮಹಾತ್ಮ ಗಾಂಧೀಜಿ ಅವರ ಜಯಂತಿಯನ್ನು ಅಂತಾರಾಷ್ಟ್ರೀಯ ಅಹಿಂಸೆ ದಿನವೆಂದು ಆಚರಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಪಪಂ ಅಧ್ಯಕ್ಷೆ ರಾಧಿಕಾ, ಸದಸ್ಯರಾದ ಶ್ರೀನಿವಾಸ್, ಮುಖಂಡರಾದ ನವೀನ್, ಪುಟ್ಟಹನುಮಯ್ಯ, ಸ್ವಾಮಿ, ಶ್ಯಾಂ ಶಿವಾಜಿ ಹಾಗೂ ಪಪಂ ಸಿಬ್ಬಂದಿಗಳಾದ, ಸಂತೋಷ್, ನಾಗರತ್ನಮ್ಮ, ರಾಮು, ಆರಾಧ್ಯ, ಶಿವಪ್ರಸಾದ್, ಅನಿತಾ, ಪಳನಿಸ್ವಾಮಿ, ಸತೀಶ್, ನಾಗೇಶ್ ಇನ್ನಿತರರಿದ್ದರು.

ಭಾರತ್ ಜೋಡೋ ಅಲ್ಲ, ಭ್ರಷ್ಟಾಚಾರ್ ಜೋಡೋ ಯಾತ್ರೆ

ತಿ.ನರಸೀಪುರ, ಅ.2– ಕಾಂಗ್ರೆಸ್‌ನವರು ಹಮ್ಮಿಕೊಂಡಿರುವ ಪಾದಯಾತ್ರೆ ಭಾರತ್ ಜೋಡೋ ಯಾತ್ರೆಯಲ್ಲ, ಭಾರತ್ ಭ್ರಷ್ಟಾಚಾರ್ ಜೋಡೋ ಯಾತ್ರೆ ಎಂದು ಬಿಜೆಪಿ ಹಿರಿಯ ಮುಖಂಡ ತೋಟದಪ್ಪ ಬಸವರಾಜು ವ್ಯಂಗ್ಯವಾಡಿದ್ದಾರೆ.



ಪಟ್ಟಣದಲ್ಲಿ 'ಕಳ್ಳ ಡಿಕೆ, ಮಳ್ಳ ರಾಹುಲ್, ಸುಳ್ಳ ಸಿದ್ದರಾಮಯ್ಯ' ಎಂಬ ಬರಹವಿರುವ ಪೋಸ್ಟರ್ ಬಿಡುಗಡೆ ಮಾಡಿ ಮಾತನಾಡಿದ ಅವರು, 6 ದಶಕಗಳ ಕಾಲ ದೇಶವನ್ನಾಳಿದ ಕಾಂಗ್ರೆಸ್ ಪಕ್ಷ ಲಕ್ಷಾಂತರ ಕೋಟಿ ರೂ. ಕೊಳ್ಳೆ ಹೊಡೆದು ತಮ್ಮ ಖಜಾನೆ ತುಂಬಿಸಿಕೊಂಡಿದೆ. ಕೆಲವು ಕಾಂಗ್ರೆಸ್ ನಾಯಕರು ಹಲವು ಪ್ರಕರಣಗಳಡಿ ಜೈಲು ಪಾಲಾಗಿ ಜಾಮೀನಿನ ಮೇಲೆ ಹೊರ ಬಂದು ಓಡಾಡುತ್ತಿದ್ದಾರೆ. ಮತ್ತೆ ಈ ನಾಯಕರು ಯಾವುದೇ ಸಂದರ್ಭ ಜೈಲು ಪಾಲಾಗುವುದರಲ್ಲಿ ಅನುಮಾನವಿಲ್ಲ ಎಂದರು.

ಭಾರತ್ ಜೋಡೋ ಯಾತ್ರೆ ಮಾಡುವ ನೈತಿಕತೆ ಕಾಂಗ್ರೆಸ್ ಪಕ್ಷಕ್ಕಿಲ್ಲ. ನಿಜವಾಗಿಯೂ ಭಾರತ್ ಜೋಡೋ ಮಾಡಿರುವುದು ಪ್ರಧಾನಿ ನರೇಂದ್ರ ಮೋದಿ. ಆರ್ಟಿಕಲ್ 370 ತೆಗೆದು ಒಂದೇ ಭಾರತ, ಒಂದೇ ಸಂವಿಧಾನ ಹಾಗೂ ಒಂದೇ ಧ್ವಜ ಮಾಡಿದ್ದಾರೆ. ಇಡೀ ದೇಶ ಕೊರೊನಾ ಬಂದು ಆರ್ಥಿಕ ಸಂಕಷ್ಟ ಎದುರಿಸಿದಾಗ 2 ವರ್ಷಗಳ ಕಾಲ ಉಚಿತ ಲಸಿಕೆ ನೀಡಿ, ಇಡೀ ದೇಶದ ಜನರ ಪ್ರಾಣ ಆರೋಗ್ಯ ರಕ್ಷಣೆ ಮಾಡಿದಂತಹ ಹೆಗ್ಗಳಿಕೆಗೆ ನರೇಂದ್ರ ಮೋದಿ ಪಾತ್ರರಾಗಿದ್ದಾರೆ. ದೇಶ ಈಗ ಕಾಂಗ್ರೆಸ್ ಮುಕ್ತವಾಗಿದೆ. 2023ರಲ್ಲಿ ನಡೆಯುವ ಚುನಾವಣೆಯಲ್ಲೂ ಕಾಂಗ್ರೆಸ್ ಮುಕ್ತ ಆಗುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಳ್ಳ ಡಿ.ಕೆ.ಶಿವಕುಮಾರ್, ಮಳ್ಳ ರಾಹುಲ್ ಗಾಂಧಿ ಹಾಗೂ ಸುಳ್ಳ ಸಿದ್ದರಾಮಯ್ಯ ಅವರು ರಾಜ್ಯದಲ್ಲಿ ನಮ್ಮ ಬಿಜೆಪಿ ಸರ್ಕಾರ ಉತ್ತಮ ಆಡಳಿತ ನೀಡುತ್ತಿದ್ದರೂ, 40% ಸರ್ಕಾರವೆಂದು ಸುಳ್ಳು ಪ್ರಚಾರ ಮಾಡಿ ಅವರ ವ್ಯಕ್ತಿತ್ವವನ್ನು ಅವರೇ ಕಳೆದುಕೊಳ್ಳುತ್ತಿದ್ದಾರೆ ಎಂದರು. ಈ ವೇಳೆ ಮುಖಂಡರಾದ ಆಲಗೂಡು ರಂಗನಾಯಕ್, ಮೂಗೂರು ಜಯಣ್ಣ, ವೆಂಕಟರಮಣ ಶೆಟ್ಟಿ, ಆಲಗೂಡು ಮಂಜು, ಭೈರಾಪುರ ಬಾಲು ಹಾಜರಿದ್ದರು.



ಕಂಪಲಾಪುರ ಸಮೀಪದ ದೊಡ್ಡಬೇಲಾಳು ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘದ ವಾರ್ಷಿಕ ಸಭೆಯನ್ನು ಅಧ್ಯಕ್ಷ ಶಿವಣ್ಣ ಉದ್ಘಾಟಿಸಿದರು. ಈ ವೇಳೆ ಟಿಎಪಿಸಿಎಂಎಸ್ ಅಧ್ಯಕ್ಷ ನಾಗೇಂದ್ರ, ನಿರ್ದೇಶಕಿ ಸುನೀತಾ, ಬಸವರಾಜೇ ಅರಸ್, ಮಹೇಶ್, ಸಾವಿತ್ರಮ್ಮ, ಜೆ.ಪಿ.ಕುಮಾರ್ ಮತ್ತಿತರರಿದ್ದರು.

ಪೋಷಣೆ ಅಭಿಯಾನ ಯೋಜನೆ ಪರಿಣಾಮಕಾರಿ

ಪಿರಿಯಾಪಟ್ಟಣ, ಅ.2– ರಾಜ್ಯದಲ್ಲಿ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳು, ಮಹಿಳೆಯರು, ಹಿರಿಯ ನಾಗರಿಕರ ಆರೋಗ್ಯದ ದೃಷ್ಟಿಯಿಂದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಪೋಷಣೆ ಅಭಿಯಾನ–ಪೌಷ್ಟಿಕ ಕರ್ನಾಟಕ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಮುಂದಾಗಿರುವುದು ಶ್ಲಾಘನೀಯ ಎಂದು ಶಾಸಕ ಕೆ.ಮಹದೇವ್ ತಿಳಿಸಿದರು.

ಪಟ್ಟಣದ ಮಂಜುನಾಥ ಸಮುದಾಯ ಭವನದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ ಸೀಮಂತ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಗರ್ಭಿಣಿಯರು, ಬಾಣಂತಿಯರು, ಶಿಶು ಬೆಳವಣಿಗೆ ಕುಂಠಿತ, ತೂಕ ಕೊರತೆ, ರಕ್ತಹೀನತೆ, ಅಪೌಷ್ಟಿಕತೆ, ಕಡಿಮೆ ತೂಕದ ಶಿಶು ಸೇರಿದಂತೆ ಅಪೌಷ್ಟಿಕ ಸಮಸ್ಯೆಯಿಂದ ಬಳಲುತ್ತಿರುವವರಿಗಾಗಿ ಇಲಾಖೆಯು ನಾನಾ ಯೋಜನೆ ಜಾರಿಗೊಳಿಸಿದೆ. ಆ ಮೂಲಕ ಅಪೌಷ್ಟಿಕತೆ ಮುಕ್ತ ಕರ್ನಾಟಕ ಮಾಡಲು ಉದ್ದೇಶಿಸಲಾಗಿದೆ. ಸಮಾಜಕ್ಕೆ ಉತ್ತಮ ಮಕ್ಕಳನ್ನು ನೀಡುವಲ್ಲಿ ತಾಯಂದಿರ ಪಾತ್ರ ಪ್ರಮುಖವಾಗಿದ್ದು, ಇತರರಿಗೆ ಮಾದರಿಯಾಗುವ ನಿಟ್ಟಿನಲ್ಲಿ ತಮ್ಮ ಮಕ್ಕಳನ್ನು ಬೆಳೆಸಿ ಸಮಾಜಕ್ಕೆ ಮಾದರಿ ಮಾಡುವಂತೆ ತಿಳಿಸಿ ಕೇಂದ್ರ ಸರ್ಕಾರದ ಪೋಷಣ್ ಮಾಸಾಚರಣೆ ಅಭಿಯಾನಕ್ಕೆ ಶ್ಲಾಘನೆ ವ್ಯಕ್ತಪಡಿಸಿದರು. ತಾಪಂ ಇಓ ಸಿ.ಆರ್. ಕೃಷ್ಣಕುಮಾರ್ ಮಾತನಾಡಿದರು. ಕಾರ್ಯಕ್ರಮಕ್ಕೆ ತಾಲೂಕಿನ ವಿವಿಧೆಡೆಯಿಂದ ಆಗಮಿಸಿದ್ದ 500 ಮಂದಿ ಗರ್ಭಿಣಿಯರಿಗೆ ಶಾಸಕ ಕೆ.ಮಹದೇವ್ ಇಳಕಲ್ ಸೀರೆ ವಿತರಿಸಿದರು. ಈ ವೇಳೆ ಸಾಂಪ್ರದಾಯಿಕವಾಗಿ ಹಣ್ಣು ಹಂಪಲು, ಬಳೆ ಅರಿಶಿನ ಕುಂಕುಮ ಸೇರಿದಂತೆ ಸೊಗಲು ನೀಡಿ ಸತ್ಕರಿಸಲಾಯಿತು.

ಶಾಸಕ ಕೆ.ಮಹದೇವ್ ಅವರ ಪತ್ನಿ ಸುಭದ್ರಮ್ಮ ಹಾಗೂ ಸೊಸೆಯಂದಿರು, ಜೆಡಿಎಸ್ ತಾಲೂಕು ಅಧ್ಯಕ್ಷ ಅಣ್ಣಯ್ಯಶೆಟ್ಟಿ, ಸಿಡಿಪಿಓ ಮಮತಾ, ಟಿಎಪಿಸಿಎಂಎಸ್ ಅಧ್ಯಕ್ಷ ನಾಗೇಂದ್ರ, ನಿರ್ದೇಶಕಿ ಸುನಿತಾ, ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕ ಸಿ.ಎನ್.ರವಿ, ತಾಪಂ ಮಾಜಿ ಸದಸ್ಯರಾದ ಎಸ್.ರಾಮು, ಮಲ್ಲಿಕಾರ್ಜುನ್, ಎ.ಟಿ.ರಂಗಸ್ವಾಮಿ, ಜೆಡಿಎಸ್ ಮಹಿಳಾ ಘಟಕ ಅಧ್ಯಕ್ಷೆ ಪ್ರೀತಿ, ಟಿಹೆಚ್‌ಓ ಡಾ.ಶರತ್ ಬಾಬು, ಮೀನುಗಾರಿಕೆ ಇಲಾಖೆ ಸಹಾಯಕ ನಿರ್ದೇಶಕಿ ಪುಷ್ಪಲತಾ, ಮುಖಂಡರಾದ ಚಂದ್ರಶೇಖರಯ್ಯ, ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಸತೀಶ್ ಆರಾಧ್ಯ, ಕಸಾಪ ಅಧ್ಯಕ್ಷ ನವೀನ್, ಎಸಿಡಿಪಿಓ ಅಶೋಕ್, ಮೇಲ್ವಿಚಾರಕರಾದ ಸವಿತಾ, ಶ್ವೇತಾ, ಧನ್ಯರತಿ, ಸುನಿತಾ, ರೇಖಾ ಹಾಗೂ ಕಚೇರಿ ಸಿಬ್ಬಂದಿ ಮತ್ತು ತಾಲೂಕಿನ ಅಂಗನವಾಡಿ ಕಾರ್ಯಕರ್ತರು ಇದ್ದರು.

ಸೀಮಂತ ಕಾರ್ಯಕ್ರಮ ಉದ್ಘಾಟಿಸಿ ಶಾಸಕ ಕೆ. ಮಹದೇವ್



ಹಿರಿಯ ನಾಗರಿಕರ ಆರೈಕೆದಾರರಿಗೆ ಸನ್ಮಾನ



ಆರೋಗ್ಯ, ವೃದ್ಧಾಪ್ಯ ಮತ್ತು ಪುನಯೌವನಗೊಳಿಸು ವಿಕೆ ಕುರಿತು ಹಿರಿಯರಲ್ಲಿ ಅರಿವು ಮೂಡಿಸಲು ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಜೆಎಸ್‌ಎಸ್ ವೈದ್ಯಕೀಯ ಕಾಲೇಜು, ಹಿರಿಯರ ಸಹಾಯವಾಣಿ, ಜೆಎಸ್‌ಎಸ್ ಆಸ್ಪತ್ರೆ ಮತ್ತು ಎಆರ್‌ಡಿಎಸ್‌ಐ (ALZHEIMER'S & RELATED DISOR DERS SOCIETY OF INDIA)ನ ಮೈಸೂರು ವಿಭಾಗವು ಇತ್ತೀಚೆಗೆ ತಮ್ಮ ಸಭಾಂಗಣದಲ್ಲಿ ಸಮಗ್ರ ವಯೋಸಹಜ ಆರೈಕೆ ಕಾರ್ಯಕ್ರಮವನ್ನು ಆಯೋಜಿಸಿತ್ತು. ಈ ವೇಳೆ ವೃದ್ಧರ ಆರೈಕೆಯಲ್ಲಿ ತೊಡಗಿಸಿಕೊಂಡಿರುವ ಮೈಸೂರಿನ ತಪೋವನದ ಕೋವೈಕೇರ್‌ನ ವಿವಿನ್ ವಾಜ್‌ರ ಸೇವೆ ಗುರುತಿಸಿ, ಸನ್ಮಾನಿಸಲಾಯಿತು.

ಸಿ.ಆರ್.ಚಂದ್ರಶೇಖರ್‌ಗೆ ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿ ಪ್ರದಾನ ಮಾಡಿದ ಸಿಎಂ

ಬೆಂಗಳೂರು, ಅ.2– ಕರ್ನಾಟಕ ಸರಕಾರದ ವತಿಯಿಂದ ಈಗಾಗಲೇ 23 ಜಿಲ್ಲೆಗಳಲ್ಲಿ ಗಾಂಧಿಭವನ ನಿರ್ಮಿಸಲಾಗಿದ್ದು, ಇನ್ನೂ ಏಳು ಜಿಲ್ಲೆಗಳಲ್ಲಿ ಗಾಂಧಿ ಭವನ ನಿರ್ಮಾಣವಾಗಬೇಕಿದೆ. ಈ ಏಳು ಜಿಲ್ಲೆಗಳಲ್ಲಿ ಒಂದು ವರ್ಷದೊಳಗೆ ನಿರ್ಮಾಣ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.



ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕರ್ನಾಟಕ ಗಾಂಧಿಸ್ಮಾರಕ ನಿಧಿ ಸಂಯುಕ್ತ ಆಶ್ರಯದಲ್ಲಿ ನಗರದ ಗಾಂಧಿಭವನದ ಮಹಾದೇವ ದೇಸಾಯಿ ಸಭಾಂಗಣದಲ್ಲಿ ನಡೆದ ಮಹಾತ್ಮ ಗಾಂಧಿ ಜಯಂತಿ ಕಾರ್ಯಕ್ರಮಕ್ಕೆ ಸಿಎಂ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಸುಪ್ರಸಿದ್ಧ ಮನೋರೋಗ ತಜ್ಞ ಡಾ.ಸಿ.ಆರ್.ಚಂದ್ರಶೇಖರ್ ಅವರಿಗೆ ರಾಜ್ಯ ಸರಕಾರದ ಪ್ರತಿಷ್ಠಿತ 2022ನೇ ಸಾಲಿನ ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿ ಪ್ರದಾನ ಮಾಡಿದರು. ಉಳಿದ ಏಳು ಜಿಲ್ಲೆಗಳಲ್ಲಿ ಗಾಂಧಿಭವನ ನಿರ್ಮಾಣಕ್ಕೆ ಬೇಕಾದ ನಿವೇಶನ ಮತ್ತು ಅನುದಾನ ಒದಗಿಸಲು ಕ್ರಮ ವಹಿಸಲಾಗುವುದು ಎಂದು ಮುಖ್ಯಮಂತ್ರಿ ತಿಳಿಸಿದರು. ಖಾದಿ, ಗ್ರಾಮೀಣ ಕೈಗಾರಿಕೆಗೆ ಹೆಚ್ಚಿನ ಒತ್ತು ನೀಡುವ ನಿಟ್ಟಿನಲ್ಲಿ ವಿಶೇಷ ಕ್ರಮಗಳನ್ನು ಕೈಗೊಳ್ಳಲಾಗುವುದು; ಈ ಮೂಲಕ ಮಾರುಕಟ್ಟೆ ಒದಗಿಸಲಾಗುವುದು ಎಂದು ಹೇಳಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸುಪ್ರಸಿದ್ಧ ಮನೋರೋಗ ತಜ್ಞ ಡಾ.ಸಿ.ಆರ್.ಚಂದ್ರಶೇಖರ್ ಅವರಿಗೆ ಪ್ರಶಸ್ತಿ ಸಂದಿರುವುದರ ಬಗ್ಗೆ ಸಂತಸ ವ್ಯಕ್ತಪಡಿಸಿ ಅವರ ಸೇವೆಯನ್ನು ನಮ್ಮ ಸರಕಾರ ಬಳಸಿಕೊಳ್ಳಲಿದೆ ಎಂದರು.

ಚಿಕ್ಕಲ್ಲೂರು ಶ್ರೀ ಸಿದ್ದಪ್ಪಾಜಿ ದೇವಸ್ಥಾನಕ್ಕೆ ಆಡಳಿತಾಧಿಕಾರಿ ನೇಮಕ ಮಾಡಿಲ್ಲ: ಶ್ರೀ ಜ್ಞಾನಾನಂದ ಚೆನ್ನರಾಜೇ ಅರಸ್ ಸ್ಪಷ್ಟನೆ

ಮೈಸೂರು, ಅ.2– ಚಾಮರಾಜನಗರ ಜಿಲ್ಲೆಯ ಹನೂರು ತಾಲೂಕಿನ ಶ್ರೀ ಘನನೀಲ ಸಿದ್ದಪ್ಪಾಜಿ ಹಳೇ ಮಠ ದೇವಸ್ಥಾನಕ್ಕೆ ನಾನು ಯಾರೊಬ್ಬರನ್ನೂ ಆಡಳಿತಾಧಿಕಾರಿ ಆಗಿ ನೇಮಕ ಮಾಡಿಲ್ಲ ಎಂದು ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕು ರಾಜ ಬೊಪ್ಪೇಗೌಡನಪುರ ಕ್ಷೇತ್ರವಾದ ಶ್ರೀ ಧರೆಗೆ ದೊಡ್ಡವರು ಸಂಸ್ಥಾನ ಮಠದ ಶ್ರೀ ಧರೆಗೆ ದೊಡ್ಡವರ ಸಂಸ್ಥಾನ ಮಠದ ಪೀಠಾಧಿಪತಿ ಮತ್ತು ಆಡಳಿತಾಧಿಕಾರಿ ಬಿ.ಎಸ್.ಜ್ಞಾನಾನಂದ ಚೆನ್ನರಾಜೇ ಅರಸ್ ಸ್ವಾಮಿಗಳು ಸ್ಪಷ್ಟಪಡಿಸಿದ್ದಾರೆ.

ಚಾಮರಾಜನಗರ ಜಿಲ್ಲೆಯ ಹನೂರು ತಾಲೂಕಿನ ಚಿಕ್ಕಲ್ಲೂರು ಶ್ರೀ ಘನನೀಲ ಸಿದ್ದಪ್ಪಾಜಿ ಹಳೇ ಮಠ ದೇವಸ್ಥಾನ ಸೇರಿದಂತೆ, ಮೈಸೂರು ಜಿಲ್ಲೆಯ ಕೆ.ಆರ್. ನಗರ ತಾಲೂಕಿನ ಶ್ರೀ ಕ್ಷೇತ್ರ ಕಪ್ಪಡಿ, ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ಬಿ.ಜಿ.ಪುರ ಶ್ರೀ ಧರೆಗೆ ದೊಡ್ಡವರು ಮಂಟೇಲಿಂಗಯ್ಯ ಸಂಸ್ಥಾನ ಮಠ, ಮುಟ್ಟನ ಹಳ್ಳಿ ತೋಪಿನ ದೊಡ್ಡಮ್ಮ ತಾಯಿ ಕ್ಷೇತ್ರ, ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲೂಕಿನ ಕುರುಬನ ಕಟ್ಟೆ ಶ್ರೀ ಲಿಂಗಯ್ಯ ಚೆನ್ನಮ್ಮ ಗದ್ದುಗೆ ಕ್ಷೇತ್ರಗಳಿಗೆ ಶ್ರೀ ಶ್ರೀ ಶ್ರೀ ಜ್ಞಾನಾನಂದ ಚೆನ್ನರಾಜೇ ಅರಸ್ ಆದ ನಾನೇ ಪೀಠಾಧಿಕಾರಿ ಮತ್ತು ಆಡಳಿತಾಧಿಕಾರಿ ಆಗಿರುವೆ ಎಂದು ಅವರು ತಮ್ಮ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಇತ್ತೀಚಿನ ಕೆಲವು ದಿನಗಳಲ್ಲಿ ಚಿಕ್ಕಲ್ಲೂರು ಶ್ರೀ ಸಿದ್ದಪ್ಪಾಜಿ ಹಳೇ ಮಠ ದೇವಸ್ಥಾನದಲ್ಲಿ ಬಿ.ಪಿ. ಭರತ್ ಅರಸ್ ಎಂಬುವವರು ಆಡಳಿತಾಧಿಕಾರಿ ಎಂದು ಸ್ವಯಂ ಘೋಷಣೆ ಮಾಡಿಕೊಂಡಿದ್ದು, ಇತರೆ ವ್ಯಕ್ತಿಗಳು ದೇವಸ್ಥಾನ ವಿಚಾರದಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ ಎಂದು ತಿಳಿದುಬಂದಿದೆ. ಆದರೆ ನಾನು ಚಿಕ್ಕಲ್ಲೂರು ಶ್ರೀ ಸಿದ್ದಪ್ಪಾಜಿ ಹಳೇ ಮಠ ದೇವಸ್ಥಾನಕ್ಕೆ ಮಾರಮ್ಮ ಆಡಳಿತಾಧಿಕಾರಿ ಆಗಿ ನೇಮಕ ಮಾಡಿಲ್ಲ ಎಂದು ಹೇಳಿದ್ದಾರೆ.

ಆದ್ದರಿಂದ ಬಿ.ಪಿ. ಭರತ್ ಅರಸ್ ಸೇರಿದಂತೆ ಇತರೆ ವ್ಯಕ್ತಿಗಳ ಜೊತೆಗೆ ಯಾರೊಬ್ಬರೂ ದೇವಸ್ಥಾನಕ್ಕೆ ಸಂಬಂಧಿಸಿದಂತೆ ವ್ಯವಹಾರ ಮಾಡದಂತೆ ಸಮಸ್ತ ಭಕ್ತರ ಗಮನಕ್ಕೆ ತರಲಾಗಿದೆ. ದೇವಸ್ಥಾನ ಅಭಿವೃದ್ಧಿ ಸೇರಿದಂತೆ ಜಾತ್ರಾ ಸಿದ್ಧತೆಗಳ ಮೇಲುಸ್ತುವಾರಿಯನ್ನು ನನ್ನ ಧರ್ಮಪತ್ನಿಯಾದ ಶ್ರೀಮತಿ ಪಿ.ಕೆ. ಸನ್ಮತಿ ಜ್ಞಾನಾನಂದ ಚೆನ್ನರಾಜೇ ಅರಸ್ ಅವರು ನೋಡಿಕೊಳ್ಳುತ್ತಾರೆ ಎಂದು ತಿಳಿಸಿದ್ದಾರೆ.



ಬಿಳಿಕೆರೆ ಹೋಬಳಿ ಪ್ರೌಢಶಾಲಾ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಹುಣಸೂರು ತಾಲೂಕು ಹುಲ್ಲೇನಹಳ್ಳಿಯ ಶ್ರೀ ಲಕ್ಷ್ಮೀವೆಂಕಟೇಶ್ವರ ಪಬ್ಲಿಕ್ ಶಾಲೆ ವಿದ್ಯಾರ್ಥಿ ಜ್ಞಾನೇಶ್ ಚಿತ್ರಕಲಾ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ. ಈತ ಕೆ.ಜಿ. ಕೊಪ್ಪಲು ನಿವಾಸಿಗಳಾದ ಮಹದೇವು ಮತ್ತು ಶಿಲ್ಪ ದಂಪತಿ ಪುತ್ರ.

ಕಮ್ಮಟ ಆಯೋಜನೆ

ಮೈಸೂರು,ಅ.2– ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಅಂಗಸಂಸ್ಥೆ ವಿಜ್ಞಾನ್ ಪ್ರಸಾರ್ ಮತ್ತು ಕುವೆಂಪು ಭಾಷಾ ಭಾರತಿ ಇವರ ಸಹಯೋಗದೊಂದಿಗೆ ವಿಜ್ಞಾನ ಮತ್ತು ಪತ್ರಿಕೋದ್ಯಮ ಪದವೀಧರರಿಗಾಗಿ 'ವಿಜ್ಞಾನ ಮತ್ತು ತಂತ್ರಜ್ಞಾನ ಪಠ್ಯ ಅನುವಾದ' ವಿಷಯದ ಬಗ್ಗೆ ಎರಡು ದಿನಗಳ ಕಮ್ಮಟವನ್ನು ಪ್ರೊ.ಯು.ಆರ್.ರಾವ್. ವಿಜ್ಞಾನ ಭವನ, ಜಿ.ಕೆ.ವಿ.ಕೆ. ಆವರಣ,ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ, ವಿದ್ಯಾರಣ್ಯಪುರ ಪೋಸ್ಟ್, ಬೆಂಗಳೂರಿನಲ್ಲಿ ಆಯೋಜಿಸಲಾಗಿದೆ.

ಈ ಕಮ್ಮಟದಲ್ಲಿ ವಿಶೇಷ ಉಪನ್ಯಾಸಗಳು, ಅನುವಾದ ತಂತ್ರಜ್ಞಾನಗಳ ಟಿಪ್ಪಣಿ ಮತ್ತು ಅಭ್ಯಾಸ ಅಧಿವೇಶನಗಳನ್ನು ಏರ್ಪಡಿಸಲಾಗಿದ್ದು ಗರಿಷ್ಠ 30 ವಿದ್ಯಾರ್ಥಿಗಳು ಭಾಗವಹಿಸಬಹುದು ಆಸಕ್ತ ಅಭ್ಯರ್ಥಿಗಳು 2022 ಅಕ್ಟೋಬರ್ 8ನೇ ತಾರೀಖು ನೋಂದಾಯಿಸಿಕೊಳ್ಳಲು ಕೊನೆಯ ದಿನಾಂಕವಾಗಿದೆ ಎಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಎಐಸಿಸಿ ನಾಯಕ ರಾಹುಲ್ ಗಾಂಧಿಯವರ ಭಾರತ ಐಕ್ಯತಾ ಯಾತ್ರೆಯಲ್ಲಿ ಜಿಲ್ಲಾ ಪಂಚಾಯ್ತಿ ಮಾಜಿ ಅಧ್ಯಕ್ಷ ಕೆ.ಮರೀಗೌಡ ಭಾನುವಾರ ಹೆಜ್ಜೆ ಹಾಕಿದರು. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಪಕ್ಷ ನಾಯಕ ಸಿದ್ದರಾಮಯ್ಯ ಅವರುಗಳು ರಾಹುಲ್ ಗಾಂಧಿಯವರಿಗೆ ಮರೀಗೌಡರನ್ನು ಪರಿಚಯಿಸಿದರು.



ಮೈಸೂರು ಅರಮನೆ ಆವರಣದಲ್ಲಿ ಶನಿವಾರ ನಡೆದ ಪೊಲೀಸ್ ಸಮೂಹ ವಾದ್ಯ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರಿಗೆ ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ನೆನಪಿನ ಕಾಣಿಕೆ ನೀಡಿದರು. ಮೈಲ್ಯಾಕ್ ಅಧ್ಯಕ್ಷ ಆರ್.ರಘು, ಶಾಸಕ ಎಲ್.ನಾಗೇಂದ್ರ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಉಪಸ್ಥಿತರಿದ್ದರು.

ಚಿಗುರು ಕವಿಗೋಷ್ಠಿಯಲ್ಲಿ ಯುವ ಕವಿಗಳ ಕಲರವ

ಮೈಸೂರು, ಅ.2– ಇಡೀ ಜಗತ್ತನ್ನೇ ಎದುರಿಸಬಲ್ಲೇ ನನ್ನಪ್ಪ ನನ್ನೊಟ್ಟಿಗಿದ್ದರೆ ಎಂಬ ಸಾಲಿನೊಂದಿಗೆ ಅಪ್ಪನ ಮೇಲಿನ ಪ್ರೀತಿ ಹಾಗೂ ಈ ಜಗತ್ತಿಗೆ ತಾಯಿಯಷ್ಟೇ ತಂದೆಯ ಪಾತ್ರವೂ ಮುಖ್ಯವಾದುದ್ದು ಎಂಬುದನ್ನು ಬಿಂಬಿಸುವ ಯುವಕವಿ ದೀಕ್ಷಾ ಎಂಬುವರ ಕವಿತೆಗೆ ಕೇಳುಗರ ಕಿವಿನೆಟ್ಟಿತು.

ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಚಿಗುರು ಕವಿಗೋಷ್ಠಿಯಲ್ಲಿ ಇಂತಹ ಸಾಲುಗಳಿಂದ ಕೂಡಿದ ಕವಿತೆಯು ಯುವ ಕವಿಗಳಿಂದ ಹೊರಹೊಮ್ಮಿತು.

ಅಪ್ಪ ಅಮ್ಮ ದೇವರಲ್ಲ ಮುಕ್ಕೋಟಿ ದೇವರನ್ನೇ ಮೀರಿಸಿದವರು ಎಂದು ಹೇಳುವ ಮೂಲಕ ತಂದೆ ತಾಯಿ ಇಬ್ಬರ ಶ್ರಮವು ಒಂದೇ ಸಮನಾದವು ಎನ್ನುತ್ತಾ ಕವನ ವಾಚಿಸುತ್ತಾ ತಂದೆ ತಾಯಿಗೆ ಗೌರವ ಸೂಚಿಸಿದರೆ, ಮತ್ತೊಬ್ಬ ಕವಿಯೂ ಇಂದಿನ ಯುವಕರ ಟ್ರೆಂಡ್ ಎಂದೇ ಬಿಂಬಿತವಾಗಿರುವ ಗಡ್ಡದ ಮೇಲೆ ಕವನ ವಾಚಿಸುವ ಮೂಲಕ ಗಡ್ಡ ಬಿಟ್ಟಿರುವವರು ಯಾವೆಲ್ಲಾ ರೀತಿಯಾಗಿ ಮಾತುಗಳನ್ನು ಕೇಳಬಹುದು ಎಂಬುದನ್ನು ನಿಸ್ಸಾರವಾಗಿ ನುಡಿದುಬಿಟ್ಟರು.

ಅಂತೆಯೇ ಕುವೆಂಪು ಅವರ ವಿಶ್ವಮಾನವ ಕನಸ್ಸನ್ನು, ನಾ ಗೆದ್ದೆ, ನೀ ಗೆದ್ದೆ ಎಂಬ ಬಿರುದು ಭಾವಗಳು ಬೇಡವೋ ಮೂಢ ಎಂದು ಹೇಳಿದರೆ, ಮತ್ತೊಬ್ಬರೂ ಆನಂದ ಭಾಷ್ಪವಾಗಲೀ, ದುಃಖವಾಗಲೀ ಕಣ್ಣಂಚಿನಲ್ಲಿ ಕಾಣಿಸಿಕೊಳ್ಳುವ ಕಣ್ಣೀರಿನ ಬಗ್ಗೆ ಕವಿತೆಯನ್ನು ವಾಚಿಸಿದರು. ಹೀಗೆ ಜೀವನದಲ್ಲಿ ಉಂಟಾಗುವ ಜಂಜಾಟ, ಭವ್ಯ ಭವನ, ಜಗತ್ತಿಗೆಲ್ಲಾ ಆಹಾರ ಒದಗಿಸುವ ರೈತ ಹಾಗೂ ಮಹಿಳಾ ಸಬಲೀಕರಣ ಹೀಗೆ ಒಂದೊಂದು ಶೀರ್ಷಿಕೆಯನ್ನು ವೈಶಿಷ್ಟ್ಯ ಪೂರ್ಣವಾಗಿ ಹೊರಹೊಮ್ಮಿಸುವಂತಹ ಹಲವಾರು ಕವಿತೆಗಳು ಯುವಗೋಷ್ಠಿಯಲ್ಲಿ ಸಭಿಕರ ಮನಸೂರೆ ಮಾಡಿತು.

ಇದಕ್ಕೂ ಮುನ್ನ ಕಾರ್ಯಕ್ರಮವನ್ನು ಉದ್ಘಾಟಿಸಿದ ಶಾಸಕರಾದ ಎಲ್.ನಾಗೇಂದ್ರ ಅವರು ಮಾತನಾಡಿ, ಕಂಪ್ಯೂಟರ್ ಯುಗದಲ್ಲಿಯೂ ನಮ್ಮ ನಾಡಿನ ಕಲೆ, ಸಂಸ್ಕೃತಿ, ಆಚಾರ–ವಿಚಾರವನ್ನು ಕವಿತೆಯ ಮೂಲಕ ವಾಚಿಸಲು ಆಸಕ್ತರಾಗಿರುವ ಯುವ ಕವಿಗಳು ಭಾರತದ ವಿವಿಧತೆಯಲ್ಲಿ ಏಕತೆಯನ್ನು ಬಿಂಬಿಸಲು ಸಿದ್ಧರಾಗುವಂತೆ ಭಾಸವಾಗುತ್ತಿದೆ ಎಂದರು.

ಜಿಲ್ಲೆಯಿಂದ ಜಿಲ್ಲೆಗೆ ಆಹಾರ, ಭಾಷೆ ಹಾಗೂ ಸಂಸ್ಕೃತಿಗಳು ವೈವಿಧ್ಯಮಯವಾಗಿರುತ್ತದೆ. ಇದೆಲ್ಲದರ ಮಧ್ಯ ಹಳೇ ಬೇರು ಹೊಸ ಚಿಗುರು ಎಂಬುದನ್ನು ಸಾಬೀತು ಪಡಿಸುವ ಮೂಲಕ ನಮ್ಮ ಕನ್ನಡ ಭಾಷೆಯನ್ನು ಎತ್ತರೆತ್ತರಕ್ಕೆ ಹಾರಿಸಲು ಜ್ಞಾನಪೀಠ ಪುರಸ್ಕೃತ ಕವಿಗಳಂತೆ ಇಂದಿನ ಯುವ ಕವಿಗಳು ಎತ್ತರಕ್ಕೆ ಬೆಳೆಯಲು ಮುಂದಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಖ್ಯಾತ ಕವಿ ಮತ್ತು ವಿಮರ್ಶಕರಾದ ಡಾ.ಸಿ.ಆರ್.ಸಿದ್ದಾಶ್ರಮ ಪಾಲ್ಗೊಂಡಿದರೆ, ಇದರ ಅಧ್ಯಕ್ಷತೆಯನ್ನು ಖ್ಯಾತ ಕವಿಯಿತ್ರಿ ಜ್ಯೋತಿ ಗುರುಪ್ರಸಾದ್ ಅವರು ವಹಿಸಿಕೊಂಡರು. ಈ ವೇಳೆ ದಸರಾ ವಿಶೇಷಾಧಿಕಾರಿಯಾದ ಡಾ.ಎಂ.ದಾಸೇಗೌಡ ಇನ್ನಿತರರಿದ್ದರು.

ವೈದ್ಯರು ರೋಗಿಗಳ ನಡುವೆ ಫಾರ್ಮಸಿಸ್ಟ್‌ಗಳು ಸೇತುವೆಯಾಗಿ ಕಾರ್ಯನಿರ್ವಹಣೆ

ಶಾಸಕ ಸಾ.ರಾ. ಮಹೇಶ್ ಪ್ರಶಂಸೆ

ಮೈಸೂರು, ಅ.2 (ಎಂಕೆ)– ಫಾರ್ಮಸಿಸ್ಟ್‌ಗಳು ವೈದ್ಯರು ಹಾಗೂ ರೋಗಿಗಳ ನಡುವೆ ಸೇತುವೆಯಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಶಾಸಕ ಸಾ.ರಾ.ಮಹೇಶ್ ಅಭಿವ್ಯಕ್ತಪಡಿಸಿದರು.



ಮೈಸೂರಿನ ದೇವೇಗೌಡ ವೃತದ ಬಳಿಯಿರುವ ಕಾವೇರಿ ಫಾರ್ಮಸಿ ಕಾಲೇಜಿನಲ್ಲಿ ಇತ್ತೀಚೆಗೆ ಆಯೋಜಿಸಿದ್ದ 'ವಿಶ್ವ ಫಾರ್ಮಸಿಸ್ಟ್ ದಿನಾಚರಣೆ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಫಾರ್ಮಸಿಸ್ಟ್‌ಗಳು ರೋಗಿಗಳ ಚಿಕಿತ್ಸೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ರೋಗಿಗಳಿಗೆ ನೀಡುವ ಚಿಕಿತ್ಸೆ ಪರಿಪೂರ್ಣವಾಗಬೇಕಾದರೆ ಪಾರ್ಮಸಿಸ್ಟ್ ಗಳ ಸೇವೆ ಅತ್ಯಗತ್ಯವಾಗಿದೆ ಎಂದು ತಿಳಿಸಿದರು.

ಕಾವೇರಿ ಸಮೂಹ ಸಂಸ್ಥೆಗಳ ಸಂಸ್ಥಾಪಕ ಮತ್ತು ಅಧ್ಯಕ್ಷ ಡಾ.ಜಿ.ಆರ್.ಚಂದ್ರಶೇಖರ್ ಮಾತನಾಡಿ, ಫಾರ್ಮಸಿಸ್ಟ್‌ಗಳು ವೈದ್ಯರಂತೆಯೇ ಸಮಾಜಕ್ಕೆ ಅಪಾರ ಕೊಡುಗೆಯನ್ನು ನೀಡುತ್ತಿದ್ದಾರೆ. ಜಾಗತಿಕ ಸವಾಲುಗಳೊಂದಿಗೆ ಸ್ಪರ್ಧಿಸಲು ವಿದ್ಯಾರ್ಥಿಗಳು ಕೌಶಲ್ಯತೆಗಳನ್ನು ಮೈಗೂಡಿಸಿಕೊಳ್ಳಬೇಕು. ವೃತ್ತಿ ಅನುಭವದ ಜೊತೆಗೆ ಕೌಶಲ್ಯತೆ ಇದ್ದವರು ಎಲ್ಲಿ ಬೇಕಾದರೂ ಉದ್ಯೋಗ ಪಡೆದುಕೊಳ್ಳುವ ಅರ್ಹತೆ ಹೊಂದಿರುತ್ತಾರೆ. ಆದ್ದರಿಂದ ವಿದ್ಯಾರ್ಥಿಗಳು ಓದಿನ ಜೊತೆ ಜೊತೆಗೆ ಕೌಶಲ್ಯತೆಯತ್ತಲೂ ಗಮನ ಹರಿಸಬೇಕು ಎಂದು ಕಿವಿ ಮಾತು ಹೇಳಿದರು.

ಶಿಕ್ಷಣ ತಜ್ಞ ಡಾ.ಬಿ.ಜಿ.ನಾಗಾವಿ, ರಿಕೆಟ್ ಬೆನ್ಕೈಜರ್ ಪ್ರೈಲಿಮಿಟೆಡ್‌ನ ಸಿ.ಕೆ ಮೋಹನ್, ಡ್ರಗ್ಸ್ ಕಂಟ್ರೋಲ್ ಡಿಪಾರ್ಟ್ಮೆಂಟ್‌ನ ಸಹಾಯಕ ಡ್ರಗ್ ಕಂಟ್ರೋಲರ್ ಡಾ.ಎಸ್.ನಾಗರಾಜ, ಶ್ರೀಲಕ್ಷ್ಮೀ ಫಾರ್ಮಾ ಪ್ರೈ. ಲಿಮಿಟೆಡ್‌ನ ಲಕ್ಷ್ಮೀಶ, ಸೇಂಟ್ ಶಿವಾನಂದ ವೈದ್ಯಕೀಯ ಸಂಸ್ಥೆಯ ಹೆಚ್.ಬಿ. ಚಂದ್ರಶೇಖರ್, ಫಾರ್ಮಾಸಿಸ್ಟ್ ಶಾಂತಮ್ಮ, ಕಾವೇರಿ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲ ಪ್ರೊ.ವಿಷ ಕಂಠೇಗೌಡ, ಪ್ರಾಧ್ಯಾಪಕ ಡಾ.ಮಂಜುನಾಥ್, ಡೀನ್ ಡಾ.ಗುರುಕರ್ ಮ್ಯಾಥ್ಯೂಸ್, ಪ್ರಾಧ್ಯಾಪಕ ಡಾ.ಕಿರಣ್ ಕುಮಾರ್, ಪ್ರಾಧ್ಯಾಪಕ ರವೀಂದ್ರ ಮತ್ತಿತರರು ಉಪಸ್ಥಿತರಿದ್ದರು.